
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಆಗಸ್ಟ್ 27, 2008 ರೂ. 12/-



ನ್ಸಾರ್‌ಗೂ
ಲಾಯಕ್

ದೇನು
ತ್ರ

ಮಾದೇಶ

ಸಾಪ ಚುನಾವಣೇಲಿ ಜಾತಿ, ಮಠ, ಹಣ!

ಳವಳ್ಳಿ : ದಂಧೆಕೋರರ ಆಗರ

ಗಲಕೋಟೆ ಬಿಜೆಪಿ ಈಗ ಒಡೆದ ಮನೆ

ಪ್ಪಳ : ಇಳಿದು ಬಾ ಮಾಲತಿ ಇಳಿದು ಬಾ

ೋಕಾ ಎಂಬ ಖಾಕಿ ಭಯೋತ್ಪಾದನೆ

ಬಡ ಮಹಿಳೆಯರು ತಮ್ಮ ಗರ್ಭವನ್ನೇ ಬಾಡಿಗೆ ನೀಡಿದಾಗ...

ಅವತ್ತು ನಾನು ಕಾಫಿ ಕುಡಿಯುತ್ತಾ ಕಬೀರ್ ಸಿಗರೇಟ್ ಸೇದುತ್ತಾ ಕೋಶಿಸ್‌ನಲ್ಲಿ ಕುಳಿತಿದ್ದಾಗ ನಾನು ಇದ್ದಕ್ಕಿದ್ದಂತೆ "ಕಬೀರ್, ನೀನು ಮದುವೆಯಾದ ನಂತರ ಅಕಸ್ಮಾತ್ ಡಾಕ್ಟರ್ ನಿನಗೆ ಮತ್ತು ನಿನ್ನ ಹೆಂಡತಿಗೆ ಮಕ್ಕಳಾಗುವುದಿಲ್ಲ ಅಂತ ಹೇಳಿದರೆ ಏನು ಮಾಡು ತ್ತೀಯಾ" ಎಂದು ಕೇಳಿದೆ.

"ನನ್ನನೇನು ಕೇಳ್ತಿಯಾ, ನಾವು ಏನು ಮಾಡಬೇಕು ಅನ್ನಿಸುತ್ತೆ ನಿನಗೆ?" ಎಂದ ಕಬೀರ್ ಮುಗುಳ್ನಗುತ್ತಾ.

ಆತನ ಮಾತಿನ ಧಾಟಿ ನನಗೆ ಗೊತ್ತಿದ್ದರಿಂದ ಅದಕ್ಕೆ ಅಷ್ಟು ಸುಲಭವಾಗಿ ಬೀಳಲಿ ನಾನು. ಆದ್ದರಿಂದ "ನೋಡು, ನಮ್ಮ ದೇಶದಲ್ಲಿ ಅದೆಷ್ಟೋ ಅನಾಥ ಮತ್ತು ನಿರ್ಗತಿಕ ಮಕ್ಕಳು ಇವೆ. ತಂದೆ ಮತ್ತು ತಾಯಿತನ ಅಂದರೆ ಬರೀ ಮಕ್ಕಳನ್ನು ಹಡೆಯುವುದಲ್ಲ, ಬದಲಾಗಿ ಮಕ್ಕಳಿಗೆ ಸೂಕ್ತವಾದ ಅಪ್ಪ ಮತ್ತು ಅಮ್ಮ ಆಗಿರುವುದು..." ಎಂದು ನಾನು ಹೇಳುತ್ತಿರುವುದನ್ನು ಮುಗಿಸುವ ಮುನ್ನವೇ ಕಬೀರ್,

"ಹಾಗಾದರೆ ಮಕ್ಕಳನ್ನು ದತ್ತು ತಗೊಳ್ಳೋಣ? ನಿನಗೊಬ್ಬ ಮಗ, ನನಗೊಬ್ಬಳು ಮಗಳು. ಮಿನಿಮಮ್ ಇಬ್ಬರು ಮಕ್ಕಳು ಬೇಕು" ಎಂದ. ಅವನ ಮಾತುಗಳಿಂದ ನನಗರಿವಿಲ್ಲದಂತೆ ನನ್ನ ಮುಖ ಕೆಂಪೇರಿತು. ಅದನ್ನು ನೋಡಿ "ಏನಿದು ಶಾರೂ, you are blushing" ಎಂದು ಚುಡಾಯಿಸಿದ.

"ಬ್ಲಷ್, ಗಿಷ್ ಎಂಥದ್ದೂ ಇಲ್ಲ, ಕಾಫಿ ಸ್ವಲ್ಪ ಖಾರವಾಗಿದೆ" ಎಂದು ನಾನು ಹೇಳಿ ಇಬ್ಬರೂ ನಕ್ಕೆವು. ಅದೇ ಹೊತ್ತಿಗೆ ಕಬೀರನ ಸಹೋದ್ಯೋಗಿಗಳಾದ ತೇಜು ಮತ್ತು ಭಾಗಿ ಬಂದರು. "ಏನಿದು ಇಬ್ಬರೂ ತುಂಬಾ ಎಂಜಾಯ್ ಮಾಡುತ್ತಿರುವಂತಿದೆ?" ಎಂದು ತೇಜು ಕೇಳಿದ.

ತೇಜು ಮತ್ತು ಭಾಗಿ ಕಳೆದೆರಡು ವರ್ಷಗಳಿಂದ ಪ್ರೀತಿಸುತ್ತಿದ್ದು ಸದ್ಯದಲ್ಲೇ ಮದುವೆಯಾಗಲು ನಿರ್ಧರಿಸಿದ್ದರು. ಅವರನ್ನು ನೋಡಿ ಕಬೀರ್ "Come, ನಮ್ಮ ಜೊತೆ ಕಾಫಿ ಕುಡಿಯಿರಿ. ಈಗತಾನೇ ಶಾರೂ ಒಂದು hypothetical ಪ್ರಶ್ನೆ ಕೇಳಿದಳು" ಎನ್ನುತ್ತಾ ನನ್ನತ್ತ ನೋಡಿದ. ನಮ್ಮ ಸಂಭಾಷಣೆ ಬೇರೆಯವರಿಗೆ ಗೊತ್ತಾಗಬಾರದೆಂದು ನಾನು ಅವನತ್ತ ನನ್ನ ಕಣ್ಣುಗಳನ್ನು ಅಗಲಿಸಿದೆ. ಅದನ್ನು ಅರ್ಥಮಾಡಿಕೊಂಡ ಕಬೀರ್ "ಅವಳ ಪ್ರಶ್ನೆ ಏನೆಂದರೆ ಓರ್ವ ದಂಪತಿಗೆ ಮಕ್ಕಳಾಗಲ್ಲ ಎಂದು ಡಾಕ್ಟರ್ ಹೇಳಿದರೆ ಅವರೇನು ಮಾಡಬೇಕು?" ಎಂದು ಬದಲಾಯಿಸಿದ.

ಕೂಡಲೇ ಭಾಗಿ ನನ್ನ ವಾದದ ಪರವಹಿಸಿ "ದತ್ತು ತೆಗೆದುಕೊಳ್ಳುವ ಆಯ್ಕೆ ಇದ್ದೇ ಇರುತ್ತದೆ" ಎಂದಳು. ಅದಕ್ಕೆ ತೇಜು "ಅದು ಸರಿ ಭಾಗಿ, ಆದರೆ ಕೆಲ ಗಂಡಸರು ಇರುತ್ತಾರಲ್ಲಾ? ತಮ್ಮ ರಕ್ತದಿಂದಲೇ ಹುಟ್ಟುವ ಮಗು ಬೇಕು ಎನ್ನುವವರು. ಹಿಂದೆಲ್ಲಾ ಈ ಕಾರಣ ಕ್ಕಾಗಿಯೇ ತಮ್ಮ ಹೆಂಡತಿಯನ್ನು ತೊರೆದು ಬೇರೆಯವ ರನ್ನು ಮದುವೆಯಾದ ಗಂಡಸರ ಬಗ್ಗೆ ಕೇಳಿಲ್ಲವೆ?" ಎಂದ.

"ಆದರೆ ಈಗ ಕಾಲ ಬದಲಾಗಿದೆ" ಎಂದ ಕಬೀರ್,

"ಜೊತೆಗೆ ತಂತ್ರಜ್ಞಾನ ಕೂಡ. ಅಂದಹಾಗೆ ಈ ಚರ್ಚೆ ಶುರುವಾಗಿದ್ದು ಯಾಕೆ?" ಎಂದು ಭಾಗಿ ಸಹಜ ಕುತೂಹಲದಿಂದ ಕೇಳಿದಳು. ಮೂವರೂ ನನ್ನತ್ತ ನೋಡಿದಾಗ "ಯಾಕೂ ಇಲ್ಲ, ಇತ್ತೀಚೆಗೆ ಜೈಪುರದಲ್ಲಿ ಬಾಡಿಗೆ ಗರ್ಭದಲ್ಲಿ ಹುಟ್ಟಿದ ಮಗುವೊಂದರ ಬಗ್ಗೆ ಇವತ್ತು ಪೇಪರ್‌ನಲ್ಲಿ ಓದಿದೆ. ಅದು ನೆನಪಾಯಿತು" ಅಂದೆ.

"ಹಾ, ಮಾಂಜಿ ಎಂಬ ಜಪಾನಿ ಮಗುವಿನ ಕತೆ" ಎಂದ ಕಬೀರ್.

"ಒಲಿಂಪಿಕ್ಸ್ ನಡೀತಾ ಇರೋದ್ರಿಂದ ನಾನು ಬರೀ sports ಪುಟಗಳನ್ನೇ ನೋಡುತ್ತಿದ್ದೇನೆ. ಯಾರಿದು ಮಾಂಜಿ, ಏನು ಆಕೆಯ ಕತೆ?" ಎಂದು ತೇಜು ಕೇಳಿದ.

"ನಿನ್ನನ್ನು ಕಟ್ಟಿಕೊಂಡು ನಾನು ಏನೇನನ್ನು ಅನುಭವಿಸಬೇಕಿದೆಯೋ" ಎಂದು ತಮಾಷೆ ಮಾಡಿದ ಭಾಗಿ "ಅವಳ ಬಗ್ಗೆ ನಾನು ಹೇಳುತ್ತೇನೆ. ಜಪಾನಿನಲ್ಲಿ ಯಮದಾ ಎಂಬ ದಂಪತಿಗಳಿದ್ದರು. ಅವರಲ್ಲಿ ಹೆಂಡತಿಗೆ ಮಕ್ಕಳಾಗುವುದಿಲ್ಲ ಎಂದು ಡಾಕ್ಟರ್ ಹೇಳಿದರು. ಆದರೆ ದತ್ತು ತೆಗೆದುಕೊಳ್ಳಲು ಸಿದ್ಧನಿರದ ಗಂಡ ತನ್ನ ರಕ್ತವನ್ನು ಹೊತ್ತಿರುವ ಮಗುವೇ ಬೇಕೆಂದ. ಆಗ ಅವರ ಗಮನಕ್ಕೆ ಬಂದದ್ದು ಭಾರತದ ಆನಂದ್ ಎಂಬ ಚಿಕ್ಕ ನಗರ. ಅಲ್ಲಿ ನಯನಾ ಎಂಬ ವೈದ್ಯೆ ಇದ್ದಾಳೆ. ಆಕೆ ನಡೆಸುತ್ತಿರುವ ನರ್ಸಿಂಗ್ ಹೋಂಗೆ ಇವತ್ತು ಅಮೆರಿಕಾ, ಇಂಗ್ಲೆಂಡ್, ದುಬೈ, ಸಿಂಗಪೂರ್ ತರಹದ ದೇಶಗಳಿಂದ ಜನ ಬಂದು ಮಕ್ಕಳನ್ನು ಪಡೆದು ಹಿಂದಿರುಗುತ್ತಿದ್ದಾರೆ" ಎಂದಳು ಭಾಗಿ.

"ಹೇಗೆ?" ಎಂದ ತೇಜು ಅಚ್ಚರಿಯಿಂದ.


"ಹೇಗೆ ಅಂದರೆ, ನಯನಾ ಪುರುಷನ sperm ಪಡೆದು ಅದನ್ನು ಮಹಿಳೆಯೊಬ್ಬಳ ಅಂಡಾಣು ಜೊತೆಗೆ ಸೇರಿಸಿ ಲ್ಯಾಬರೇಟರಿಯಲ್ಲೇ ಭ್ರೂಣವನ್ನು ತಯಾರಿಸುತ್ತಾಳೆ. ಆ ಭ್ರೂಣವನ್ನು ಮತ್ತೊಬ್ಬ ಮಹಿಳೆಯ ಗರ್ಭದಲ್ಲಿಟ್ಟು ಮಗು ಆಗುವಂತೆ ಮಾಡುತ್ತಾಳೆ. ಎಲ್ಲವೂ ಒಂದು ವರ್ಷದಲ್ಲಿ ಲೆಕ್ಕಾಚಾರದಂತೆ ನಡೆದು ಇಪ್ಪತ್ತು ಲಕ್ಷ ರೂಪಾಯಿಗಳಿಗೆ ಮಗುವೊಂದು ಜನ್ಮ ನೀಡುತ್ತದೆ. ಅದನ್ನು ಅಪ್ಪ ಅಮ್ಮ ತಮ್ಮ ದೇಶಕ್ಕೆ ತೆಗೆದುಕೊಂಡು ಹೋಗುತ್ತಾರೆ. ಇದರಿಂದಾಗಿ ದತ್ತು ತೆಗೆದುಕೊಳ್ಳಲು ಹಲವು ವರ್ಷಗಳ ಕಾಲ ಕಾಯುವುದೂ ಉಳಿಯುತ್ತದೆ, ಮಾತ್ರವಲ್ಲ ತಮ್ಮ ರಕ್ತವನ್ನೇ ಹೊಂದಿರುವ ಮಗುವೂ ದೊರಕುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಅವರ ದೇಶಗಳಲ್ಲಿಗಿಂತಲೂ ಕಡಿಮೆ ಖರ್ಚಿನಲ್ಲಿ ಮಗುವೊಂದು ಸಿಗುತ್ತದೆ. ಇಂತಹ ಡೀಲ್‌ನಿಂದ ಆಕರ್ಷಿತರಾಗಿ ಅದೆಷ್ಟೋ ಜನ ಆನಂದ್‌ನಲ್ಲಿ ಮಕ್ಕಳನ್ನು ಪಡೆದು ಹಿಂದಿರುಗುತ್ತಿದ್ದಾರೆ" ಎಂದು ಭಾಗಿ ವಿವರಿಸಿದಳು.

"ಹಾಗಾದರೆ ಯಮದಾ ದಂಪತಿಗಳಿಗೆ ಸಮಸ್ಯೆ ಆಗಿದ್ದು ಎಲ್ಲಿ?" ಎಂದು ತೇಜ.



ಆಗ ಕಬೀರ್ "ಸಮಸ್ಯೆ ಆಗಿದ್ದು ಯಾವಾಗ ಅಂದರೆ ಅವರ ಮಗು ಇನ್ನೂ ಬಾಡಿಗೆ ತಾಯಿಯ ಗರ್ಭದಲ್ಲಿರುವಾಗಲೇ ಯಮದಾನ ಹೆಂಡತಿ ಅವನಿಗೆ ಡೈವೋರ್ಸ್ ನೀಡಿದಳು. ಭಾರತದ ಕಾನೂನು ಹೇಗಿದೆ ಎಂದರೆ ಇಲ್ಲಿ ಯಾರು ಬೇಕಾದರೂ ಬಂದು ಗರ್ಭವನ್ನೇ ಬಾಡಿಗೆ ಮೇಲೆ ಪಡೆದು ಮಕ್ಕಳನ್ನು ರೆಡಿಮೇಡ್ ಆಗಿ ತೆಗೆದುಕೊಳ್ಳಬಹುದು. ಆದರೆ ಜೀವಂತ ಮಕ್ಕಳನ್ನು ಏಕಾಂಗಿ ಪುರುಷರಿಗೆ ಅದು ಅವರದೇ ಮಗುವಾಗಿದ್ದರೂ ದತ್ತು ಕೊಡುವುದಿಲ್ಲ" ಎಂದು ನಕ್ಕ.

"ಈಗ ಅದು ಹೇಗೋ ಆ ಒಂದು ತಿಂಗಳ ಮಾಂಜಿ ಎಂಬ ಮಗುವನ್ನು ಯಮದಾನಿಗೆ ನೀಡಲು ಸರ್ಕಾರ ಒಪ್ಪಿದೆ. ಆದರೆ ನನಗೆ ಬೇಸರ ತಂದ ವಿಷಯ ಯಾವುದು ಗೊತ್ತಾ? ಆ ನಯನಾ ಎಂಬ ವೈದ್ಯೆ ಬಡ ಹೆಣ್ಣುಮಕ್ಕಳನ್ನು ಕರೆತಂದು ಅವರ ಗರ್ಭವನ್ನು ವಿದೇಶೀಯರಿಗೆ ಮತ್ತು ಇತರರಿಗೆ ಬಾಡಿಗೆ ಮೇಲೆ ನೀಡುವಂತೆ ಮಾಡುತ್ತಾಳೆ. ಆಕೆಯ ನರ್ಸಿಂಗ್ ಹೋಮ್‌ನಲ್ಲಿ ಯಾವ ಕ್ಷಣದಲ್ಲಾದರೂ ಐವತ್ತಕ್ಕಿಂತಲೂ ಹೆಚ್ಚು ಬಸುರಿಯರಿರುತ್ತಾರಂತೆ. ಅವರೆಲ್ಲಾ ಬಡ ಮಹಿಳೆಯರು. ಅವರ ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡು ಇತರರಿಗೆ ಮಕ್ಕಳನ್ನು ಹಡೆದು ಕೊಡುವ ಫ್ಯಾಕ್ಟರಿಯನ್ನೇ ನರ್ಸಿಂಗ್ ಹೋಮ್ ನೆಪದಲ್ಲಿ ನಡೆಸುತ್ತಿದ್ದಾಳೆ" ಎಂದೆ.



"ಹೌದು" ಎಂದ ಭಾಗಿ "ಈ ನಯನಾ ಒಮ್ಮೆ ಏನು ಮಾಡಿದಳು ಗೊತ್ತಾ, ಬೇರೆಯವರ ಮಕ್ಕಳನ್ನು ತಮ್ಮ ಗರ್ಭದಲ್ಲಿ ಹೊತ್ತಿರುವ ಈ ಬಡ ಮಹಿಳೆಯರಿಂದ ಪತ್ರಿಕಾಗೋಷ್ಠಿ ನಡೆಸಿ ಅವರೆಲ್ಲಾ ಒಂದು ಪುಣ್ಯದ ಕೆಲಸ ಮಾಡುತ್ತಿದ್ದಾರೆಂದೂ, ಮಕ್ಕಳಾಗದವರಿಗೆ ಮಕ್ಕಳನ್ನು ಹೆತ್ತು ಕೊಡುತ್ತಿದ್ದಾರೆಂದೂ ಹೇಳಿಸಿದಳು."

"ನಿಜ, ಬಹಳಷ್ಟು ಜನಕ್ಕೆ ಮಕ್ಕಳು ಬೇಕು ಎಂಬ ಆಸೆ ಇರುತ್ತೆ, ಅಂಥವರಿಗಾಗಿ ನಿಸ್ವಾರ್ಥವಾಗಿ ಮಕ್ಕಳನ್ನು ಹಡೆದು ಕೊಟ್ಟರೆ ಸಮಸ್ಯೆ ಇರಲ್ಲ, ಆದರೆ ನಯನಾಳ ಬೇಬಿ ಫ್ಯಾಕ್ಟರಿಯಲ್ಲಿ ಮಹಿಳೆಯರ ಬಡತನವನ್ನೇ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಆ ಮಹಿಳೆಯರಿಗೆ ಹಣ ನೀಡುವುದಿಲ್ಲ, ಆದರೂ ಈ 'ಪುಣ್ಯ ಕಾರ್ಯ' ಮಾಡಿ ಎಂದು ಕೇಳಿದರೆ ಒಬ್ಬರೂ ಮುಂದೆ ಬರುವುದಿಲ್ಲ ಅನ್ನೋದು ಗ್ಯಾರಂಟಿ" ಎಂದೆ ನಾನು.

"ಛೆ, ಆ ಮಹಿಳೆಯರು ಎಷ್ಟು ಅಮಾಯಕರು ಗೊತ್ತಾ? ಹೀಗೆ ಒಂಭತ್ತು ತಿಂಗಳು ಬೇರೆಯವರ ಮಗುವನ್ನು ತಮ್ಮ ಗರ್ಭದಲ್ಲಿ ಹೊತ್ತು ಕೊಟ್ಟರೆ ಅದರಿಂದ ಬರುವ ಆದಾಯ ಎಷ್ಟು ದೊಡ್ಡ ಮೊತ್ತ ಎಂದರೆ ಅವರು ಜೀವನವಿಡೀ ಕೂಲಿ ಮಾಡಿದರೂ ಅಷ್ಟು ಹಣ ಗಳಿಸಲು ಸಾಧ್ಯವಿಲ್ಲ, ಅದೆಷ್ಟೋ ಮಹಿಳೆಯರು ಹೀಗೆ ತಮ್ಮ ಗರ್ಭವನ್ನೇ ಬಾಡಿಗೆ ನೀಡಿ ತಮ್ಮ ತಲೆ ಮೇಲೊಂದು ಸೂರು, ತಮ್ಮ ಮಕ್ಕಳಿಗೆ ಪೌಷ್ಠಿಕ ಆಹಾರ ಮತ್ತು ಒಳ್ಳೆಯ ಶಾಲೆಯಲ್ಲಿ ವಿದ್ಯೆ ನೀಡುತ್ತಿದ್ದಾರೆ. ಅದಕ್ಕೆ ಇವತ್ತು ನಯನಾಳ ನರ್ಸಿಂಗ್ ಹೋಮ್‌ನಲ್ಲಿ ತಮ್ಮ ಗರ್ಭವನ್ನು ಬಾಡಿಗೆ ನೀಡಲು ನಾ ಮುಂದು, ತಾಮುಂದು ಎಂದು ಮಹಿಳೆಯರು ಸಾಲುಗಟ್ಟಿ ನಿಂತಿದ್ದಾರಂತೆ" ಎಂದಳು ಭಾಗಿ.

"ಬಡತನ ಎಷ್ಟು ಕ್ರೂರವಾದದ್ದು, ತಮ್ಮ ಬದುಕಿಗಾಗಿ, ಮಕ್ಕಳ ಭವಿಷ್ಯಕ್ಕಾಗಿ ನಮ್ಮ ದೇಶದಲ್ಲಿ ಕಿಡ್ನಿ ಮಾರಾಟದಿಂದ ಹಿಡಿದು ಗರ್ಭವನ್ನು ಬಾಡಿಗೆ ನೀಡುವ ಮಟ್ಟಕ್ಕೂ ನಮ್ಮ ಜನರನ್ನು ಇಳಿಸಿದೆ" ಎಂದ ಕಬೀರ್.

"ತಂತ್ರಜ್ಞಾನ ಇನ್ನೂ ಬೆಳೆದಂತೆ ಏನೇನಾಗಬಹುದು ಗೊತ್ತಾ? ಒಂಭತ್ತು ತಿಂಗಳ ಕಾಲ ಗರ್ಭಿಣಿ ಆಗಿರುವುದು ಕಷ್ಟ, ಮಗುವನ್ನು ಹೆತ್ತ ನಂತರ ದೇಹದ ತೂಕದಿಂದ ಹಿಡಿದು ಹಲವಾರು ಸಮಸ್ಯೆಗಳಿರುತ್ತವೆ. ಆದ್ದರಿಂದ ನಾಳೆ ಶ್ರೀಮಂತ ಮಹಿಳೆಯರು ತಮಗೆ ಆ ತಾಪತ್ರಯವೆಲ್ಲಾ ಬೇಡ, ಭಾರತದಂತಹ ದೇಶಗಳ ಬಡ ಮಹಿಳೆಯರನ್ನೇ ತಮ್ಮ ಮಕ್ಕಳನ್ನು ಹೆರುವ ಯಂತ್ರಗಳಾಗಿ ಉಪಯೋಗಿಸಿಕೊಳ್ಳಲಾರಂಭಿಸುತ್ತಾರೆ. ಹೀಗೆ ಬೇಡಿಕೆ ಹೆಚ್ಚಾದಂತೆ ಬೇಬಿ ಫ್ಯಾಕ್ಟರಿಗಳ ಸಂಖ್ಯೆಯೂ ಹೆಚ್ಚಾಗುತ್ತದೆ. ಆಗ ಬಡ ಮಹಿಳೆಯರನ್ನು exploit ಮಾಡುವ ಜನ ಅವರ ಸಾವಿಗೂ ಕಾರಣರಾಗುತ್ತಾರೆ" ಎಂದೆ.

"ಇದೂ ಒಂದು ರೀತಿಯಲ್ಲಿ BPO ವ್ಯವಹಾರವೇ. ಶ್ರೀಮಂತ ದೇಶಗಳಲ್ಲಿನ ಜನ ಮಾಡದಿರುವ ಕೂಲಿ ಕೆಲಸವನ್ನು ನಮ್ಮ BPO ಗಳಲ್ಲಿ ಮಾಡಲಾಗುತ್ತಿದೆ. ಮಕ್ಕಳನ್ನು ಹೆರುವ ಕೆಲಸವೂ ಅಧಿಕೃತವಾಗಿ ಭಾರತಕ್ಕೆ out source ಆದರೆ ಅಚ್ಚರಿ ಏನಿಲ್ಲ" ಎಂದ ಕಬೀರ್.

ನಾಲ್ವರೂ ಕಾಫಿ ಹೀರುತ್ತಾ ಸುಮ್ಮನೆ ಕೂತೆವು. ಸ್ವಲ್ಪ ಹೊತ್ತಿನ ನಂತರ "cheer up. ಬೇರೆ ಯಾವುದಾದರೂ ಖುಷಿ ಕೊಡುವ ವಿಷಯದ ಬಗ್ಗೆ ಮಾತಾಡೋಣ" ಎಂದ ತೇಜು.

"ನನ್ನ ಫೇವರೇಟ್ ನಟ ಅಕ್ಷಯ್‌ಕುಮಾರ್‌ನ ಹೊಸ ಚಿತ್ರ 'ಸಿಂಗ್ ಈಸ್ ಕಿಂಗ್' ಎಲ್ಲಾ ದಾಖಲೆಗಳನ್ನು ಮುರಿದಿದೆ ಗೊತ್ತಾ, ಮೊದಲನೆ ವಾರವೇ ಕೋಟ್ಯಂತರ ರೂಪಾಯಿಗಳನ್ನು ಗಳಿಸಿದೆಯಂತೆ" ಎಂದಳು ಭಾಗಿ.

ನಾನು ಮತ್ತು ಕಬೀರ್ ಒಬ್ಬರೊಬ್ಬರ ಮುಖ ನೋಡಿದೆವು. ಆತ ನನ್ನತ್ತ ಕಣ್ಣು ಮಿಟುಕಿಸಿದಾಗ ನಾನು ಮುಗುಳ್ನಕ್ಕು ಸುಮ್ಮನಾದೆ....

■ ಶಾರದೆ

ನಂಬಿದ್ರೆ ನಂಬಿ ■■■ ■■■ ಬಿಟ್ರೆ ಬಿಡಿ



"ನನಗೆ ಯಾರ್‍ಯಾರು ಓಟು ಹಾಕಿಲ್ಲ ಎಂದು ಗೊತ್ತಾಗಿದೆ. ಅವರೆಲ್ಲರಿಗೂ ತಕ್ಕ ಪಾಠ ಕಲಿಸುತ್ತೇನೆ"

- ಬಚ್ಚೇಗೌಡ, ಕಾರ್ಮಿಕ ಸಚಿವ.



"ನಗರದ ರಸ್ತೆಗಳಲ್ಲಿ ಒಂದೇ ಕಡೆ ಹತ್ತು ನಿಮಿಷಕ್ಕಿಂತ ಜಾಸ್ತಿ ಪ್ರತಿಭಟನೆ ನಡೆಸಿದರೆ ಅಂಥವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು"

-ಶಂಕರ್ ಬಿದರಿ.



"ಸರ್ಕಾರ ಕಬ್ಬಿಗೆ ಟನ್ ಒಂದಕ್ಕೆ ರೂ 2000 ನಿಗದಿ ಮಾಡದಿದ್ದರೆ ಬೀದಿಗಿಳಿದು ಹೋರಾಟ ನಡೆಸಲಾಗುವುದು"

-ಎಚ್.ಡಿ.ಕುಮಾರಸ್ವಾಮಿ.

"ದಲಿತ ಸಂಘರ್ಷ ಸಮಿತಿ ಒಂದಲ್ಲ ಒಂದು ದಿನ ಸತ್ತು ಪುನರ್ಜನ್ಮದೊಡನೆ ಹೊಸ ರೂಪ ಪಡೆದುಕೊಳ್ಳುವ ಆಶಯ ನಮ್ಮದು"

-ಕೋಟಗಾನಹಳ್ಳಿ ರಾಮಯ್ಯ

"ಅಮೆರಿಕಾದ ಕ್ಷಿಪಣಿಗೆ ಸ್ಥಳ ನೀಡಿದರೆ ಪೋಲ್ಯಾಂಡ್ ಮೇಲೆ ಅಣ್ವಸ್ತ್ರ ದಾಳಿ ಖಚಿತ. ಇದಕ್ಕೆ ನನ್ನ ರಷ್ಯಾದ ಸೇನಾ ಸಂವಿಧಾನ ಅವಕಾಶ ನೀಡುತ್ತದೆ"

-ರಷ್ಯಾ ಸೇನಾಧಿಕಾರಿ



"ಇತಿಹಾಸ ಅಧ್ಯಯನ ಮಾಡಲು ವಿದ್ಯಾರ್ಥಿಗಳನ್ನು ಆಕರ್ಷಿಸಲು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಬೇಕಿದೆ"

-ಅರವಿಂದ ಲಿಂಬಾವಳಿ

"ಪ್ರಜಾಪ್ರಭುತ್ವವು ಇಂದು ಅರ್ಥ ಕಳೆದುಕೊಂಡು ಕುಟುಂಬ ಪ್ರಭುತ್ವವಾಗುತ್ತಿದೆ. ಆದ್ದರಿಂದ ಯಾವುದೇ ರಾಜಕಾರಣಿಗೆ 3 ನೇ ಸಲ ಸ್ಪರ್ಧಿಸಲು ಅವಕಾಶ ನೀಡಬಾರದು"

- ಶರಣಗೌಡ ಇನಾಂದಾರ್

"ದೇವೇಗೌಡರು ಮತ್ತು ಜಾತ್ಯತೀತ ಜನತಾದಳ ಬದುಕಿರುವವರೆಗೆ ನೈಸ್ ರಸ್ತೆ ನಿರ್ಮಾಣಕ್ಕೆ ಅವಕಾಶ ಕೊಡುವುದಿಲ್ಲ"

- ಎಚ್.ಡಿ.ಕುಮಾರಸ್ವಾಮಿ

"ದೇವರು ಬಂದರೂ ಮಾನವನ ಅಪರಾಧ ಪ್ರವೃತ್ತಿಯನ್ನು ಹೋಗಲಾಡಿಸಲು ಸಾಧ್ಯವಿಲ್ಲ"

-ಶಂಕರ್ ಬಿದರಿ



"ಆಪರೇಷನ್ ಕಮಲ ನಿಲ್ಲುವುದಿಲ್ಲ, ಇನ್ನೂ ಹತ್ತು ಜನ ಕಾಂಗ್ರೆಸ್-ಜೆಡಿಎಸ್ ಶಾಸಕರು ಬಿಜೆಪಿ ಸೇರಲಿದ್ದಾರೆ"

- ಕರುಣಾಕರ ರೆಡ್ಡಿ

"ಗುಜರಾತ್ ಸ್ಫೋಟದ ಬಗ್ಗೆ ಬಂಧಿತರನ್ನು ಮುಂದೆ ವಿಚಾರಿಸಲಾಗುತ್ತದೆ. ಸರಣಿ ಸ್ಫೋಟದಲ್ಲಿ ಅವರ ಪಾತ್ರವಿರುವುದು ಬಯಲಾಗಿದೆ"

-ಗುಜರಾತ್ ಡಿ.ಜಿ.ಪಿ.ಪಾಂಡೆ



"2008ರ ಅಕ್ಟೋಬರ್ ವೇಳೆಗೆ 80ಲಕ್ಷ ಬಿಪಿಎಲ್ ಕಾರ್ಡ್ ಕೊಡುವ ಯೋಚನೆ ಇದೆ"

- ಹಾಲಪ್ಪ, ಆಹಾರ ಸಚಿವ


'ಸೊನಾಟ ಫಾರ್ ಎ ಗುಡ್ ಮ್ಯಾನ್'



ಕಂಡಹಾಗೆ

■ಗೌರಿ ಲಂಕೇಶ್

ವೈಸ್ಲರ್ ಓರ್ವ ನಿಷ್ಠಾವಂತ ಪೊಲೀಸ್ ಅಧಿಕಾರಿ. ತನ್ನ ದೇಶದ ಸುವಿಧಾನದ ಆಶಯವಾದ ಸಮಾಜವಾದದಲ್ಲಿ ಅಪಾರ ನಂಬಿಕೆ ಇಟ್ಟಿರುವ ವೈಸ್ಲರ್ ತನ್ನ ಪೊಲೀಸ್ ವೃತ್ತಿ ಕೂಡ ಸಮಾಜವಾದವನ್ನು ಕಾಪಾಡುವುದೇ ಆಗಿದೆ ಎಂದು ದಿಟ್ಟವಾಗಿ ನಂಬಿ ತನ್ನ ಕರ್ತವ್ಯವನ್ನು ಶಿರಸಾವಹಿಸಿ ಪಾಲಿಸುತ್ತಿರುತ್ತಾನೆ. ಆತ ಭ್ರಷ್ಟನಲ್ಲ, ಹಣದಾಹಿ ಅಲ್ಲ, ಅಧಿಕಾರದ ಲಾಲಸೆಗೆ ಹಿರಿಯ ಅಧಿಕಾರಿಗಳನ್ನು ಓಲೈಸುವವನಲ್ಲ. ಆದರೆ ದೇಶದ ವಿರೋಧಿಗಳನ್ನು, ಅದರ ವಿರುದ್ಧ ಪಿತೂರಿ ನಡೆಸುವವರನ್ನು ಸುಮ್ಮನೆ ಬಿಡುವವನೂ ಅಲ್ಲ.



ಆತನ ಸ್ನೇಹಿತ ಗ್ರುಬಿಟ್ಜ್‌ನೇ ವೈಸ್ಲರ್‌ನ ಹಿರಿಯ ಅಧಿಕಾರಿ. ಆದರೆ ಗ್ರುಬಿಟ್ಜ್ ವೈಸ್ಲರ್‌ನಂತಲ್ಲ, ಬಡ್ತಿಗಾಗಿ ಭ್ರಷ್ಟ ರಾಜಕಾರಣಿಗಳನ್ನು ಓಲೈಸುವ, ತನ್ನ ಹುದ್ದೆಯನ್ನು ರಕ್ಷಿಸಿಕೊಳ್ಳಲು ಅವರ ತಾಳಕ್ಕೆ ಕುಣಿಯುವವ.

ವೈಸ್ಲರ್ ಮತ್ತು ಗ್ರುಬಿಟ್ಜ್ ಅಂದಿನ ಪೂರ್ವ ಕಮ್ಯುನಿಸ್ಟ್ ಜರ್ಮನಿಯ ಕುಖ್ಯಾತ ಸ್ಟಾಸಿ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಕರ್ತವ್ಯ ಜನರ ಮೇಲೆ ನಿಗಾ ಇಟ್ಟು ಯಾರ್‍ಯಾರು ದೇಶದ ವಿರುದ್ಧ ಪಿತೂರಿ ನಡೆಸುತ್ತಿದ್ದಾರೋ, ಯಾರ್‍ಯಾರು ವಾಕ್ ಸ್ವಾತಂತ್ರ್ಯ ಮಾನವಹಕ್ಕು ಎಂದೆಲ್ಲಾ ಮಾತನಾಡುತ್ತಿದ್ದಾರೋ ಅಂತಹವರನ್ನು ಠಾಣೆಗೆ ಎಳೆತಂದು ರಿಪೇರಿ ಮಾಡುವುದು, ಅಕಸ್ಮಾತ್ ರಿಪೇರಿ ಆಗದಿದ್ದರೆ ಅವರನ್ನು ಜೈಲಿಗೆ ದೂಡುವುದು.

ಒಮ್ಮೆ ವೈಸ್ಲರ್‌ನನ್ನು ಗ್ರುಬಿಟ್ಜ್ ನಾಟಕವೊಂದನ್ನು ನೋಡಲು ಕರೆದುಕೊಂಡು ಹೋಗುತ್ತಾನೆ. ಆ ನಾಟಕದ ಕರ್ತೃ ಜಾರ್ಜ್ ಎಂಬಾತ. ಜಾರ್ಜ್ ಬುದ್ಧಿವಂತ ಮಾತ್ರವಲ್ಲ ಖ್ಯಾತ ಖ್ಯಾತ ನಾಟಕಕಾರನೂ ಹೌದು. ದೇಶದ ಸಮಾಜವಾದಿ ಸಿದ್ಧಾಂತಕ್ಕೆ ಬದ್ಧವಾಗಿರುವವನು, ಆದ್ದರಿಂದ ಸರ್ಕಾರಕ್ಕೆ ಪ್ರೀತಿಪಾತ್ರವಾಗಿರುವವನು. ಸರ್ಕಾರದ ದೌರ್ಜನ್ಯಕ್ಕೆ ತುತ್ತಾಗಿರುವ ತನ್ನ ಕಲಾವಿದ ಸ್ನೇಹಿತರ ವಕಾಲತ್ತು ವಹಿಸಿ ಅವರಿಗೆ ಸಹಾಯವಾಗಲು ಯತ್ನಿಸುವವನು.

ಅಂದು ಜಾರ್ಜ್‌ನ ನಾಟಕದಲ್ಲಿ ಪ್ರಧಾನ ಪಾತ್ರದಲ್ಲಿ ನಟಿಸುತ್ತಿರುವವಳು ಕ್ರಿಸ್ಟಾ ಎಂಬ ಸುಂದರಿ. ಆಕೆ ನಾಟಕಕಾರ ಜಾರ್ಜ್‌ನ ಪ್ರೇಯಸಿ ಕೂಡ. ಆ ನಾಟಕವನ್ನು ನೋಡಲು ಅಂದು ಹೆಂಫ್ ಎಂಬ ಕೇಂದ್ರ ಮಂತ್ರಿ ಕೂಡ ಬಂದಿದ್ದ. ಹೆಂಫ್‌ಗೆ ಕ್ರಿಸ್ಟಾಳ ಮೇಲೆ ಒಲವು. ಹೇಗಾದರೂ ಮಾಡಿ ಅವಳು ತನ್ನವಳಾಗಬೇಕೆಂಬ ಆಶೆ. ಅದು ಈಡೇರಬೇಕಾದರೆ ಮೊದಲು ಜಾರ್ಜ್‌ನನ್ನು ಯಾವುದಾದರೂ ಕೇಸ್‌ನಲ್ಲಿ ಸಿಕ್ಕಿಹಾಕಿಸಿ ಅವನನ್ನು ಜೈಲಿಗೆ ದೂಡಬೇಕು. ಹೆಂಫ್ ತನ್ನ ಈ ಆಶೆಯವನ್ನು ಗ್ರುಬಿಟ್ಜ್ ಮುಂದೆ ತೋಡಿಕೊಳ್ಳುತ್ತಾನೆ, ಉನ್ನತ ಹುದ್ದೆಯ ಆಮಿಷವನ್ನು ಒಡ್ಡುತ್ತಾನೆ.

ಆಗ ಜಾರ್ಜ್‌ನ ಮೇಲೆ ನಿಗಾ ಇಡುವ ಜವಾಬ್ದಾರಿಯನ್ನು ಗ್ರುಬಿಟ್ಜ್ ತನ್ನ ಸ್ನೇಹಿತ ವೈಸ್ಲರ್‌ಗೆ ವಹಿಸುತ್ತಾನೆ. ಇದರ ಹಿಂದಿರುವ ತರ್ಕ ಗೊತ್ತಿರದ ವೈಸ್ಲರ್ ಎಂದಿನಂತೆ ನಿಷ್ಠೆ ವಹಿಸಿ ತನ್ನ ಕೆಲಸ ಪ್ರಾರಂಭಿಸುತ್ತಾನೆ. ಜಾರ್ಜ್ ಇಲ್ಲದಿದ್ದಾಗ ಆತನ ಮನೆಗೆ ಹೋಗಿ ಎಲ್ಲೆಡೆ ಸೀಕ್ರೆಟ್ ಮೈಕ್ರೋಫೋನ್‌ಗಳನ್ನು ಇಡುತ್ತಾನೆ. ಹಗಲುರಾತ್ರಿ ಎನ್ನದೆ ಜಾರ್ಜ್, ಕ್ರಿಸ್ಟಾ ಮತ್ತು ಅವರ ಮನೆಗೆ ಭೇಟಿ ನೀಡುವ ಸ್ನೇಹಿತರ ಮಾತುಕತೆಗಳನ್ನು ಕೇಳಿಸಿಕೊಂಡ ಅವುಗಳನ್ನು ದಾಖಲಿಸಲಾರಂಭಿಸುತ್ತಾನೆ.

ಆದರೆ ಕೆಲ ದಿನಗಳಲ್ಲೇ ತನ್ನ ಇಡೀ ಕಾರ್ಯಾಚರಣೆ ಹೆಂಫ್ ಎಂಬ ಸಚಿವನ ಲೈಂಗಿಕ ತೃಷೆಯನ್ನು ಈಡೇರಿಸಲು ನಡೆಯುತ್ತಿದೆ ಎಂಬ ಅರಿವು ವೈಸ್ಲರ್‌ಗೆ ಆಗುತ್ತದೆ. ಆದರಿಂದ ಆತನಿಗೆ ಹೆಂಫ್‌ನಂತಹ ಭ್ರಷ್ಟರೇ ತನ್ನ ದೇಶದ ದ್ರೋಹಿಗಳಂತೆ ಕಾಣಿಸಲಾರಂಭಿಸುತ್ತಾರೆ.

ಈ ಮಧ್ಯೆ, ಜಾರ್ಜ್ ಮತ್ತು ಕ್ರಿಸ್ಟಾರ ವ್ಯಕ್ತಿತ್ವ ಮತ್ತು ಕಾಳಜಿಗಳ ಅವರ ಮಾತುಕತೆಗಳ ಮೂಲಕವೇ ವೈಸ್ಲರ್ ಮುಂದೆ ತೆರೆಯುತ್ತಾ ಹೋಗುತ್ತದೆ. ವಾಸ್ತವವಾಗಿ ಜಾರ್ಜ್ ಭ್ರಷ್ಟನಲ್ಲವೆಂದೂ, ತನ್ನಂತೆಯೇ ಸಮಾಜವಾದದಲ್ಲಿ ನಂಬಿಕೆ ಹೊಂದಿರುವವನೆಂದೂ, ಹೆಂಫ್‌ನಂತಹ ಮಂತ್ರಿಗಳಿಗಿಂತ ಹೆಚ್ಚು ದೇಶದ ಮತ್ತು ಜನರ ಬಗ್ಗೆ ಕಾಳಜಿ ಹೊಂದಿರುವವನೆಂದೂ ವೈಸ್ಲರ್‌ಗೆ ಗೊತ್ತಾಗುತ್ತದೆ. ಆಗ ಜಾರ್ಜ್‌ಗಾಗಲಿ, ತನ್ನ ಹಿರಿಯ ಅಧಿಕಾರಿ ಗ್ರುಬಿಟ್ಜ್‌ಗಾಗಲಿ ಗೊತ್ತಾಗದಂತೆ ವೈಸ್ಲರ್ ಕಾರ್ಯಾಚರಣೆ ಪ್ರಾರಂಭಿಸುತ್ತಾನೆ.

ಒಮ್ಮೆ ಕ್ರಿಸ್ಟಾಳನ್ನು ಬ್ಲ್ಯಾಕ್‌ಮೇಲ್ ಮಾಡಿ ತನ್ನನ್ನು ಭೇಟಿಯಾಗುವಂತೆ ಸಚಿವ ಹೆಂಫ್ ಒತ್ತಡ ಹೇರುತ್ತಾನೆ. ಇತ್ತ ವೈಸ್ಲರ್ ಆಕೆಯನ್ನು ಹೇಗಾದರೂ ತಡೆಯಬೇಕು ಎಂದು ತೀರ್ಮಾನಿಸಿ ಆಕೆ ಎಲ್ಲಿಗೆ ಹೋಗುತ್ತಿದ್ದಾಳೆ ಎಂಬ ಅರಿವು ಜಾರ್ಜ್‌ಗೆ ಆಗುವಂತೆ ಮಾಡುತ್ತಾನೆ. ಆಗ ಕ್ರಿಸ್ಟಾಳನ್ನು ಜಾರ್ಜ್ ಬೇಡಿಕೊಳ್ಳುತ್ತಾನೆ, ಹೆಂಫ್‌ನನ್ನು ಸಂಧಿಸಬೇಡ ಎಂದು ಕೇಳುತ್ತಾನೆ. ಆದರೆ ಆಕೆ ಕೇಳುವುದಿಲ್ಲ, ಹೆಂಫ್‌ನಂಥ ಅಧಿಕಾರಿಗಳನ್ನು ಸಂತೋಷಗೊಳಿಸದಿದ್ದರೆ ಮುಂದೆಂದೂ ತಾನು ನಟಿಸದಂತೆ ಮಾಡುತ್ತಾರೆ ಎಂದು ಹೆದರಿದ ಆಕೆ ಮನೆಯಿಂದ ಹೊರಡುತ್ತಾಳೆ. ಕ್ರಿಸ್ಟಾ ತಳಮಳಗೊಳ್ಳುತ್ತಾಳೆ.

ಜಾರ್ಜ್‌ನ ಪ್ರೀತಿ, ಹೆಂಫ್‌ನ ಬ್ಲ್ಯಾಕ್‌ಮೇಲ್ ನಡುವೆ ತತ್ತರಿಸಿ ಹೋಗುತ್ತಾಳೆ. ಗೊಂದಲಗೊಂಡು ಹೆಂಫ್‌ನನ್ನು ಭೇಟಿಯಾಗುವ ಮುನ್ನ ಮನೆಯ ಹತ್ತಿರವೇ ಇರುವ ಹೋಟೆಲ್ ಒಂದಕ್ಕೆ ಹೋಗುತ್ತಾಳೆ. ತಾನು ಆಕೆಯ ಅಭಿಮಾನಿ ಎಂದು ಹೇಳಿಕೊಂಡು ಅವಳನ್ನು ಹೋಟೆಲ್‌ನಲ್ಲಿ ಮಾತನಾಡಿಸುವ ವೈಸ್ಲರ್ ಆಕೆ ಎಂತಹ ಮಹಾನ್ ನಟಿ ಎಂದೆಲ್ಲ ವರ್ಣಿಸುತ್ತಾನೆ, ಆಕೆಯಂತಹ ಪ್ರತಿಭಾವಂತೆ ಯಾವುದಕ್ಕೂ ಹೆದರುವ ಅಗತ್ಯವಿಲ್ಲವೆಂದು ಸೂಚಿಸುತ್ತಾನೆ. ಕ್ರಿಸ್ಟಾ ಮನೆಗೆ ಹಿಂದಿರುಗುತ್ತಾಳೆ.

ಹೀಗೆ ಜಾರ್ಜ್ ಮತ್ತು ಕ್ರಿಸ್ಟಾಳ ಬದುಕನ್ನು ಪರೋಕ್ಷವಾಗಿ ಪ್ರವೇಶಿಸುವ ವೈಸ್ಲರ್‌ನ ವ್ಯಕ್ತಿತ್ವದಲ್ಲೂ ಬದಲಾವಣೆಗಳಾಗುತ್ತವೆ. ಹೆಂಫ್ ಮತ್ತು ಗ್ರುಬಿಟ್ಜ್‌ನಂತಹ ಭ್ರಷ್ಟರಿಂದ ಅವರಿಬ್ಬರನ್ನು ತನಗೆ ಗೊತ್ತಿಲ್ಲದಂತೆ ರಕ್ಷಿಸಲಾರಂಭಿಸುತ್ತಾನೆ.

ಒಂದು ದಿನ ಜಾರ್ಜ್ ಮತ್ತು ಕ್ರಿಸ್ಟಾಳ ಮನೆಯಲ್ಲಿ ಸಂತೋಷ ಕೂಟ ಇರುತ್ತದೆ. ಅದು ಜಾರ್ಜ್‌ನ 40 ನೇ ಹುಟ್ಟುಹಬ್ಬದ ಪಾರ್ಟಿ. ಆ ಪಾರ್ಟಿಗೆ ಜೆರ್ಸ್ಕಾ ಎಂಬ ರಂಗ ನಿರ್ದೇಶಕ ಕೂಡ ಬಂದು ಜಾರ್ಜ್‌ಗೆ 'ಸೊನಾಟ ಫಾರ್ ಆ ಗುಡ್ ಮ್ಯಾನ್' ಎಂಬ ಸಂಗೀತ ಕೃತಿಯನ್ನು ಉಡುಗೊರೆಯಾಗಿ ನೀಡುತ್ತಾನೆ. ಅಭಿವ್ಯಕ್ತಿ ಸ್ವಾತಂತ್ರ್ಯ ಕೋರಿದ್ದಕ್ಕೆ ಕಮ್ಯುನಿಸ್ಟ್ ಸರ್ಕಾರ ಕಳೆದ ಏಳೆಂಟು ವರ್ಷಗಳಿಂದ ಜೆರ್ಸ್ಕಾನ ಮೇಲೆ ನಿಷೇಧ ಹೇರಿದೆ. ಜಾರ್ಜ್ ಆತನ ಪರವಾಗಿ ಅದೆಷ್ಟೇ ಪ್ರಯತ್ನಿಸಿದರೂ ಆ ನಿಷೇಧವನ್ನು ಹಿಂದೆ ಪಡೆಯಲು ಸರ್ಕಾರ ಸಿದ್ಧವಿರಲಿಲ್ಲ. ಜೆರ್ಸ್ಕಾ ಜೀವನೋತ್ಸಾಹವನ್ನೇ ಕಳೆದುಕೊಂಡಿರುತ್ತಾನೆ.

ಈ ಸಂತೋಷ ಕೂಟ ನಡೆದ ಒಂದೆರಡು ದಿನಗಳಲ್ಲಿ ಜೆರ್ಸ್ಕಾ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ತನ್ನ ಮಿತ್ರನ ಸಾವು ಜಾರ್ಜ್‌ನನ್ನು ಕಂಗೆಡಿಸುತ್ತದೆ. ಪಶ್ಚಿಮ ಜರ್ಮನಿಯ ಪ್ರಮುಖ ಪತ್ರಿಕೆ 'ಡರ್ ಸ್ಪೀಗಲ್'ನಲ್ಲಿ ಪೂರ್ವ ಜರ್ಮನಿಯಲ್ಲಿ ಸರ್ಕಾರದ ದೌರ್ಜನ್ಯದಿಂದಲೇ ಎಷ್ಟು ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ ಲೇಖನವೊಂದನ್ನು ಬರೆದು ಕಮ್ಯುನಿಸ್ಟ್ ಸರ್ಕಾರದ ನಿಜ ಬಣ್ಣವನ್ನು ಬಯಲು ಮಾಡಲು ನಿರ್ಧರಿಸುತ್ತಾನೆ.



ಆದರೆ ಇಂತಹ ಕಾರ್ಯಾಚರಣೆ ಪ್ರಾರಂಭಿಸುವ ಮುನ್ನ ಜಾರ್ಜ್ ಮೇಲೆ ಮತ್ತಾತನ ಮನೆಯ ಮೇಲೆ ಪೊಲೀಸರು ನಿಗಾ ಇಟ್ಟಿದ್ದಾರೆಯೇ ಎಂದು ಪರೀಕ್ಷಿಸಲು ಜಾರ್ಜ್ ಮತ್ತು ಆತನ ಸ್ನೇಹಿತರು ನಿರ್ಧರಿಸುತ್ತಾರೆ. ಜಾರ್ಜ್ ಮನೆಯಲ್ಲಿ ಸೇರುವ ಹಲವು ಗೆಳೆಯರು ಜರ್ಮನಿಗೆ ಸ್ನೇಹಿತರೊಬ್ಬರ ಕಾರ್‌ನಲ್ಲಿ ಗುಪ್ತವಾಗಿ ಯಾರನ್ನೋ ಸಾಗಿಸುವ ಯೋಜನೆ ಬಗ್ಗೆ ಚರ್ಚಿಸುತ್ತಾರೆ.

ಅದನ್ನು ವೈಸ್ಲರ್ ಕೇಳಿಸಿಕೊಂಡರೂ ಈಗ ಆತ ಜಾರ್ಜ್ ಪರ ನಿಂತಿರುವುದರಿಂದ ಅವರ ಈ ಯೋಜನೆ ಬಗ್ಗೆ ಗಡಿಯಲ್ಲಿನ ಪೊಲೀಸರಿಗೆ ತಿಳಿಸುವುದಿಲ್ಲ. ಆದರೆ ಇದರ ಬಗ್ಗೆ ಜಾರ್ಜ್ ಮತ್ತು ಆತನ ಗೆಳೆಯರಿಗೆ ಗೊತ್ತಿಲ್ಲವಾದ್ದರಿಂದ ಅವರು ತಮ್ಮ ಮೇಲೆ ಪೊಲೀಸ್ ನಿಗಾ ಇಟ್ಟಿಲ್ಲ ಎಂದೇ ನಿರ್ಧರಿಸುತ್ತಾರೆ.

ಪೂರ್ವ ಜರ್ಮನಿಯಲ್ಲಿ ಅಂದು ಎಲ್ಲಾ ಟೈಪ್‌ರೈಟರ್‌ಗಳ ಮೇಲೆ ಸರ್ಕಾರ ಗಮನ ಇಟ್ಟಿದ್ದರಿಂದ ಯಾರು ಯಾವ ಟೈಪ್‌ರೈಟರ್‌ನಿಂದ ಎಂತಹ ಲೇಖನ ಬರೆದಿದ್ದಾರೆ ಎಂದು ಗೊತ್ತಾಗುತ್ತಿತ್ತು. ಆದ್ದರಿಂದ ಪಶ್ಚಿಮ ಜರ್ಮನಿಯಿಂದ ಜಾರ್ಜ್‌ಗೆ ಕೆಂಪುಬಣ್ಣದ ಟೇಪ್ ಹೊಂದಿರುವ ವಿಶೇಷ ಟೈಪ್‌ರೈಟರ್ ಅನ್ನು ಸ್ನೇಹಿತರು ತರಿಸುತ್ತಾರೆ, ಆತ ತನ್ನ ಲೇಖನ ಬರೆಯಲು ಪ್ರಾರಂಭಿಸುತ್ತಾನೆ.

ಇಷ್ಟು ದಿನಗಳ ಕಾಲ ಜಾರ್ಜ್‌ನ ಚಲನವಲನಗಳ ಮೇಲೆ ಕಣ್ಣು ಇಟ್ಟಿದ್ದರೂ ಆತ ದೇಶದ್ರೋಹದ ಕೆಲಸಗಳಲ್ಲಿ ತೊಡಗಿದ್ದಾನೆ ಎಂಬುದಕ್ಕೆ ಯಾವ ಸುಳಿವೂ ಸಿಕ್ಕಿಲ್ಲ. ಆದ್ದರಿಂದ ಅದನ್ನು ಸಡಿಲಗೊಳಿಸಬಹುದು ಎಂದು ವೈಸ್ಲರ್ ವರದಿ ನೀಡುತ್ತಾನೆ. ಆತ ದಕ್ಷ ಅಧಿಕಾರಿ ಎಂದೇ ಹೆಸರು ಮಾಡಿರುವುದರಿಂದ ಯಾರೂ ಆತನ ವರದಿಯನ್ನು ಪ್ರಶ್ನಿಸುವುದಿಲ್ಲ. ಆದರೆ ಇದರಿಂದ ಸಚಿವ ಹೆಂಫ್‌ಗೆ ಕೋಪ ಬರುತ್ತದೆ. ಹೇಗಾದರು ಮಾಡಿ ಕ್ರಿಸ್ಟಾಳನ್ನು ತನ್ನವಳಾಗಿಸಿಕೊಳ್ಳಬೇಕು ಎಂದು ಹಪಹಪಿಸುತ್ತಾನೆ. ಅದೇ ಹೊತ್ತಿಗೆ ಬೇರೆ ಹೆಸರಿನಡಿ ಜಾರ್ಜ್ ಬರೆದಿರುವ ಲೇಖನ ಪ್ರಕಟಗೊಂಡು ಪೂರ್ವ ಜರ್ಮನಿ ಸರ್ಕಾರಕ್ಕೆ ಮುಖಭಂಗವಾಗುತ್ತದೆ. ಆ ಲೇಖನವನ್ನು ಬರೆದವನನ್ನು ಶಿಕ್ಷಿಸಬೇಕೆಂದು ಸರ್ಕಾರ ನಿರ್ಧರಿಸುತ್ತದೆ.

ಒಮ್ಮೆ ಕ್ರಿಸ್ಟಾ ಮಾದಕ ದ್ರವಗಳನ್ನು ಕಳ್ಳತನದಿಂದ ಖರೀದಿಸುತ್ತಿರುವಾಗ ಗ್ರುಬಿಟ್ಜ್ ಅವಳನ್ನು ಬಂಧಿಸುತ್ತಾನೆ. ಜಾರ್ಜ್ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದರೆ ಆಕೆಯನ್ನು ಬಿಡುಗಡೆಗೊಳಿಸುವುದಾಗಿ ಗ್ರುಬಿಟ್ಜ್ ಹೇಳುತ್ತಾನೆ. ಭಯಗೊಂಡ ಕ್ರಿಸ್ಟಾ ಅವನಿಗೆ ಎಲ್ಲವನ್ನು ಹೇಳುತ್ತಾಳೆ. ಆದರೆ ಟೈಪ್‌ರೈಟರ್ ಎಲ್ಲಿದೆ ಎಂದು ಆಕೆ ಹೇಳುವುದಿಲ್ಲ, ಆದ್ದರಿಂದ ಪೊಲೀಸರು ಜಾರ್ಜ್ ಮನೆಯನ್ನು ಎಷ್ಟು ಹುಡುಕಿದರೂ ಅದು ಅವರಿಗೆ ಸಿಗುವುದಿಲ್ಲ.

ಆಗ ಕ್ರಿಸ್ಟಾಳನ್ನು ಇನ್ನಷ್ಟು ತೀವ್ರ ವಿಚಾರಣೆಗೆ ಒಳಪಡಿಸಲು ವೈಸ್ಲರ್‌ನನ್ನೇ ಕರೆಯಲಾಗುತ್ತದೆ. ಆಗ ಗ್ರುಬಿಟ್ಜ್ "ನೀನು ನನ್ನ ಸ್ನೇಹಿತ ಆಗಿರಬಹುದು. ಆದರೆ ನಿನ್ನ ಬಗ್ಗೆ ಯಾಕೋ ನನಗೆ ಸಂಶಯ ಮೂಡಿದೆ. ಆದ್ದರಿಂದ ಕ್ರಿಸ್ಟಾಳಿಂದ ನಮಗೆ ಬೇಕಾದ ಮಾಹಿತಿಯನ್ನು ನೀನು ಪಡೆಯಲೇಬೇಕು. ಇಲ್ಲಾ ಅಂದ್ರೆ ನಿನಗೆ ಹಿಂಬಡ್ತಿ ನೀಡಿ ನೀನು ನಿವೃತ್ತಿ ಹೊಂದುವವರೆಗೂ ಪಶ್ಚಾತ್ತಾಪಪಡುವಂತೆ ಮಾಡುತ್ತೇನೆ" ಎಂದು ವೈಸ್ಲರ್‌ಗೆ ಹೇಳುತ್ತಾನೆ. ವೈಸ್ಲರ್ ಕ್ರಿಸ್ಟಾಳ ವಿಚಾರಣೆಯನ್ನು ತನ್ನ ಎಂದಿನ ಚಾಕಚಕ್ಯತೆಯಿಂದ ಮಾಡುತ್ತಾನೆ. ಆಕೆ ಟೈಪ್‌ರೈಟರ್ ಅನ್ನು ಮನೆಯಲ್ಲಿ ಎಲ್ಲಿ ಬಚ್ಚಿಡಲಾಗಿದೆ ಎಂದು ಬಹಿರಂಗಪಡಿಸುತ್ತಾಳೆ. ಆದರೆ ಪೊಲೀಸರು ಜಾರ್ಜ್ ಮನೆಗೆ ಬರುವ ಮುನ್ನವೇ ಅಲ್ಲಿಗೆ ಹಾಜರಾಗುವ ವೈಸ್ಲರ್ ಅದನ್ನು ತೆಗೆದು ತನ್ನ ಕಾರಿನಲ್ಲಿ ಬಚ್ಚಿಡುತ್ತಾನೆ.

ಎರಡನೆ ಬಾರಿ ಪೊಲೀಸರು ಮನೆಯ ತಲಾಶ್ ನಡೆಸುತ್ತಿರುವಾಗ ಕ್ರಿಸ್ಟಾಳನ್ನು ಪಾಪಪ್ರಜ್ಞೆ ಕಾಡುತ್ತದೆ. ಇನ್ನೇನು ಟೈಪ್‌ರೈಟರ್ ಬಚ್ಚಿಟ್ಟಿದ ಜಾಗವನ್ನು ಪೊಲೀಸರು ತೆರೆಯಬೇಕು. ಆಗ ತನ್ನಿಂದಾಗಿ ಜಾರ್ಜ್ ಜೈಲುಪಾಲಾಗುತ್ತಾನೆ ಎಂದು ಹೆದರುವ ಕ್ರಿಸ್ಟಾ ಮನೆಯಿಂದ ಹೊರಗೆ ಓಡಿಹೋಗುತ್ತಾಳೆ. ರಸ್ತೆಯಲ್ಲಿ ಜೋರಾಗಿ ಸಾಗಿಬರುತ್ತಿರುವ ಲಾರಿಯ ಮುಂದೆ ತನ್ನ ಮೈ ಚೆಲ್ಲುತ್ತಾಳೆ. ಇದೆಲ್ಲವನ್ನು ನಿಸ್ಸಹಾಯಕನಾಗಿ ನೋಡುತ್ತಿರುವ ವೈಸ್ಲರ್ ತಾನು ಟೈಪ್‌ರೈಟರ್ ಅನ್ನು ಬಚ್ಚಿಟ್ಟಿರುವುದಾಗಿ ಸಾವಿನ ದವಡೆಯಲ್ಲಿರುವ ಕ್ರಿಸ್ಟಾಳಿಗೆ ಹೇಳಲು ಯತ್ನಿಸುತ್ತಾನೆ. ಆದರೆ ಪೊಲೀಸರು ಸುತ್ತುವರಿದಿರುವುದರಿಂದ ಆತನಿಂದ ಅದು ಸಾಧ್ಯವಾಗುವುದಿಲ್ಲ. ತನ್ನ ಪ್ರಿಯತಮ ಜಾರ್ಜ್‌ನ ಆಲಿಂಗನದಲ್ಲಿ ಕ್ರಿಸ್ಟಾ ಸಾವನ್ನಪ್ಪುತ್ತಾಳೆ.

ಕ್ರಿಸ್ಟಾಳೇ ಸತ್ತ ನಂತರ ಜಾರ್ಜ್ ವಿರುದ್ಧದ ಹಗೆಗೆ ಹೆಂಫ್ ಕಾರಣವೇ ಇಲ್ಲದಂತಾಗುತ್ತದೆ. ಆತನ ಮೇಲಿನ ನಿಗಾವನ್ನು ಹಿಂದೆಪಡೆಯಲಾಗುತ್ತದೆ. ಆದರೆ ಗ್ರುಬಿಟ್ಜ್ ಬೆದರಿಸಿದ್ದಂತೆ ವೈಸ್ಲರ್‌ಗೆ ಹಿಂಬಡ್ತಿ ಸಿಗುತ್ತದೆ. ಯಾವ ಭವಿಷ್ಯವೂ ಇಲ್ಲದ ಇಲಾಖೆಗೆ ಆತನನ್ನು ದೂಡಲಾಗುತ್ತದೆ.

ಹೀಗೆ ನಾಲ್ಕು ವರ್ಷ ಉರುಳುತ್ತದೆ. ಒಂದು ದಿನ ಪೂರ್ವ ಮತ್ತು ಪಶ್ಚಿಮ ಜರ್ಮನಿಯನ್ನು ವಿಭಜಿಸಿದ್ದ ಬರ್ಲಿನ್ ಗೋಡೆಯನ್ನು ಉರುಳಿಸಲಾಗಿದೆ ಎಂಬ ಸುದ್ದಿ ರೇಡಿಯೋ ಮೂಲಕ ತೇಲಿಬರುತ್ತದೆ. ಜರ್ಮನಿ ಏಕೀಕರಣಗೊಂಡು ಕಮ್ಯುನಿಸ್ಟ್ ಸರ್ಕಾರ ಕಿತ್ತುಹೋಗುತ್ತದೆ.

ಒಂದು ದಿನ ನಾಟಕವೊಂದನ್ನು ನೋಡಲು ಹೋದಾಗ ಜಾರ್ಜ್ ಹೆಂಫ್‌ನನ್ನು ಭೇಟಿ ಆಗುತ್ತಾನೆ. ಅಷ್ಟು ಹೊತ್ತಿಗೆ ಹೆಂಫ್ ಯಶಸ್ವಿ ಉದ್ಯಮಿ ಆಗಿರುತ್ತಾನೆ. ದೇಶದಲ್ಲಿ ಮುಕ್ತ ಸರ್ಕಾರ ಸ್ಥಾಪನೆಗೊಂಡಿರುತ್ತದೆ. ಆದ್ದರಿಂದ ತನ್ನ ಮತ್ತು ತನ್ನ ಮನೆ ಮೇಲೆ ಮಾಜಿ ಕಮ್ಯುನಿಸ್ಟ್ ಸರ್ಕಾರ ಯಾಕೆ ನಿಗಾ ಇಟ್ಟಿರಲಿಲ್ಲ ಎಂದು ಜಾರ್ಜ್ ಹೆಂಫ್‌ನನ್ನು ಕೇಳುತ್ತಾನೆ. "ನಿನಗೆ ಗೊತ್ತಿಲ್ಲ, ಬೇರೆ ಎಲ್ಲರಿಗಿಂತ ನಿನ್ನ ಮೇಲೆ ಹೆಚ್ಚು ನಿಗಾ ಇಟ್ಟಿದ್ದೆವು. ಹೋಗಿ ನಿನ್ನ ಮನೆಯನ್ನು ಸರಿಯಾಗಿ ಪರೀಕ್ಷಿಸು" ಎಂದು ಹೆಂಫ್ ಹೇಳುತ್ತಾನೆ.

ಮನೆಗೆ ಹಿಂದಿರುಗಿ ಪರೀಕ್ಷಿಸಿದಾಗ ಮನೆಯ ಎಲ್ಲೆಡೆ ಮೈಕ್ರೋಫೋನ್‌ಗಳು ಸಿಗುತ್ತವೆ. ಅಂದರೆ ತಾನು ಸರ್ಕಾರದ ವಿರುದ್ಧ ಲೇಖನ ಬರೆದಿದ್ದು ಸರ್ಕಾರಕ್ಕೆ ಗೊತ್ತಿದ್ದರೂ ತನ್ನನ್ನು ಏಕೆ ಬಂಧಿಸಲಿಲ್ಲ ಎಂದು ಜಾರ್ಜ್‌ಗೆ ಅಚ್ಚರಿಯಾಗುತ್ತದೆ. ಹೊಸ ಸರ್ಕಾರದಡಿ ಸಾರ್ವಜನಿಕರ ಅವಗಾಹನೆಗೆ ಪೂರ್ವ ಜರ್ಮನಿಯ ಸ್ಟಾಸಿ ಪೊಲೀಸರ ಕಾಗದಪತ್ರಗಳನ್ನು ತೆರೆದಿಡಲಾಗಿರುತ್ತದೆ. ಅಲ್ಲಿಗೆ ಹೋಗಿ ತನ್ನನ್ನು ಕುರಿತ ಫೈಲ್‌ಗಳನ್ನು ಜಾರ್ಜ್ ಪರಿಶೀಲಿಸುತ್ತಾನೆ. ತನ್ನ ಮೇಲೆ ನಿಗಾ ಇಟ್ಟಿದ್ದ ಪೊಲೀಸ್ ಅಧಿಕಾರಿಯ ಕೋಡ್ **HGW XX/7** (ಎಚ್.ಜಿ. ವೈಸ್ಲರ್ 20/7) ಎಂದೂ, ತಾನು ಸರ್ಕಾರದ ವಿರುದ್ಧ ಬರೆದ ಲೇಖನದ ಬಗ್ಗೆ ಆತ ಸರ್ಕಾರಕ್ಕೆ ವರದಿ ಮಾಡಿರಲಿಲ್ಲವೆಂದೂ, ಬದಲಾಗಿ ತಾನು ಸರ್ಕಾರದ ಪರವಾದ ಹೊಸ ನಾಟಕ ಬರೆಯುತ್ತಿದ್ದೇನೆಂದು ತಪ್ಪು ಮಾಹಿತಿ ನೀಡಿದ್ದನೆಂದೂ ಜಾರ್ಜ್‌ಗೆ ಗೊತ್ತಾಗುತ್ತದೆ. ಅಷ್ಟೇ ಅಲ್ಲ, ಆ ಫೈಲ್ ಮೇಲೆ ಕೆಂಪು ಟೈಪ್‌ರೈಟರ್‌ನ ಇಂಕ್ ಕೂಡ ಇದ್ದು ಅದನ್ನು ವೈಸ್ಲರ್‌ನೇ ಬಚ್ಚಿಟ್ಟಿದ್ದ ಎಂದೂ ಜಾರ್ಜ್‌ನ ಅರಿವೆಗೆ ಬರುತ್ತದೆ.

ತನಗೆ ಇಷ್ಟೊಂದು ಸಹಾಯ ಮಾಡಿದ ಈ ವೈಸ್ಲರ್ ಯಾರೆಂದು ಪತ್ತೆಹಚ್ಚಿ ಆತನನ್ನು ಭೇಟಿ ಮಾಡಲು ಜಾರ್ಜ್ ಹೋಗುತ್ತಾನೆ. ವೈಸ್ಲರ್ ಈಗ ಪೊಲೀಸ್ ಇಲಾಖೆಯನ್ನು ತೊರೆದು ದಿನಪತ್ರಿಕೆಗಳನ್ನು ಮಾರುವ ಕೆಲಸ ಮಾಡುತ್ತಿದ್ದಾನೆ. ಆದರೆ ಅದ್ಯಾಕೋ ವೈಸ್ಲರ್‌ನನ್ನು ಮಾತನಾಡಿಸಲು ಜಾರ್ಜ್‌ಗೆ ಮನಸ್ಸು ಬಾರದೆ ಅಲ್ಲಿಂದ ಸುಮ್ಮನೆ ಹೊರಟುಹೋಗುತ್ತಾನೆ.

ಎರಡು ವರ್ಷಗಳ ನಂತರ ಜಾರ್ಜ್ ಬರೆದಿರುವ 'ಸೊನಾಟ ಫಾರ್ ಆ ಗುಡ್ ಮ್ಯಾನ್' ಎಂಬ ಹೊಸ ಪುಸ್ತಕ ಬಿಡುಗಡೆಗೊಳ್ಳುತ್ತದೆ. ಪುಸ್ತಕ ಅಂಗಡಿಯೊಂದರಲ್ಲಿ ಆ ಪುಸ್ತಕವನ್ನು ಕಂಡು ವೈಸ್ಲರ್ ಅದನ್ನು ಕೈಗೆತ್ತಿಕೊಂಡು ಪುಟಗಳನ್ನು ತೆರೆಯುತ್ತಾನೆ. ಜಾರ್ಜ್ ಆ ಪುಸ್ತಕವನ್ನು ``HGW XX/7 ಗೆ ಕೃತಜ್ಞತೆಯಿಂದ'' ಎಂದು ಅರ್ಪಿಸಿರುವುದನ್ನು ನೋಡುತ್ತಾನೆ.

ಆ ಪುಸ್ತಕವನ್ನು ಖರೀದಿಸುವಾಗ ಅಂಗಡಿಯವನು "ಇದನ್ನು ಗಿಫ್ಟ್‌ರ್‍ಯಾಪ್ ಮಾಡಬೇಕಾ?" ಎಂದು ಕೇಳುತ್ತಾನೆ. ಆಗ ವೈಸ್ಲರ್ "ಇಲ್ಲ, ಇದು ನನಗೆ...." ಎಂದು ಮಾರ್ಮಿಕವಾಗಿ ಉತ್ತರಿಸುತ್ತಾನೆ.

* * * * *


ಇದು 'ದಿ ಲೈವ್ಸ್ ಆಫ್ ಅದರ್ಸ್' ಎಂಬ ಅದ್ಭುತ ಜರ್ಮನ್ ಚಿತ್ರದ ಕಥಾವಸ್ತು. ಕಳೆದ ವರ್ಷ ಈ ಚಿತ್ರ ಆಸ್ಕರ್ ಪ್ರಶಸ್ತಿಯನ್ನು ಪಡೆದಿತ್ತು. ಒಂದು ಸಾಮಾಜಿಕ ವ್ಯವಸ್ಥೆ ಎಷ್ಟೇ ಕೆಟ್ಟದ್ದರೂ ಅದರಲ್ಲಿನ ಮನುಷ್ಯತ್ವ ಸರಿಯಾದದ್ದನ್ನೇ ಮಾಡುವ ಹಂಬಲ ಇಂಗಿರುವುದಿಲ್ಲ ಎಂದು ತೋರಿಸುವ ಚಿತ್ರ 'ದಿ ಲೈವ್ಸ್ ಆಫ್ ಅದರ್ಸ್'.

ಪ್ರಸ್ತುತ ಬಿಜೆಪಿ ಸರ್ಕಾರ ಬರಲಿರುವ ಕೋಕಾ ಕಾಯಿದೆ.... ಇಂತಹ ದುಷ್ಟ ಸಂದರ್ಭದಲ್ಲಿ ಈ ಚಿತ್ರದ ಆಶಯದ ಬಗ್ಗೆ ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನಿಸಿತು. ■

ಕಸಾಪ ಎಲೆಕ್ಷನ್ : ಜಾತಿ, ಮಠ, ಹಣದ ದರ್ಬಾರು!


ಬಿಹುಶಃ ಇದನ್ನು ನೀವು ನಂಬಲಾರಿರಿ....! ಈ ಬಾರಿಯ ಕಸಾಪ ರಾಜ್ಯಾಧ್ಯಕ್ಷ ಚುನಾವಣೆಗಾಗಿ ಸೀರಿಯಸ್ ಅಭ್ಯರ್ಥಿಗಳು ತಲಾ 15 ರಿಂದ 20 ಲಕ್ಷ ರೂಪಾಯಿ ತನಕ ಖರ್ಚು ಮಾಡುತ್ತಿದ್ದಾರೆ!

ಹಾಗಂತ ಇದೇನು ಲಾಭದಾಯಕ ಹುದ್ದೆಯಾ ಅಂತ ನೋಡಿದರೆ ಅದೂ ಇಲ್ಲ. ಹೋಗಲಿ ಲೆಕ್ಕಬುಕ್ಕಿಲ್ಲದೆ ಕೋಟಿಗಟ್ಟಲೆ ಹಣ ಹರಿದು ಬರುತ್ತದೆ, ಆದರಲ್ಲೇ ಚೂರುಪಾರನ್ನು ತಾಯಿ ಭುವನೇಶ್ವರಿ ಪ್ರಸಾದ ಅಂತ ನುಂಗಿ ಕಾವೇರಿ ನೀರು ಕುಡಿಯಲು ಅವಕಾಶವಿರಬಹುದಾ ಅಂತ ಚೆಕ್ ಮಾಡಿದರೆ... ಊಹುಂ.. ಅಂತ ಛಾನ್ಸ್ ಬಹಳ ಕಡಿಮೆ.


ನಲ್ಲೂರು ಪ್ರಸಾದ್

ಇಷ್ಟಕ್ಕೂ ಕಳೆದ ಬಾರಿ ಅಧ್ಯಕ್ಷರಾಗಿದ್ದ ಚಂಪಾರಾಗಲಿ, ಅವರಿಗೂ ಹಿಂದಿನ ಹರಿಕೃಷ್ಣ ಪುನರೂರು... ಹೀಗೆ ಇತ್ತೀಚಿನ ಬಹುತೇಕರು ಅಂತ ಯಾವ ಆರೋಪಗಳಿಗೂ ಅವಕಾಶ ಕೊಡದಂತೆ ತಮ್ಮ ಕರ್ತವ್ಯ ನಿರ್ವಹಿಸಿ ಹೊರಬಂದಿದ್ದಾರೆ.

ಹಾಗಾದರೆ ಕಸಾಪ ಅಧ್ಯಕ್ಷಗಿರಿಗ್ಯಾಕೆ ಇಂಥ ಪೈಪೋಟಿ?



ಹತ್ತಿಪ್ಪತ್ತು ಲಕ್ಷ ಖರ್ಚು ಮಾಡಿ ಅಲ್ಲಿ ಹೋಗಿ ಕೂರಲೇಬೇಕೆಂಬ ಹಠ ಯಾರಿಗೇ ಆಗಲಿ ಯಾಕೆ ಬರಬೇಕು? ಕನ್ನಡ ಭಾಷೆ-ಸಾಹಿತ್ಯ ಕಟ್ಟುವ ಕೆಲಸ ಹೀಗೆ ಇಷ್ಟು ದುಬಾರಿಯಾಗಿ ಹೋದರೆ ಮುಂದೆ ಗತಿ ಏನು?


ಸದ್ಯಕ್ಕಂತೂ ಸ್ಪರ್ಧೆಯಲ್ಲಿರುವ ಸೋಸಲೆ ಜವರಯ್ಯ, ನಲ್ಲೂರು ಪ್ರಸಾದ್, ಸಿ. ವೀರಣ್ಣ ವಿದ್ಯಾಶಂಕರ್ ಮುಂತಾದವರಿಗೆ ಈ ಪ್ರಶ್ನೆ ಹಾಕಿಕೊಂಡು ಉತ್ತರ ಕಂಡುಕೊಳ್ಳುವಷ್ಟು ಪುರುಸೊತ್ತು ಇದ್ದಂತಿಲ್ಲ. ಅದಕ್ಕೂ ಮುನ್ನ ಖರ್ಚಿಗೆ ಸಂಬಂಧಿಸಿದಂತೆ ಯಾವ ಮಿತಿಯೂ ಇಲ್ಲಿಲ್ಲ. ಹಾಗಾಗಿ ಈಗಿನ ಕಸಾಪ ಎಲೆಕ್ಷನ್‌ನಲ್ಲಿ ಹಣ ನೀರಿನಂತೆ ಹರಿಯುತ್ತಿವೆ. ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಲ್ಲಿ ಅಗರ್ಭ ಶ್ರೀಮಂತಿಕೆ ಇರುವವರು ಯಾರೂ ಇಲ್ಲ.

ಆದರೂ ಇಷ್ಟು ದುಡ್ಡು ಎಲ್ಲಿಂದ ಪಂಪ್ ಆಗುತ್ತಿದೆ ಎಂದು ನೋಡಿದರೆ ರಾಜಕಾರಣಿಗಳು, ಜಾತಿ ಮುಖಂಡರು, ಮಠಗಳ ಕೈ ಕಾಣುತ್ತಿದೆ.

ಕಸಾಪ ಇನ್ನೆಷ್ಟು ಮಾತ್ರಕ್ಕೂ ಸಜ್ಜನಿಕೆ, ಜಾತ್ಯತೀತ ಮೌಲ್ಯಗಳೆಂಬ ಆದರ್ಶಗಳ ತಾಣವಾಗಿ ಉಳಿದಿಲ್ಲ.

ಖರ್ಚೆಷ್ಟು ಅಂದ್ರೆ ಕಿರುಚ್ಕೊಂಡ್ನಂತೆ

ಆಗಸ್ಟ್ 24 ರಂದು ಕಸಾಪ ಎಲೆಕ್ಷನ್ ನಿಗದಿಯಾಗಿದೆಯಾದರೂ ಬಹುತೇಕ ಅಭ್ಯರ್ಥಿಗಳು ಕಳೆದ 2-3 ವರ್ಷಗಳಿಂದಲೇ ಇದಕ್ಕೆ ತಯಾರಿ ಮಾಡಿಕೊಂಡು ಬಂದಿದ್ದಾರೆ. 2004 ರ ಎಲೆಕ್ಷನ್‌ನಲ್ಲಿ ಚಂಪಾ ಎದುರು ಸ್ಪರ್ಧಿಸಿ ಸೋತಿದ್ದ ಡಾ. ನಲ್ಲೂರ್ ಪ್ರಸಾದ್ ಅವತ್ತೇ ಹೇಳಿದ್ದು 'ನಾನು ಮುಂದಿನ ಸಾರಿ ಮತ್ತೆ ಸ್ಪರ್ಧಿಸುತ್ತೇನೆ' ಎಂದು. ಹೀಗೆ ತಮ್ಮ ಅಭ್ಯರ್ಥಿತನದ ಕಾವನ್ನು ಹಾಗೇ ಉಳಿಸಿಕೊಂಡು ಬಂದ ನಲ್ಲೂರು ಪ್ರಸಾದ್ ಯಾವಾಗ ಈ ಬಾರಿಯ ಚುನಾವಣೆ ಅನೌನ್ಸ್ ಆಯಿತೋ ಮಿಂಚಿನ ವೇಗದಲ್ಲಿ ಕರ್ನಾಟಕ ಪೂರ್ತಿ ಸುತ್ತುತ್ತಿದ್ದಾರೆ. ಆಶ್ಚರ್ಯ ಅಂದರೆ ಡಾ. ಸಿ. ವೀರಣ್ಣ ಅದಕ್ಕೂ ಮೊದಲೇ ರಾಜ್ಯ ಪೂರ್ತಿ ಒಂದು ರೌಂಡ್ ಹಾಕಿ ಬಂದು ಬಿಟ್ಟಿರುವುದು.



ಡಾ.ಸಿ.ವೀರಣ್ಣ

ಇಲ್ಲಿ ಖರ್ಚುವೆಚ್ಚಗಳ ವಿಚಾರವನ್ನೇ ಒಂದಿಷ್ಟು ನೋಡೋಣ.

ಕಸಾಪಗೆ ರಾಜ್ಯಾದ್ಯಂತ 62 ಸಾವಿರದಷ್ಟು ಓಟರುಗಳಿದ್ದಾರೆ. ಜೊತೆಗೆ ಕೇರಳ, ಮುಂಬೈ, ಚೆನ್ನೈ, ಹೈದರಾಬಾದ್‌ಗಳಲ್ಲೂ ಘಟಕಗಳ ಸದಸ್ಯರಿದ್ದಾರೆ. ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಯೊಬ್ಬ ಎಲ್ಲಾ ಸದಸ್ಯರಿಗೂ ಕನಿಷ್ಠ ಪಕ್ಷ ಒಂದೊಂದು ಕರಪತ್ರ ಅಥವಾ ಬ್ರೋಚರ್ ಪೋಸ್ಟ್‌ನಲ್ಲಿ ಕಳಿಸಬೇಕೆಂದರೂ ಆರೆಂಟು ರೂಪಾಯಿ ಖರ್ಚಾಗುತ್ತದೆ. ಅಂದರೆ ಅದೇ ಹೆಚ್ಚುಕಡಿಮೆ ನಾಲ್ಕು ಲಕ್ಷ ರೂಪಾಯಿ!

ಆಮೇಲೆ ಓಟು ಕೇಳಿಕೊಂಡು ಊರೂರು ಸುತ್ತುವ ಕಾಯಕ ನಡೆಸಬೇಕು. ಒಂದೋ ಎರಡೋ ಕಾರು, ಜೊತೆಗೊಂದಿಷ್ಟು ಬೆಂಬಲಿಗರು, ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ಭೇಟಿ, ಪತ್ರಿಕಾಗೋಷ್ಠಿಗಳು, ಹೋಟೆಲ್ ರೂಮು, ಊಟ-ತಿಂಡಿ ಅಬ್ಬಬ್ಬಾ ತಾಯಿ ಭುವನೇಶ್ವರಿಯ ಸೇವೆ ಅಂದರೆ ಹೈರಾಣಾಗಿ ಹೋಗಬೇಕು ಹಾಗಿರುತ್ತದೆ. ಇದಕ್ಕೆಲ್ಲಾ ಆರೆಂಟು ಲಕ್ಷ ಖರ್ಚಾಗಲೇಬೇಕು. ಅಭ್ಯರ್ಥಿಗಳ ಜೊತೆಯಲ್ಲಿ ಗುಂಡು-ತುಂಡು ಚಾಳಿಯಿದ್ದವರೇನಾದರೂ ಇದ್ದರೆ ಮುಗಿದೇಹೋಯಿತು. ಈಗಿನ ಮುಂಗಾರು ಮಳೆ ಪ್ರವಾಹದಂತೆ ಹಣ ಹರಿದು ಚೆಲ್ಲಾಡಿಹೋಗುತ್ತದೆ. ಇನ್ನೊಂದು ವಿಚಾರ ಏನೆಂದರೆ ಅಭ್ಯರ್ಥಿಯೊಬ್ಬರ ಜನಪ್ರಿಯತೆ ಹಾಗೂ ವ್ಯಕ್ತಿತ್ವಕ್ಕೂ ಖರ್ಚು ಜಾಸ್ತಿ ಅಥವಾ ಕಡಿಮೆ ಮಾಡಿಸುವ ಶಕ್ತಿ ಇರುವುದು. ಉದಾಹರಣೆಗೆ ಕಳೆದ ಬಾರಿ ಚಂಪಾ ಸ್ಪರ್ಧಿಸಿದ್ದಾಗ ಸಿಂಪಲ್ಲಾಗಿ ಎಲ್ಲಾ ಸದಸ್ಯರಿಗೂ ಒಂದು ಪೋಸ್ಟ್ ಕಾರ್ಡ್ ಹಾಕಿ ಬೆಂಬಲ ಕೇಳಿ 12 ಸಾವಿರ ಲೀಡ್‌ನಲ್ಲಿ ಗೆದ್ದು ಬಂದಿದ್ದರು. ಜನಕ್ಕೆ ಚಂಪಾ ಬಗ್ಗೆ ಚೆನ್ನಾಗಿ ಗೊತ್ತಿದ್ದದ್ದರಿಂದ ಅವರಿಗೇನೊ ಚುನಾವಣೆ ಸುಲಭವಾಯಿತು. ಆದರೆ ಈಗಿನ ಅಭ್ಯರ್ಥಿಗಳಿಗೆ ಆ ಅವಕಾಶವಿಲ್ಲ. ಹಣ ಖರ್ಚು ಮಾಡದೆ ಬೇರೆ ದಾರಿಯೂ ಇಲ್ಲದಂತಾಗಿದೆ. ಆದಕ್ಕೇ ಇರಬೇಕು 'ಏನ್ ಸಾರ್ ಎಷ್ಟು ಖರ್ಚಾಗ್ತಿದೆ, ಹೇಗ್ ಮ್ಯಾನೇಜ್ ಮಾಡ್ತಿದ್ದೀರಿ' ಅಂತ ವಿಚಾರಿಸಿದರೆ ಬೆಚ್ಚಿಬಿದ್ದವರಂತೆ ವರ್ತಿಸುತ್ತಿದ್ದಾರೆ.

ಎಲ್ಲಿಂದ ಬರ್‍ತಿದೆ ಹಣ


ಸಿ.ಸೋಮಣ್ಣ

ಮೊದಲೇ ಹೇಳಿದಂತೆ ನಲ್ಲೂರು ಪ್ರಸಾದ್, ಸಿ. ವೀರಣ್ಣ, ವಿದ್ಯಾಶಂಕರ್ ಭಾರೀ ಹಣವಂತರೇನಲ್ಲ. ಆದರೂ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆಂಬುದೇ ಮುಜುಗರದ ವಿಚಾರ. ಏನಿದರ ಮೂಲ ಎಂದು ಚೆಕ್ ಮಾಡಿ ನೋಡಿದರೆ ಜಾತಿ ರಾಜಕಾರಣಿಗಳು, ಮಠಗಳು, ಕೆಲ ಬ್ಯುಸಿನೆಸ್‌ಮೆನ್‌ಗಳು ಹಣ ಇಲ್ಲಿ ಹರಿದಾಡುತ್ತಿರುವುದು ಕಾಣುತ್ತಿದೆ.

ಡಾ. ನಲ್ಲೂರು ಪ್ರಸಾದ್ ಮೂಲತಃ ಒಬ್ಬ ಸಜ್ಜನಿಕೆಯ, ಜಾತಿ ಮೀರಿದ ವ್ಯಕ್ತಿಯಾಗಿದ್ದರೂ ಕೂಡ ಈ ಬಾರಿಯ ಎಲೆಕ್ಷನ್‌ನಲ್ಲಿ ಅವರ ಸುತ್ತ 'ಒಕ್ಕಲಿಗ ಅಭ್ಯರ್ಥಿ'ಯೆಂಬ ಹಣೆಪಟ್ಟಿ ಅಂಟಿಕೊಂಡಿದೆ. ಅವರ ಆಪ್ತರೇ ಹೇಳುತ್ತಿರುವ ಪ್ರಕಾರ ಜಾತ್ಯತೀತ ಜನತಾದಳದ ನಾಯಕ ಕುಮಾರಸ್ವಾಮಿ, ಎಂಎಲ್‌ಸಿ ಪುಟ್ಟಣ್ಣ, ಚೆಲುವರಾಯಸ್ವಾಮಿ ನಲ್ಲೂರ್‌ಗೆ ಹಣಕಾಸಿನ ಸಹಾಯ ►►►

ಚಿಕ್ಕಮಗಳೂರು: ಅನಧಿಕೃತ ಬಣಕ್ಕೆ ಜಯ?

ಬೇರೆಲ್ಲ ಜಿಲ್ಲೆಗಳಲ್ಲಿ ಕಸಾಪ ಚುನಾವಣೆಗಳು ಒಂದು ರೀತಿ ನಡೆದರೆ, ಚೆಡ್ಡಿಗಳ ಕಾರಸ್ಥಾನವಾಗಿರುವ ಚಿಕ್ಕಮಗಳೂರಿನಲ್ಲಿ ಬೇರೆ ರೀತಿ ನಡೆಯುತ್ತಿದೆ. ಇದಕ್ಕೆ ಕಾರಣ ಹಳೇ ತಕರಾರು ಮತ್ತು ಹೊಸ ಸ್ಪರ್ಧೆ ಎಂದರೆ ತಪ್ಪಾಗಲಾರದು.

ಕಳೆದ ಬಾರಿ ಚಿಕ್ಕಮಗಳೂರು ಜಿಲ್ಲಾ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಶ್ರೀವತ್ಸ ಎಂಬುವವರ ನಾಯಕತ್ವದಲ್ಲಿ ಮೊದಮೊದಲು ಎಲ್ಲವೂ ಸರಿಯಾಗೇ ನಡೆಯಿತು. ಅದಕ್ಕೆ ಕಾರಣ ಅವರ ಪ್ರಗತಿಪರ ಮತ್ತು ಜಾತ್ಯತೀತ ಮನೋಭಾವ. ಸ್ವಲ್ಪ ಕಾಲದ ನಂತರ ಶೃಂಗೇರಿ ಜಿಲ್ಲಾ ಕಸಾಪ ಅಧ್ಯಕ್ಷರಾಗಿದ್ದ ವೆಂಕಣ್ಣಯ್ಯ ಎಂಬುವವರು ವೈಯಕ್ತಿಕ ತೊಂದರೆಗಳ ಕಾರಣದಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಆಗ ಜಿಲ್ಲಾಧ್ಯಕ್ಷ ಶ್ರೀವತ್ಸ ಅವರಲ್ಲಿ ಹುದುಗಿದ್ದ ಸ್ವಜಾತಿ ಪ್ರೇಮವೋ, ಇನ್ಯಾವ ಕಾರಣವೋ ಅವರು ಚೆಡ್ಡಿಗಳ ವಲಯದಲ್ಲಿ ಹೆಸರು ಮಾಡಿದ್ದ ಮತ್ತು ತಮಗೆ ಆಪ್ತರಾಗಿದ್ದ ಪುಷ್ಪಾ ಲಕ್ಷ್ಮೀನಾರಾಯಣ ಎಂಬ ಘಟವಾಣಿ ಹೆಂಗಸನ್ನು ಶೃಂಗೇರಿ ತಾಲ್ಲೂಕು ಕಸಾಪ ಅಧ್ಯಕ್ಷೆ ಸೀಟಿಗೆ ತಂದು ಕೂರಿಸಿದರು.


ಈ ಮಹಿಳೆ ತಾಲ್ಲೂಕು ಅಧ್ಯಕ್ಷೆ ಸ್ಥಾನವನ್ನು ಅಲಂಕರಿಸುತ್ತಿದ್ದಂತೇ ತನ್ನನ್ನು ಆಯ್ಕೆಮಾಡಿ ಅನುಮೋದಿಸಿದ್ದ ಕಾರ್ಯಕಾರಿ ಸಮಿತಿಯನ್ನೇ ರದ್ದು ಮಾಡಿದರು. ಜೊತೆಗೆ ತನಗಿಷ್ಟ ಬಂದವರ ಮತ್ತೊಂದು ಸಮಿತಿಯನ್ನು ರಚಿಸಿ ದೊಡ್ಡ ವಿವಾದವನ್ನೇ ಸೃಷ್ಟಿಸಿದರು.

ಇದರಿಂದ ವ್ಯಘ್ರಗೊಂಡ ಆಜೀವ ಸದಸ್ಯರೆಲ್ಲಾ "ನಿನ್ನ ಸಮಿತಿಯನ್ನು ನೀನೇ ಇಟ್ಟುಕೋ, ನಮಗೆ ಬೇಕಾದ ಸಮಿತಿಯನ್ನು ನಾವು ರಚಿಸಿಕೊಳ್ಳುತ್ತೇವೆ" ಎಂದು ತಮ್ಮದೇ ಆದ ಮತ್ತೊಂದು ಸಮಿತಿಯನ್ನು ರಚಿಸಿಕೊಂಡು ಅದಕ್ಕೆ ನಟಶೇಖರ್ ಎಂಬ ಸಭ್ಯ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ನೇಮಿಸಿದರು. ಹೀಗೆ ಶೃಂಗೇರಿ ತಾಲ್ಲೂಕು ಕಸಾಪ ಎರಡೆರಡು ಬಣವಾಗಿ ಬೇರ್ಪಟ್ಟಿತ್ತು.

ಸಾಹಿತ್ಯ ಪರಿಷತ್‌ನ ಬೈಲಾ ಪ್ರಕಾರ, ಕಾನೂನುಬದ್ಧವಾಗಿ ಈ ರಾಜಕಾರಣಿ ಹೆಂಗಸು ಪುಷ್ಪಾ ಅಧ್ಯಕ್ಷೆಯಾದರೂ ಕಸಾಪ ಚಟುವಟಿಕೆಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ್ದು ಅನಧಿಕೃತವಾಗಿ ನಿರ್ಮಾಣಗೊಂಡ ನಟಶೇಖರ್ ಬಣವೇ. ಈ ನಟಶೇಖರ್‌ಗೆ ತಾಲ್ಲೂಕಿನ ಎಲ್ಲಾ ಆಜೀವ ಸದಸ್ಯರ ಬೆಂಬಲವಿದ್ದ ಕಾರಣ ಅವರು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುವಂತಾಯಿತು.

ಕ.ಸಾ.ಪ. ಚುನಾವಣಾ ಗದ್ದಲ

ಕಸಾಪದಂತಹ ಒಂದು ಸಂಘಟನೆಯ ಒಂದು ಜಿಲ್ಲಾ ಘಟಕವೇ ಹೀಗೆ ಎರಡೆರಡು ಬಣಗಳಾಗಿದ್ದರೂ ಅಂದಿನ ರಾಜ್ಯ ಕಸಾಪ ಅಧ್ಯಕ್ಷ ಚಂಪಾ ಮಾತ್ರ "ಬಣಗಳು ಎಷ್ಟಾದರೂ ಅದು ಕನ್ನಡಕ್ಕೇ ಒಳ್ಳೇದು" ಎಂದು ಹೇಳಿ ಈ ವಿವಾದದಿಂದ ನಾಜೂಕಾಗಿ ಜಾರಿಕೊಂಡಿದ್ದರು.



ಇಷ್ಟೆಲ್ಲಾ ವಿವಾದಗಳ ನಂತರ ಈ ಬಾರಿಯ ಚುನಾವಣೆಯಲ್ಲಿ ಹಿಂದೆ ಅನಧಿಕೃತವಾಗಿ ಶೃಂಗೇರಿ ತಾಲ್ಲೂಕು ಅಧ್ಯಕ್ಷರಾಗಿ ನೇಮಕಗೊಂಡಿದ್ದ ವಕೀಲ ನಟಶೇಖರ್ ಈಗ ಚಿಕ್ಕಮಗಳೂರು ಜಿಲ್ಲಾ ಕಸಾಪದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ. ಈ ಬಾರಿ ಶ್ರೀವತ್ಸ ಗ್ಯಾಂಗಿನಿಂದ ಚಂದ್ರಪ್ಪ ಎಂಬುವವರೂ ಸ್ಪರ್ಧಿಸಿದ್ದಾರೆ. ಆದರೆ ಗೆಲುವು ಮಾತ್ರ ನಟಶೇಖರ್ ಅವರದ್ದೇ ಎಂಬ ವಾತಾವರಣವು ಚಿಕ್ಕಮಗಳೂರಿನಲ್ಲಿದೆ. ಅಲ್ಲದೇ ಚಿಕ್ಕಮಗಳೂರಿನಿಂದ ರಾಜ್ಯ ಕಸಾಪ ಅಧ್ಯಕ್ಷರ ಆಯ್ಕೆಗೆ ನಲ್ಲೂರು ಪ್ರಸಾದ್ ಮುಂದಿದ್ದಾರೆ. ■

ಧಾರವಾಡ ಜಿಲ್ಲಾ ಕಸಾಪ ಚುನಾವಣೆ: ಡಾ.ಡಿ.ಎಂ.ಹಿರೇಮಠ್ ಗೆದ್ದಾಗಿದೆ!

ಧಾರವಾಡ ಜಿಲ್ಲೆಗೂ ಕನ್ನಡ ಸಾಹಿತ್ಯ ಪರಿಷತ್ತು ಅಂತ ಒಂದಿದೆ. ಅದು ಇರದಿದ್ದರೆ ಯಾವ ಹಾನಿಯೂ ಆಗುತ್ತಿರಲಿಲ್ಲ. ಧಾರವಾಡದಲ್ಲಿ ಅದಕ್ಕಿಂತಲೂ ಹೆಚ್ಚಿನ ಪ್ರಾಚೀನತೆ ಹಾಗೂ ಮಹತ್ವ ಪಡೆದ ಸಂಘ ಸಂಸ್ಥೆಗಳಿವೆ. ತೀರ ಇತ್ತೀಚಿನವರೆಗೆ ಯಂಕ, ನಾಣಿ, ಸೀನ ಎಂಬಂತೆ ಕೆಲವರೇ ಕ.ಸಾ.ಪದಲ್ಲಿ ಸದಸ್ಯರಾಗಿದ್ದುದ್ದರಿಂದ ಅದು ಜನಬಳಕೆಯಲ್ಲಿ ಇರಲೇ ಇಲ್ಲ. ಎಲ್ಲದಕ್ಕೂ ಮಿಗಿಲಾಗಿ ಜಾತಿಯ ದುರ್ವಾಸನೆಯಿಂದಾಗಿ ಒಂದು ಜಾತಿಯ ಪಂಡಿತರೇ ಪಾಳೇಗಾರರಾಗಿದ್ದುದರಿಂದ ಅಲ್ಲಿ ಉಳಿದ ಪಾಮರರು ಸುಳಿಯುವಂತಿರಲಿಲ್ಲ.

ಬಸವರಾಜ ಕಟ್ಟೀಮನಿ, ಡಾ. ಗುರುಲಿಂಗ ಕಾಪಸೆಯಂತಹ ವಿದ್ವಾಂಸರೂ ಕೂಡ ಅಧ್ಯಕ್ಷರಾಗಿದ್ದರಾದರೂ ಅವರೆಲ್ಲ ಕೇವಲ ಭಾಷಣಪ್ರಿಯರಾಗಿದ್ದರೇ ಹೊರತು ಪರಿಷತ್ತಿನ ಅಭಿವೃದ್ಧಿಯ ಕಡೆಗೆ ಲಕ್ಷ್ಯ ವಹಿಸಲಿಲ್ಲ. ನಂತರದಲ್ಲಿ ಜಿ.ಬಿ. ಮನ್ಸಾಬಾರ ಅಧ್ಯಕ್ಷರಾಗಿದ್ದ ಸಮಯದಲ್ಲಿ ಪರಿಷತ್ತಿನ ಕಟ್ಟಡಕ್ಕಾಗಿ ಸರ್ಕಾರ ಜಮೀನು ಮಂಜೂರು ಮಾಡಿ ನಂತರ ಡಾ. ಶಿವಾನಂದ ಗಾಳಿಯ ಮೂರು ಅವಧಿಯ ಅಧ್ಯಕ್ಷತೆಯಲ್ಲಿ ಅಲ್ಲೊಂದು ಕಟ್ಟಡವೂ ಎದ್ದು ನಿಂತಿತು. ಅದಿಷ್ಟೇ ಗಾಳಿ ಮಾಡಿದ ಸಾಧನೆ. ಉಳಿದಂತೆ ಮಾಡಿದ್ದೆಲ್ಲ ಸ್ವಸೇವೆಯೆ. ಆಮೇಲೆ, ವೀರಣ್ಣ ರಾಜೂರ, ಮಧು ವೆಂಕಾರೆಡ್ಡಿ ಎಂಬ ನಿರುಪದ್ರವಿ ಸಾಹಿತಿಗಳು ಪರಿಷತ್ತಿನ ಅಧ್ಯಕ್ಷ ಪಟ್ಟಕ್ಕೇರಿ ಅದನ್ನು ಅವನತಿಯ ಹಾದಿಗೆ ತರುವುದಕ್ಕೆ ಏನು ಬೇಕೋ ಅದನ್ನೆಲ್ಲಾ ಮಾಡಿದರು. ಹೀಗಾಗಿ ಅನೇಕ ಪ್ರಗತಿಪರ, ಬಂಡಾಯ, ದಲಿತ ಸಾಹಿತಿಗಳು ಲೇಖಕರು ಕಸಾಪದಿಂದ ದೂರಾಗಿ ಉಳಿದಿದ್ದಾರೆ.

ಹಿಂದೆ ಸಾಹಿತ್ಯ ಪರಿಷತ್ತಿನ ಚುನಾವಣೆ ಎಂದರೆ ಏನಿಲ್ಲ ಅಂದರೂ ಒಂದು ಸಣ್ಣ ಮಟ್ಟದ ಚರ್ಚೆಯಾದರೂ ಆಗುತ್ತಿತ್ತು. ಈಗ ಅದೆಷ್ಟು ಕಳೆಗುಂದಿದೆ ಎಂದರೆ, ಈ ಬಾರಿ ಚುನಾವಣೆ ನಡೆಯುವ ಮೊದಲೇ ಅದರ ಫಲಿತಾಂಶ ಹೊರಬಿದ್ದು ಡಾ. ಡಿ.ಎಂ. ಹಿರೇಮಠ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಎಲ್ಲ ಮುಗಿದ ಮೇಲೆ ನಮ್ಮದೇನು ಎಂಬಂತೆ ಉಳಿದವರೂ ಮೌನವಾಗಿ ಕುಳಿತಿದ್ದಾರೆ.

ಡಾ. ಡಿ.ಎಂ. ಹಿರೇಮಠರನ್ನು ಯಾವ ಮಗ್ಗುಲಿನಿಂದ ನೋಡಿದರೂ ಸಾಹಿತಿ ಅನ್ನಿಸಿಕೊಳ್ಳುವ ಗುಣಲಕ್ಷಣ ಕಾಣುವುದಿಲ್ಲ. ಅಂತೂಇಂತೂ ಕನ್ನಡದಲ್ಲಿ ಪಿಎಚ್‌ಡಿ ಪಡೆದಿದ್ದೇ ಈತನ ಮಹತ್ಸಾಧನೆ. ಇವರನ್ನು ಜನ ಗುರುತಿಸುವುದು ಒಬ್ಬ ಸಾಹಿತಿ ಎಂದಲ್ಲ, ಬದಲಿಗೆ ಒಬ್ಬ ಸಭ್ಯ ಹಾಗೂ ಸುಸಂಸ್ಕೃತ ನಡವಳಿಕೆಯ ವ್ಯಕ್ತಿ ಎಂದು ಮಾತ್ರ. ಸಾಹಿತ್ಯದ ಪರಿಚಾರಿಕೆಗೆ ಹೇಳಿಮಾಡಿಸಿದಂತಿರುವ ಈತನ ಸರಳತೆಯೇ ಈತನನ್ನು ಸುಲಭವಾಗಿ ಆಯ್ಕೆಯಾಗುವಂತೆ ಮಾಡಿದ್ದೂ ಸಹ ಒಂದು ವಿಚಿತ್ರವೇ!

'ನಾನೂ ಒಂದು ಕೈ ನೋಡಿಯೇ ಬಿಡುತ್ತೇನೆ' ಅಂತ ನಿರ್ಧಾರ ಮಾಡಿಕೊಂಡು ಸಜ್ಜಾಗಿದ್ದ ಮೋಹನ ನಾಗಮ್ಮನವರ ಮಾಧ್ಯಮಗಳಲ್ಲಿ ಸುದ್ದಿ ಮಾಡಿದ್ದರು. ಆದರೆ ಅದೇನಾಯಿತೋ ಗೊತ್ತಿಲ್ಲ, ಅದೇನು ರೋಗ ಬಂತೋ ಗೊತ್ತಿಲ್ಲ ಇದ್ದಕಿದ್ದಂತೆ ಮಧ್ಯರಾತ್ರಿಯಲ್ಲಿ ಬುದ್ಧನಿಗೆ ಎಚ್ಚರವಾದಂತೆ ನಾಮಪತ್ರ ಹಿಂಪಡೆದು ಅವಿರೋಧ ಆಯ್ಕೆಯ ಸೂತ್ರ

ಒಂದು 'ನ'ಕಾರ ಎರಡು 'ವಿ'ಕಾರ ಎಂಬ 'ಚ' ಕಾರ

ಸುಮ್ಮನೆ ಇದೊಂದು ಚೇಷ್ಟೆಯ ಮಾತು. ಕನ್ನಡದ ಗಣ್ಯ ಾಹಿತಿಯೊಬ್ಬರನ್ನು ಕಸಾಪ ಎಲೆಕ್ಷನ್ ಬಗ್ಗೆ ಕೇಳಿದಾಗ ಅವರು ೀಡಿಂಗ್ ಅಭ್ಯರ್ಥಿಗಳಾದ ನಲ್ಲೂರ್, ವೀರಣ್ಣ, ವಿದ್ಯಾಶಂಕರ್‌ರವರ ಬಗ್ಗೆ ಅದೂ ಇದೂ ಮಾತಾಡುತ್ತಾ ಕೊನೆಗೆ ತಮಾಷೆಯಾಗಿ ಹೇಳಿದ್ದು:

'ಹೋಗ್ಲಿ ಬಿಡ್ರಿ, ಇವರು ಮೂವರು ಪೈಕಿ ಒಂದು ನಕಾರ, ಇನ್ನಿಬ್ಬರು ವಿಕಾರ' ಅಂತ.

ಈ ಮಾತು ಸರಿಬರದಿದ್ದವರು ಹಾಗೆ ಹೇಳಿ ನಗಾಡಿದ ಮಾತಿನ ಮಲ್ಲಿನ ಬಳಿ ಬೇಕಿದ್ದರೆ 'ಚ'ಕಾರ ಎತ್ತಬಹುದು.

ಮಾಡಿದ್ದಾರಂತೆ. ಜೊತೆಗೆ ಕಸಾಪದ strong man ಪುಂಡಲೀಕ ಾಲಂಬಿಯೂ ಸ್ವಲ್ಪ ವಂತಿಗೆ ಸಂಗ್ರಹಿಸಿ ಪ್ರಸಾದ್‌ಗೆ ಕೊಡಿಸಿದ್ದಾರೆ.

ಪುಟ್ಟಣ್ಣ ಇತ್ತೀಚೆಗೆ ಎಂಎಲ್‌ಸಿ ಎಲೆಕ್ಷನ್‌ಗೆ ನಿಂತಿದ್ದಾಗ ನಲ್ಲೂರು ಪ್ರಸಾದ್ ಅವರ ಪರ ಓಡಾಡಿ ಗೆಲುವಿಗೆ ಶ್ರಮಿಸಿದ್ದರು. ಅದಕ್ಕೆ ಪ್ರತಿಯಾಗಿ ಈಗ ಪುಟ್ಟಣ್ಣ ನಲ್ಲೂರ್‌ಗೆ ನೆರವಾಗುತ್ತಿದ್ದಾರೆ.

ಇನ್ನು ಡಾ. ಸಿ. ವೀರಣ್ಣನವರ ವಿಚಾರಕ್ಕೆ ಬಂದರೆ ಅವರಿಗೆ ೇಡವಾದರೂ 'ಲಿಂಗಾಯತ ಅಭ್ಯರ್ಥಿ' ಹಣೆಪಟ್ಟಿ ಬಿದ್ದಿದೆ. ಬಹುಶಃ ಚಾರವಾದಿ ಹಾಗೂ ಜಾತ್ಯತೀತ ಹಿನ್ನೆಲೆಯವರಾಗಿದ್ದಾಗಲೂ ಈ ಂತದಲ್ಲಿ ವೀರಣ್ಣ ಆ ಹಣೆಪಟ್ಟಿಯನ್ನು ತಕ್ಷಣಕ್ಕೆ ಕಿತ್ತು ಬಿಸಾಡಲಾರ ಂದೆನಿಸುತ್ತದೆ. ಅವರಿಗೆ ಬಾಲ್ಯದ ಗೆಳೆಯ ಸಿ.ಎಚ್. ಹನುಮಂತರಾಯ ರವಾಗುತ್ತಿದ್ದಾರೆ. ಕಲ್ಯಾಣ್ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿಯ ುವರಾಜ್‌ರ ಧನ ಬೆಂಬಲವೂ ಸಿಕ್ಕಿದೆ. ಮುಖ್ಯವಾಗಿ ಲಿಂಗಾಯತ ಾಸಕ ವಿ. ಸೋಮಣ್ಣ ಹಾಗೂ ಕೆಲ ಲಿಂಗಾಯತ ಮಠಗಳಿಂದಲೂ ೀರಣ್ಣನವರಿಗೆ ಹಣ ಸಹಾಯ ಸಿಗುತ್ತಿದೆ. ವಿಜಯನಗರದ ಶಾಸಕ ೇಟಿಟ್ ಕೃಷ್ಣಪ್ಪನವರ ಹೆಸರೂ ಕೇಳಿಬರುತ್ತಿದೆ.

ಸದ್ಯಕ್ಕೆ ಇವರಿಬ್ಬರ ಅಬ್ಬರದಲ್ಲಿ ಉಳಿದವರು ಮಂಕಾಗಿ ಕಾಣುತ್ತಿದ್ದಾರೆ. ಾಗೆ ನೋಡಿದರೆ ನಲ್ಲೂರು ಪ್ರಸಾದ್, ಸಿ. ವೀರಣ್ಣ, ಸೋಸಲೆ ಜವರಯ್ಯ, ೦. ವಿದ್ಯಾಶಂಕರ್ ಇವರ ಪೈಕಿ ಪ್ರತಿಯೊಬ್ಬರೂ ಕಸಾಪ ಅಧ್ಯಕ್ಷರಾಗಬಲ್ಲ ರ್ಹತೆ ಇರುವವರೇ.

ಆದರೆ ಕಸಾಪ ಅಧ್ಯಕ್ಷಗಿರಿ ಕೇವಲ ಪ್ರತಿಭೆ, ಸಜ್ಜನಿಕೆ, ಕನ್ನಡ ಪರ ಾಳಜಿಗಳನ್ನಷ್ಟೇ ಕೇಳುವ ಹಂತ ದಾಟಿ ಹೋಗಿದೆ. ಕನ್ನಡಕ್ಕೂ ಈಗ ಬ್ಬರದ ಪ್ರಚಾರ, ಹಣ, ಜಾತಿ, ಕುಸ್ತಿ, ಲಾಬಿ, ಕಿತಾಪತಿಗಳೆಲ್ಲಾ ೀಕಾಗಿರುವಂತೆ ಕಾಣುತ್ತಿದೆ.

ನಾಳಿನ ಚುನಾವಣೆ ಕೂಡ ಇದೆಲ್ಲದರ ಮೊತ್ತವೇ ಆಗಿರುತ್ತದೆ.

ಕೊನೆಯದಾಗಿ ಕಸಾಪ ಸದಸ್ಯರುಗಳು ಕನ್ನಡದ ಸಾಂಸ್ಕೃತಿಕ ವಾತಾವರಣ ನ್ನಷ್ಟು ರೋಗಗ್ರಸ್ತವಾಗದಂತೆ ಒಂದು ಉಪಕಾರ ಮಾಡಬಹುದು.

ಅದು,

ನಾಳಿನ ಚುನಾವಣೆಯಲ್ಲಿ ಮತ ಹಾಕುವಾಗ ಜಾತಿಯ ಕಾರಣಕ್ಕೆ ಯಾರನ್ನೇ ಆಗಲಿ ಬೆಂಬಲಿಸಕೂಡದು.

ನಿಜವಾದ ಕನ್ನಡ ಕಟ್ಟುವ ಕೆಲಸ ಹೀಗೇ ಶುರುವಾಗಿ ಗಟ್ಟಿಗೊಳ್ಳಲಿ.

■ ವರದಿಗಾರ

ುಂದಿಟ್ಟುಬಿಟ್ಟರು. ಸಾಹಿತ್ಯ ವಲಯದಲ್ಲಿ ಸ್ಪರ್ಧೆ ಬೇಡವೆಂಬ ಾತಿಗೆ ಮನ್ನಣೆ ದೊರೆತು ಪಕ್ಕದ ಹಾವೇರಿ ಜಿಲ್ಲೆಯಲ್ಲಿ ಮಾರುತಿ ಾಪುರ ಅವಿರೋಧ ಆಯ್ಕೆಯಾದರೆ ಧಾರವಾಡದಲ್ಲಿ ಅದಕ್ಕೆ ಕಿಮ್ಮತ್ತೇ ಗಲಿಲ್ಲ.


ಸ್ಪರ್ಧೆಗಿಳಿದ ನಾಲ್ವರು ಹಾಗೂ ಹಿರಿಯರ ಮಾತಿಗೆ ಕವಡೆ ಕಿಮ್ಮತ್ತೂ ಡದ ಹನುಮಾಕ್ಷಿ ಗೋಗಿ ಎಂಬಾಕೆ ಬೆಂಗಳೂರಿನಲ್ಲಿರುವ ತನ್ನ ಕರಿಗೆ ಒಂದು ತಿಂಗಳ ರಜೆ ಹಾಕಿ ಚುನಾವಣೆಗಾಗಿ ಧಾರವಾಡಕ್ಕೆ ುದು ಕುಕ್ಕರಿಸಿಬಿಟ್ಟಳು. ತನ್ನ ಸೇವಾವಧಿಯುದ್ದಕ್ಕೂ ಸಸ್ಪೆಂಡ್ ಚರಿತ್ರೆ ರುವ ಮತ್ತು ಭಯಾನಕ ಬೈಗುಳದಲ್ಲಿ ಸಾಕಷ್ಟು ಹೆಸರು ಮಾಡಿರುವ ಈಕೆ ತನ್ನ ವಯೋವೃದ್ಧ ಗಂಡನೊಬ್ಬನನ್ನು ಬಿಟ್ಟು ಮಿಕ್ಕಿದ್ದೆಲ್ಲವನ್ನೂ ಂಗಳೂರಿಗೆ ಸ್ಥಳಾಂತರಿಸಿದ್ದಾಳೆ. ಈಯಮ್ಮ ಮಾಡಿದ ಅಮೋಘ ಹಿತ್ಯ ಕೃಷಿ ಎಂದರೆ ಅಪರಿಮಿತ ಬೈಗುಳಗಳನ್ನು ಬಳಸಿದ್ದು ಹಾಗೂ ರ ಬರಹಗಾರ್ತಿಯರ ತೇಜೋವಧೆಗೆ ಬೇಕಾದ ತಂತ್ರಗಳನ್ನು ಬಳಸಿದ್ದು! ಯಮ್ಮ ತಮ್ಮ ಬ್ಯಾಂಕ್‌ಬ್ಯಾಲೆನ್ಸ್ ಹೆಚ್ಚಿಸುವುದಕ್ಕೋಸ್ಕರ ಮಾತ್ರವೇ ಗಲಿರುಳೂ ಶ್ರಮಿಸುತ್ತಾರೆಂದರೆ ಇವರಿಂದ ಇನ್ನೆಂಥ ಸಾಹಿತ್ಯ ್ಟಿಯಾಗುತ್ತದೆ ಹೇಳಿ?

ಈಗ ಧಾರವಾಡದಲ್ಲಿ ಸಾಹಿತ್ಯ ಪರಿಷತ್ತಿನ ಚುನಾವಣೆ ಎಂದರೆ ್ಲರೆಲ್ಲ ಭಯಭೀತರಾಗುವಂತಹ ಸ್ಥಿತಿ ನಿರ್ಮಾಣವಾಗಿದೆ. ಸಾಹಿತ್ಯ ದ್ದ ಆಗಸದಲ್ಲೀಗ ಅಸ್ಪಷ್ಟ ಕರಿನೆರಳು ಮೂಡಿ ಈಗಲೇ ಹೀಗಾದರೆ ುಂದೆ ಹೇಗೋ ಎಂದು ಅವರೆಲ್ಲ ಗಲಿಬಿಲಿಗೊಂಡುಬಿಟ್ಟಿದ್ದಾರೆ. ಾದರಾಗಲಿ ಮತಹಾಕುವ ಶಾಸ್ತ್ರವೊಂದನ್ನು ಪೂರ್ಣಗೊಳಿಸುವ ಪಾರ್ಯತೆಯಲ್ಲಿ ಅವರಿದ್ದಾರೆ. ಇದ್ದುದರಲ್ಲಿ ಸಭ್ಯ ಎನಿಸಿಕೊಂಡಿರುವ . ಡಿ.ಎಂ. ಹಿರೇಮಠ ಕಡೆಗೆ ಅವರೆಲ್ಲ ವಾಲುವುದರಿಂದ ಒಂದು ಸಿಯಲ್ಲಿ ಹಿರೇಮಠ್ ಗೆದ್ದಾಗಿದೆ ಎಂದೇ ಹೇಳಬೇಕು.

■ ಹುಬ್ಬಳ್ಳಿಯಾಂವ

ದಕ್ಷಿಣ ಕನ್ನಡ: ಕಲ್ಕೂರ ಗೆಲುವು ಮಾಣಿಗಳ ಕೈಯಲ್ಲಿ

ಒಂದು ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತು ಮುತ್ಸದರ ಚಟುವಟಿಕೆಗಳೆಂದರೆ, ಸಾಹಿತ್ಯಾಸಕ್ತರೇ ತುಂಬಿಕೊಂಡು ಸಾಹಿತ್ಯಿಕ ಚಟುವಟಿಕೆಗಳಿಂದ ನಳನಳಿಸುತ್ತಿತ್ತು. ಆದರೆ ಕಳೆದ ಎರಡು ದಶಕಗಳಲ್ಲಿ ಆಳಿದ ಊರಿಗೆ ಉಳಿದವನೇ ಗೌಡ ಎಂಬಂತೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿರುವವನು ಜಾಹೀರಾತು ಗಿರಾಕಿ ಪ್ರದೀಪ್ ಕುಮಾರ್ ಕಲ್ಕೂರ. "ಸಾಹಿತ್ಯ ಪರಿಷತ್ತಿಗಾಗಿ ಲಕ್ಷ ಲಕ್ಷ ಜೇಬಿನಿಂದ ಖರ್ಚು ಮಾಡಿದ್ದೇನೆ" ಎಂದು ಕಲ್ಕೂರ ಅವಕಾಶ ಸಿಕ್ಕಾಗಲೆಲ್ಲ ಹೇಳುತ್ತಿರುತ್ತಾನೆ.


ಸದಾಶಿವ


ಇವನು ನೀಡುವ ಲೆಕ್ಕ ಬದಿಗಿರಲಿ. ವಾಸ್ತವವಾಗಿ ಈತ ಕಳೆದ ಆರು ವರ್ಷಗಳಿಂದ ಪರಿಷತ್ತಿನ ಮಹಾಸಭೆಯನ್ನೇ ಕರೆದಿಲ್ಲ. ಇನ್ನು ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನವನ್ನೂ ಸಂಘಟಿಸಿಲ್ಲ. ಆದರೆ ತಾನು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂದು ಮೆರೆಯುವುದನ್ನೇ ಚಾಳಿಮಾಡಿಕೊಂಡಿರುವ ಕಲ್ಕೂರ ಸಾಹಿತ್ಯ ಸೇವೆ ಎಂದರೆ ಹಣ ಖರ್ಚು ಮಾಡುವುದಷ್ಟೇ ಎಂದು ತಿಳಿದಿರುವ ಮೆಂಟಾಲಿಟಿಯ ಮನುಷ್ಯ. ಈತನ ಹಣ, ದೌಲತ್ತು ಮತ್ತು ಧಿಮಾಕುತನಗಳಿಂದ ದ.ಕ ಜಿಲ್ಲಾ ಸಾಹಿತ್ಯ ಪರಿಷತ್ತು ಎಂಬುದು ಕಲ್ಕೂರನ ಜಾಹೀರಾತು ಕಂಪೆನಿಯಾಗಿ ಬಿಟ್ಟಿದೆ.

ಸಂತೋಷದ ಸಂಗತಿಯೆಂದರೆ ಇದೀಗ ಪ್ರಥಮ ಬಾರಿಗೆ ದ.ಕ. ಜಿಲ್ಲಾ ಸಾಹಿತ್ಯ ಪರಿಷತ್ತು ಅಧ್ಯಕ್ಷಗಿರಿಗೆ ಆರೋಗ್ಯಕಾರಿ ಸ್ಪರ್ಧೆಯೊಂದು ಏರ್ಪಟ್ಟಿದೆ. ಸುಳ್ಯದಲ್ಲಿನ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾ ಬಂದಿರುವವರು ಎಂ.ಬಿ ಸದಾಶಿವ. ಈ ಹಿಂದೆ ಜಿಲ್ಲೆಯಲ್ಲಿ ಕೋಮು ಸೌಹಾರ್ದಕ್ಕೆ ಧಕ್ಕೆಯಾದಾಗಲೆಲ್ಲಾ ಗಟ್ಟಿ ಧ್ವನಿಯಲ್ಲಿ ಪ್ರತಿಭಟಿಸಿದ ಕೆಲವೇ ಮಂದಿಯಲ್ಲಿ ಇವರೂ ಒಬ್ಬರು. ಚತುರ ಸಂಘಟಕನಾಗಿ, ಪತ್ರಕರ್ತನಾಗಿ, ಅಂಕಣಕಾರನಾಗಿ, ಕೆಲವು ಅಭಿನಂದನಾ ಗ್ರಂಥಗಳಿಗೆ ಸಂಪಾದಕನಾಗಿ ಅಕ್ಷರ ಸೇವೆ ಮಾಡಿರುವ ಸಾಹಿತ್ಯಿಕ ಅನುಭವಿ.


ಕಲ್ಕೂರ

ಇತರೆ ಏನೇ ನ್ಯೂನತೆಗಳಿರಲಿ, ತಾನು ನಂಬಿಕೊಂಡು ಬಂದಿರುವ ಜಾತ್ಯತೀತ ನಿಲುವಿನಲ್ಲಿ ಎಂದೂ ರಾಜಿಮಾಡಿಕೊಳ್ಳದ ಸದಾಶಿವ ಚುನಾವಣಾ ಕಣಕ್ಕೆ ಇಳಿದು ಕಲ್ಕೂರನ ಸರ್ವಾಧಿಕಾರಕ್ಕೆ ತಕ್ಕುದಾದ ಸ್ಪರ್ಧೆಯನ್ನೊಡ್ಡಿದ್ದಾರೆ. ಈ ನಿಟ್ಟಿನಲ್ಲಿ 'ಬಂದಣಿಕೆ'ಯಂತೆ ಜಿಲ್ಲಾ ಸಾಹಿತ್ಯ ಪರಿಷತ್ತಿಗೆ ಅಂಟಿಕೊಂಡಿರುವ ಕಲ್ಕೂರನಿಂದ ಆ ಸಂಸ್ಥೆಯನ್ನು ರಕ್ಷಿಸಲೋಸುಗವಾದರೂ ಸದಾಶಿವರನ್ನು ಸಾಹಿತ್ಯಾಭಿಮಾನಿಗಳು ಬೆಂಬಲಿಸುವುದು ಅನಿವಾರ್ಯವಾಗಿದೆ.

ಉಡುಪಿ ಭಟ್ಟರ ಖ್ಯಾತಿಯ ಪುಳಿಚಾರ್ ಊಟಕ್ಕೂ ದ.ಕ ಜಿಲ್ಲಾ ಸಾಹಿತ್ಯ ಪರಿಷತ್ತಿಗೂ ಹತ್ತಿರದ ನಂಟು. ಸಾಹಿತ್ಯ ಪರಿಷತ್ತಿಗೆ ಈ ಊಟದ ನಂಟು ಅಂಟಿಕೊಂಡಿದ್ದು ಮುಲ್ಕಿಯ ಹೊಟೇಲಿಯರ್ ಹರಿಕೃಷ್ಣ ಪುನರೂರು ಜಿಲ್ಲಾ ಕಸಾಪದ ಅಧ್ಯಕ್ಷನಾಗಿ ಅಮರಿಕೊಂಡ ನಂತರವೇ.


ಹರಿಕೃಷ್ಣ

ಎಪ್ಪತ್ತರ ದಶಕದಲ್ಲಿ ತಮ್ಮ ಸಾಹಿತ್ಯಿಕ ಚಟುವಟಿಕೆಗಳಿಂದಲೇ ದ.ಕ. ಜಿಲ್ಲೆಯ ಕಸಾಪದ ಪ್ರಥಮ ಅಧ್ಯಕ್ಷರಾಗಿದ್ದವರು ಬಿ.ಎಂ ಇದಿನಬ್ಬ. ತದನಂತರ ಈ ಗಾದಿಗೆ ಅರ್ಹವಾಗಿಯೇ ಆಯ್ಕೆಯಾದವರು ಟೀಕಾಣ ರಾಮಚಂದ್ರ ರಾಯರು. ಅದು ಸಾಹಿತ್ಯ ಪರಿಷತ್ತು ವೈಭವಯುತವಾಗಿದ್ದ 80ರ ದಶಕ. ಡಿ.ವಿ.ಜಿ. ಪಂಜೆ ಮಂಗೇಶರಾಯರ ಶತಮಾನೋತ್ಸವ, ಧರ್ಮಸ್ಥಳದಲ್ಲಿ 51ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳು ಆ ಕಾಲಘಟ್ಟದಲ್ಲಿಯೇ ಜರಗಿದ್ದು. ಎಸ್.ವಿ ಪರಮೇಶ್ವರ ಭಟ್ಟ, ಕುಲ್ಯಾಡಿ ಮಾಧವ ಪೈಯಂತಹ ಸಾಹಿತ್ಯ ಪೋಷಕರ ದುಡಿಮೆ ಇವತ್ತಿಗೂ ಅವಿಸ್ಮರಣೀಯ.

1987ರಲ್ಲಿ ಮೂಲ್ಕಿಯ ಬಪ್ಪನಾಡು ಕ್ಷೇತ್ರದಲ್ಲಿ 3ನೇ ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಳನ ಜರುಗಿತು. ಈ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದವರು ಸ್ಥಳೀಯ ಹೋಟೆಲ್ ಉದ್ಯಮಿ ಹರಿಕೃಷ್ಣ ಪುನರೂರು. ಮೂಲ್ಕಿಯ ಈ ಸಮ್ಮೇಳನ 'ಭರ್ಜರಿ' ಊಟೋಪಚಾರದ ಮೂಲಕ ಯಶಸ್ವಿಯಾಗಿ ಅದಕ್ಕೆ ಕಾರಣೀಭೂತರಾದ ಹರಿಕೃಷ್ಣ ಪುನರೂರು ಎಲ್ಲರ ಗಮನ ಸೆಳೆದರು. ಎಲ್ಲರ ಹೊಗಳಿಕೆಯಿಂದ ಪುಳಕಿತರಾದ ಹರಿಕೃಷ್ಣ ಪುನರೂರು ಅಂದೇ ಸಾಹಿತ್ಯ ಪರಿಷತ್ತಿನ ಶಾಶ್ವತ ಸೇವಕನಾಗಲು ಪಣ ತೊಟ್ಟರು.

ಅಷ್ಟೊತ್ತಿಗೆ ಕಾವಲಿ ಬಿಸಿಯಿತ್ತು ಹಿಟ್ಟೂ ರೆಡಿಯಾಗಿತ್ತು ಎಂಬಂತೆ ಟೀಕಾಣ ರಾಮಚಂದ್ರರಾಯರ ಅಸೌಖ್ಯದಿಂದ ಅಧ್ಯಕ್ಷ ಗಾದಿ ಬದಲಾವಣೆ ಬಯಸುತ್ತಿತ್ತು. ಅವರ ಉತ್ತರಾಧಿಕಾರಿಯಾಗಲು ಡಿ.ವಿ.ಜಿ ಭಕ್ತ ಕುಲ್ಯಾಡಿ ಮಾಧವ ಪೈಗಳು ರೆಡಿಯಾಗಿಯೂ ಇದ್ದರು. ಆದರೆ ಸಾಹಿತ್ಯದ ತೇರು ಎಳೆಯಲು ಹರಿಕೃಷ್ಣ ಪುನರೂರು ಎಲ್ಲಿಲ್ಲದ ಉತ್ಸಾಹದಿಂದ ಕಚ್ಚೆ ಕಟ್ಟಿ ನಿಂತಿದ್ದರಿಂದ ಕುಲ್ಯಾಡಿಯವರೂ ಸೇರಿದಂತೆ ಎಲ್ಲರೂ ಒಮ್ಮತದಿಂದ ಪುನರೂರು ಅವರನ್ನು ಅಧ್ಯಕ್ಷ ಮಾಡಿಬಿಟ್ಟರು.

ಸಾಹಿತ್ಯದ ಸೋಂಕಿಲ್ಲದಿದ್ದರೂ ಮೂಲ್ಕಿ-ಮಂಗಳೂರುಗಳಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ಪುನರೂರು ಯಶಸ್ವಿಯಾಗಿ ನಡೆಸಿದ್ದರಿಂದ ಅವುಗಳಿಗೆ ಮದುವೆಯೂಟದ ಇಮೇಜೂ ಬಂದುಬಿಟ್ಟಿತು. ಪುನರೂರು ಅವರನ್ನು ಕರೆದು ಮಣೆ ಹಾಕಿ ಅವರನ್ನು ಹಾಡಿ ಹೊಗಳಿದರೆ ಅವರಿಂದ ಉದಾರ ದೇಣಿಗೆಯೂ ಸಿಗುವಂತಾಗಿ ಸಾಹಿತ್ಯ ಸಮ್ಮೇಳನಗಳು ಭೋಜನಪ್ರಿಯರ ಊಟದ ಕೂಟಗಳಾದವು.

90ರ ದಶಕದಲ್ಲಿ ಏಳೆಂಟು ವರ್ಷಗಳ ಕಾಲ ಜಿಲ್ಲಾ ಸಾಹಿತ್ಯದ 'ಶೇವಿಗೆ' ಮಾಡಿದ ಪುನರೂರು ಜಮಾನಾದಲ್ಲಿ ಹೋಟೆಲ್ ಮಾಣಿಗಳು ನಾಣಿಗಳೆಲ್ಲಾ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿ ತುಂಬಿ ತುಳುಕಿದರು. ಸಾಹಿತ್ಯ ಪರಿಷತ್ತು ಈ ರೀತಿ ಹೋಟೆಲ್ ಮಾಣಿಗಳ ಒಡ್ಡೋಲಗವಾದಾಗ ಸಾಹಿತಿಗಳೆಲ್ಲಾ ಮುಜುಗರ ಪಟ್ಟು ದೂರ ನಿಂತರು.

1997ನೇ ಇಸವಿಯಲ್ಲಿ ಹರಿಕೃಷ್ಣ ಪುನರೂರು ಸಾರಥ್ಯದಲ್ಲಿ ಕಯ್ಯಾರ ಕಿಂಞಣ್ಣ ರೈ ಸಮ್ಮೇಳನಾಧ್ಯಕ್ಷತೆಯಲ್ಲಿ ರಾಜ್ಯ ಸಾಹಿತ್ಯ ಸಮ್ಮೇಳನ ಮಂಗಳೂರಿನಲ್ಲಿ ಭರ್ಜರಿಯಾಗಿಯೇ ನಡೆಯಿತು. ಈ ಸಾಹಿತ್ಯದ ಸಮ್ಮೇಳನ ತಂದ ಖ್ಯಾತಿ ಪುನರೂರು ಅವರ ಪಿತ್ತ ನೆತ್ತಿಗೇರುವಂತೆ ಮಾಡಿ ಅವರಲ್ಲಿ ರಾಜ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗುವ ಆಸೆ ಕುಡಿಯೊಡೆಯಿತು. 1997ರಲ್ಲಿ ಅದಕ್ಕಾಗಿ ಸ್ಪರ್ಧಿಸಿ ಸೋತ ಪುನರೂರು 2000ನೇ ಇಸವಿಯಲ್ಲಿ ಚಂಪಾ ವಿರುದ್ಧ ಗೆದ್ದು ರಾಜ್ಯಾಧ್ಯಕ್ಷರಾದರು.

ಹಾಗಂತ ಅವರು ದ.ಕ.ದ ಜಿಲ್ಲಾ ಕಸಾಪವನ್ನು ನಿರ್ಲಕ್ಷಿಸಲಿಲ್ಲ. ತಾವು ಜಿಲ್ಲೆಯಲ್ಲಿ ತೆರವು ಮಾಡಿದ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ತನ್ನ ಮೂಗಿನ ನೇರಕ್ಕೆ ವರ್ತಿಸುವ ಹೈಗರ ಮಾಣಿಯೇ ಅಧ್ಯಕ್ಷನಾಗುವಂತೆ ನೋಡಿಕೊಂಡರು! ಆಗ "ನೀ ಎನಗಿದ್ದರೆ ನಾ ನಿನಗೆ" ಎಂಬಂತೆ ಪುನರೂರು ಕೃಪೆಯಿಂದ ಫಿನಿಕ್ಸ್ ಹಕ್ಕಿಯಂತೆ ಎದ್ದು ಬಂದು ಅಧ್ಯಕ್ಷನಾದವರು ಪ್ರದೀಪ್ ಕುಮಾರ್ ಕಲ್ಕೂರ ಎಂಬ ಜಾಹೀರಾತು ಸಂಸ್ಥೆಯ ಮಾಲೀಕ.

ಕಲ್ಕೂರ ಎಂಟ್ರಿ


ಬೆರಳು ಕೊಟ್ಟರೆ ಹಸ್ತವನ್ನೇ ನುಂಗುವ ಛಾತಿಯ ಪ್ರದೀಪ್ ಕುಮಾರ್ ಕಲ್ಕೂರ ಕನ್ನಡ ಸಾಹಿತ್ಯ ಪರಿಷತ್ತಿನ ಒಳ ಹೊಕ್ಕದ್ದು ಮಂಗಳೂರಿನಲ್ಲಿ ನಡೆದ ರಾಜ್ಯ ಸಮ್ಮೇಳನದ ಪ್ರಚಾರ ಸಮಿತಿಯ ಸದಸ್ಯನಾಗಿ. ಜಾಹಿರಾತು ಸಂಸ್ಥೆಯೊಂದನ್ನು ನಡೆಸುವ ಕಲ್ಕೂರ ಪ್ರಚಾರ ಸಮಿತಿಯ ಸದಸ್ಯನಾದದ್ದು ಎಲ್ಲದಕ್ಕೂ ತಕ್ಕುದಾಗಿಯೇ ಇತ್ತು. ಅನಂತರ ಪುನರೂರು ರಾಜ್ಯಾಧ್ಯಕ್ಷ ಆಗುವ ಸಂದರ್ಭದಲ್ಲಿ ಸಾಕಷ್ಟು ಓಡಾಡಿ ಬೆವರು ಸುರಿಸಿದ್ದ ಕಲ್ಕೂರ ಜಿಲ್ಲಾ ಕಸಾಪದ ಅಧ್ಯಕ್ಷರಾಗಿಯೇ ಬಿಟ್ಟರು. ಹೀಗೆ ಜಿಲ್ಲಾ ಸಾಹಿತ್ಯ ಪರಿಷತ್ತು ಹೊಟೇಲಿಯರ್ ಕೈಗಳಿಂದ ಜಾಹಿರಾತುದಾರರ ಕೈಗೆ ಹೋಯಿತು.


ಕೃಷ್ಣ ವೇಷ ಸ್ಪರ್ಧೆ, ವೈವಿಧ್ಯಮಯವಾದ ಭೋಜನ ಭಕ್ಷ್ಯಗಳ ಪ್ರದರ್ಶನಗಳನ್ನೇ ಸಾಹಿತ್ಯ ಸೇವೆಯ ಅಜೆಂಡಾ ಮಾಡಿಕೊಂಡಿರುವ ಕಲ್ಕೂರ ಪಾಲಿಗೆ ಈ ಘನ ಹುದ್ದೆ ತನ್ನ ಜಾಹಿರಾತು ಉದ್ದಿಮೆಯ ವೃದ್ಧಿಗೆ ಟ್ರಂಪ್‌ಕಾರ್ಡ್ ಆಗಿ ಬಳಕೆಯಾದದ್ದೇ ಹೆಚ್ಚು. ತನ್ನನ್ನು ಕರೆದು ಹಾರ ತುರಾಯಿ ತೊಡಿಸುವವರಿಗೆ ದೇಣಿಗೆ ಕೊಟ್ಟು ಪುಸಲಾಯಿಸುವುದು, ಸಾಹಿತಿಗಳನ್ನು ಮತ್ತು ಸಾಹಿತ್ಯ ಪ್ರೇಮಿಗಳನ್ನು ತನ್ನ ಹತ್ತಿರಕ್ಕೆ ಸೇರಿಸಿಕೊಳ್ಳದೇ ಇರುವುದು, ವರ್ಷಕ್ಕೊಮ್ಮೆ ಸಾಹಿತ್ಯ ಪರಿಷತ್ತಿನ ಜಿಲ್ಲಾ ಮಹಾ ಸಭೆಯನ್ನೂ ಕರೆಯದಿರುವುದು, ಜಿಲ್ಲಾ ಸಮ್ಮೇಳನ ನಡೆಸುವ ಗೋಜಿಗೂ ಹೋಗದಿರುವುದು, ಇದೆಲ್ಲಾ ಒಂದು ಹಂತದಲ್ಲಿ ಸ್ವತಃ ಕಲ್ಕೂರ ಅವರ ಗುರು ಪುನರೂರು ಅವರಿಗೂ ಮುಜುಗರ ತಂದೊಡ್ಡಿತ್ತು. ಆದ್ದರಿಂದಲೇ ತನ್ನ ಶಿಷ್ಯನಿಗೆ ಸ್ವಲ್ಪ ಬುದ್ಧಿ ಬರಲಿ ಎಂದು ಈ ಬಾರಿ ಮೋಹನದಾಸ ಸುರತ್ಕಲ್ ಎಂಬುವವರು ಕಲ್ಕೂರ ವಿರುದ್ಧ ಕಣಕ್ಕಿಳಿಯುವಂತೆ ಪುನರೂರೇ ಹುರಿದುಂಬಿಸಿದ್ದರು. ಆದರೆ ಪುನರೂರು ಕೃಪಣ ಬುದ್ಧಿ ಬಲ್ಲ ಮೋಹನದಾಸ ಸುರತ್ಕಲ್ ಅರ್ಜಿ ಹಾಕಿದ್ದರೂ ಸ್ವಯಂ ನಿವೃತ್ತಿ ಘೋಷಿಸಿ ಈಗ ಎಂ.ಬಿ ಸದಾಶಿವರ ಬೆಂಬಲಕ್ಕೆ ನಿಂತಿದ್ದಾರೆ.

ಇದೀಗ ಚುನಾವಣೆ ಎದುರಾಗಿದೆ; ಜಿಲ್ಲೆಯಲ್ಲಿ ಒಟ್ಟು 1,654 ಮತಗಳಿವೆ. ಇದರಲ್ಲಿ ಹೋಟೆಲ್ ಮಾಣಿಗಳು ನಾಣಿಗಳದ್ದೇ ಸಿಂಹಪಾಲು. ನಿಜವಾದ ಸಾಹಿತಿಗಳ ಮತ್ತು ಸಾಹಿತ್ಯ ಪ್ರೇಮಿಗಳ ಸಂಖ್ಯೆ ಕಡಿಮೆ. ಸಾಹಿತ್ಯ ವಲಯದಲ್ಲಂತೂ ಬದಲಾವಣೆಯ ಗಾಳಿ ಬೀಸಿದೆ. ಪ್ರದೀಪ್ ಕುಮಾರ್ ಕಲ್ಕೂರ ಮೂರನೇ ಬಾರಿ ಅಧ್ಯಕ್ಷನಾಗಿ ಹ್ಯಾಟ್ರಿಕ್ ಸಾಧಿಸುವುದು ಮಾಣಿಗಳ ಕೈಯಲ್ಲಿದೆ ಎಂದಷ್ಟೇ ಈಗ ಹೇಳಬಹುದಾಗಿದೆ.

■ ಪ್ರಕಾಶ್ ಪಿಂಟೊ

ಮೈಸೂರು ಕಸಾಪ


ಗೋಪಾಲ್


ಪ್ರಕಾಶ್


ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನಕ್ಕೆ ಮಡ್ಡಿಕೆರೆ ಗೋಪಾಲ್ ಹಾಗೂ ಕೆ.ಆರ್ ನಗರದ ಜಿ. ಪ್ರಕಾಶ್ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

ಕಣದಲ್ಲಿರುವ ಮಂಜುಳ ಮಾನಸ, ಜೈಶಂಕರ್, ಮುರುಗೇಶ, ಮೂರ್ತಿ, ಚಂದ್ರಶೇಖರ್, ರಾಜಶೇಖರ್ ಕದಂಬ- ಇತರರು ಗೋಪಾಲ್ ಪರ ಬೆಂಬಲ ಸೂಚಿಸಿ ಕಣದಿಂದ ಹೊರಗುಳಿದಿದ್ದಾರೆ. ಮಡ್ಡಿಕೆರೆ ಗೋಪಾಲ್ ಕಳೆದ ಬಾರಿ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿದ್ದು ಪರಿಷತ್ತಿನ ಒಳಹೊರಗು ಬಲ್ಲವರು. ಹಲವಾರು ಪ್ರಗತಿಪರ ಸಂಘಟನೆಗಳ ಒಡನಾಟವಿರುವ ಗೋಪಾಲ್ ಸ್ಪರ್ಧೆಯ ಮುಂಚೂಣಿಯಲ್ಲಿದ್ದಾರೆ. ಇವರ ನೇರ ಸ್ಪರ್ಧಿ ಜಿ. ಪ್ರಕಾಶ್ ಕಳೆದ ಬಾರಿ ಕೆ.ಆರ್. ನಗರ ತಾಲ್ಲೂಕು ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದರು. ಮೈಸುರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತನ್ನು 15 ವರ್ಷಗಳ ಕಾಲ ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡಿದ್ದ, ಗಿರಿಗೌಡರ ಬೆಂಬಲಿಗ ಹಲವಾರು ಹೋರಾಟಗಳಲ್ಲಿ ಭಾಗವಹಿಸಿದ ಅನುಭವವಿದ್ದರೂ ತಾಲ್ಲೂಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ವೇಳೆಯಲ್ಲಿ ಏನೂ ಕೆಲಸ ಮಾಡಿಲ್ಲವೆಂಬ ಅಪವಾದವಿದೆ.


ಇತ್ತೀಚಿನ ದಿನಗಳಲ್ಲಿ ಒಂದಲ್ಲ ಒಂದು ವಿವಾದಕ್ಕೀಡಾಗುತ್ತಿರುವ ಮೈಸೂರು ಜಿಲ್ಲಾ ಪರಿಷತ್ತಿಗೆ ಕವಿದಿರುವ ಕಾರ್ಮೋಡಗಳು ಚದುರಲಿದೆಯೇ ಕಾದುನೋಡಬೇಕು.

■ ಮೋಹನ್

ಮಳವಳ್ಳಿ ಎಂಬ ದಂಧೆಕೋರರ ಆಗರ!



ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಇತ್ತೀಚೆಗೆ ವೇಶ್ಯಾವಾಟಿಕೆ, ದರೋಡೆ, ಕಳ್ಳತನ, ಸುಲಿಗೆಗಳಂತಹ ಕಾನೂನುಬಾಹಿರ ಚಟುವಟಿಕೆಗಳು ಯಾವ ಅಡೆತಡೆಯಿಲ್ಲದೆ ನಡೆಯುತ್ತಿದ್ದರೂ ಪೊಲೀಸರು ಮಾತ್ರ ಅವುಗಳನ್ನು ನಡೆಸುತ್ತಿರುವ ಕ್ರಿಮಿಗಳು ಕೊಡುವ ಅಮೇಧ್ಯ ತಿಂದು ಏನೂ ತಿಳಿಯದವರ ಹಾಗೆ ಕಣ್ಮುಚ್ಚಿ ಕುಳಿತಿದ್ದಾರೆ. ಮಳವಳ್ಳಿಯಲ್ಲಿ ಕಾನೂನು ಸುವ್ಯವಸ್ಥೆ ಎಷ್ಟರ ಮಟ್ಟಿಗೆ ಕುಸಿದಿದೆ ಎಂದರೆ ಕಳೆದ ತಿಂಗಳು ಶಿಂಷಾಪುರ ಬಳಿ ಕೆಲ ಪುಂಡರು ರಾಜಾರೋಷವಾಗಿ ಢಕಾಯಿತಿ ಮಾಡಿದ್ದಾರೆ. ಅಷ್ಟೇ ಅಲ್ಲ, ಅವರಿಗೆ ಕಾನೂನುಗಳ ಬಗ್ಗೆ ಕಿಂಚಿತ್ತೂ ಭಯವಿಲ್ಲದಂತಾಗಿದೆ. ಆದ್ದರಿಂದಲೇ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಆದ ಸತೀಶ್ ಹಾಗೂ ಆರಕ್ಷಕ ಮರೀಗೌಡರ ಮೇಲೆಯೇ ಢಕಾಯಿತರು ಮಾರಣಾಂತಿಕವಾಗಿ ಹಲ್ಲೆ ಮಾಡುವಷ್ಟು ಬೆಳೆದಿದ್ದಾರೆ.



ವೇಶ್ಯಾವಾಟಿಕೆಯ ತಾಣಗಳು ಕೋಟೆ ಬೀದಿಯ ಮನೆ, ಗುರು ದರ್ಶನ್ ಮತ್ತು ಶ್ರೀ ಗಣೇಶ್ ಲಾಡ್ಜ್

ಬಡ್ಡಿ ವಸಂತಮ್ಮ

ಇವತ್ತು ಮಳವಳ್ಳಿಯಲ್ಲಿ ತುಂಬಾ ನಟೋರಿಯಸ್ ಆಗಿರುವ ಮಹಿಳೆಯೇ ಬಡ್ಡಿ ವಸಂತಮ್ಮ. ಈ ಗಯ್ಯಾಳಿ ಇಲ್ಲಿನ ಮೀಟರ್ ಬಡ್ಡಿ ದಂಧೆಯ ಅಧಿನಾಯಕಿ. ಈ ಹಿಂದೆ ಇದೇ ವಸಂತಮ್ಮ ಹಂದಿ ಸಾಕಾಣಿಕೆ ಮಾಡಿಕೊಂಡಿದ್ದಳು. ಆದರೆ ಇವತ್ತು ಈಕೆ ತನ್ನ ಹಣವನ್ನು ಶಿಕ್ಷಕರಿಗೆ ಮತ್ತು ಇತರೆ ಸರ್ಕಾರಿ ನೌಕರರಿಗೆ ಮೀಟರ್ ಬಡ್ಡಿ ಮೇಲೆ ನೀಡಿ ಅವರನ್ನು ಸುಲಿದು ತಿನ್ನುತ್ತಿದ್ದಾಳೆ. ಇವಳೊಂದಿಗೆ 'ಬಡ್ಡಿ' ಮಗ ನಾಗರಾಜು ಎಂಬಾತನೂ ಇದ್ದಾನೆ. ಇವರಿಬ್ಬರು ನಡೆಸುವ ಬಡ್ಡಿ ದಂಧೆ, ಲೇವಾದೇವಿ ಹಾಗೂ ಚೀಟಿ ವ್ಯವಹಾರದಿಂದ ಅದೆಷ್ಟೋ ಕುಟುಂಬಗಳು ಬೀದಿಪಾಲಾಗಿವೆ. ಮಳವಳ್ಳಿಯ 'ಅಭ್ಯುದಯಕ್ಕೆ' ಇದು ವಸಂತಮ್ಮನ ಕೊಡುಗೆ ಎಂದರೆ ತಪ್ಪಾಗಲಾರದು.

ಇಸ್ಪೀಟ್ ದಂಧೆ

ಇವತ್ತು ಮಳವಳ್ಳಿಯಲ್ಲಿ ಇಸ್ಪೀಟ್ ದಂಧೆಯೂ ರಾಜಾರೋಷವಾಗಿ ನಡೆಯುತ್ತಿದೆ. ಎಪಿಎಂಸಿ ವಾರ್ಡ್, ಸುರಂಗ ಪಾಣಿಹಳ್ಳ, ಟಿಪ್ಪೂ ಸುರಂಗ ಗೆಸ್ಟ್‌ಹೌಸ್, ಜೆಎಂ ಸ್ಟ್ರೀಟ್, ಸುಲ್ತಾನ್ ಪೇಟೆ ಹಾಗೂ ಗಂಗಾಮತಸ್ಥರ ಬೀದಿಗಳಲ್ಲಂತೂ ಇಸ್ಪೀಟ್ ಬಿಡಾರಗಳೇ ಎದ್ದು ನಿಂತಿವೆ. ಆದರೂ ಇವ್ಯಾವುದೂ ಪೊಲೀಸರ ಕಣ್ಣಿಗೆ ಬೀಳುತ್ತಿಲ್ಲ. ಏಕೆಂದರೆ ಈ ದಂಧೆಯಿಂದ ಬರುತ್ತಿರುವ ಮಂತ್ಲಿ ಹಣ ಅವರ ಕಣ್ಣುಗಳನ್ನು ಮುಚ್ಚಿಸಿವೆ.




ಸರೋಜ


ವೇಶ್ಯಾವಾಟಿಕೆಯ ಭರಾಟೆ


ಗುರುದರ್ಶಿನಿ ಮತ್ತು ಗಣೇಶ ಲಾಡ್ಜಗಳಲ್ಲಿ ಹಾಡುಹಗಲೇ ವೇಶ್ಯಾವಾಟಿಕೆ ಎಷ್ಟು ರಭಸವಾಗಿ ನಡೆಯುತ್ತದೆಂದರೆ ಈ ಎರಡು ಲಾಡ್ಜ್‌ಗಳು ಇವತ್ತು ಮಳವಳ್ಳಿಯ ವೇಶ್ಯಾವಾಟಿಕೆಯ ಅಡ್ಡೆಗಳು ಎಂದೇ ಹೆಸರುವಾಸಿಯಾಗಿವೆ. ಈ ಎರಡು ಲಾಡ್ಜ್‌ಗಳಲ್ಲಿ ಬರೇ ವೇಶ್ಯಾವಾಟಿಕೆಯಷ್ಟೇ ನಡೆಯುವುದಿಲ್ಲ. ಅವುಗಳಲ್ಲಿ ಬ್ಲೂಫಿಲಂ ಚಿತ್ರೀಕರಣವೂ ನಡೆಯುತ್ತವೆ ಎಂಬುದು ಮಳವಳ್ಳಿಗಷ್ಟೇ ಅಲ್ಲ, ಇಡೀ ಮಂಡ್ಯ ಜಿಲ್ಲೆಗೇ ತಿಳಿದಿರುವ ಸತ್ಯ. ಆದರೂ ಪೊಲೀಸರು ಗುರುದರ್ಶಿನಿಯ ಮಾಲೀಕ ಕುಳ್ಳೇಗೌಡನನ್ನಾಗಲೀ, ಗಣೇಶ್ ಲಾಡ್ಜ್‌ನ ಮಾಲೀಕ ಶಿವಲಿಂಗೇಗೌಡನನ್ನಾಗಲೀ ಮುಟ್ಟುವ ಧೈರ್ಯ ತೋರುತ್ತಿಲ್ಲ. ಅದಕ್ಕೆ ಕಾರಣ ಈ ಮಾಲೀಕರ 'ರಾಜಕೀಯ ಕನೆಕ್ಷನ್ಸ್' ಎಂದು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಲ್ಲ ಎನಿಸುತ್ತದೆ.

ವೇಶ್ಯಾವಾಟಿಕೆ ಕೇವಲ ಲಾಡ್ಜ್‌ಗಳಲ್ಲಿ ಮಾತ್ರವಲ್ಲ, ಪಟ್ಟಣದ ಹಲವಾರು ಕಡೆಗಳಲ್ಲು ನಡೆಯುತ್ತಿದೆ. ಅದರಲ್ಲೂ ಕಲ್ಯಾಣಮ್ಮ ಮತ್ತು ಚಿಕ್ಕತಾಯಮ್ಮ ಎಂಬ ಘರ್ವಾಲಿಗಳು ಈ ದಂಧೆಯಲ್ಲಿ ಎತ್ತಿದ ಕೈಗಳೆನಿಸಿಕೊಂಡಿದ್ದಾರೆ.

ಕೋಟೆ ಬೀದಿಯಲ್ಲಿ ಕಲ್ಯಾಣಮ್ಮನ ದಂಧೆ ನಡೆಯುತ್ತಿದ್ದು ಅವಳ ನೆರವಿಗೆ ಕೆಲ ರೌಡಿಗಳು ಮತ್ತು ರಾಜಕೀಯ ಪುಢಾರಿಗಳು ನಿಂತಿದ್ದಾರೆ. ಇದೆಲ್ಲದರಿಂದ ರೋಸಿ ಹೋಗಿರುವ ಕೋಟೆ ಬೀದಿಯ ಸಭ್ಯಸ್ಥ ಕುಟುಂಬದವರು ಆಕೆಯ ವಿರುದ್ಧ ಹಲವಾರು ಬಾರಿ ಪೊಲೀಸರಿಗೆ ದೂರು ನೀಡಿದ್ದಾರೆ. ಆದರೂ ಏನೂ ಪ್ರಯೋಜನವಾಗಿಲ್ಲ ಎಂದರೆ ಈ ಕಲ್ಯಾಣಮ್ಮನ ತಾಕತ್ತು ಇನ್ನೆಷ್ಟರ ಮಟ್ಟಿಗಿರಬಹುದು, ನೀವೇ ಊಹಿಸಿ!









ಸತೀಶ್

ಇದೆಲ್ಲ ಪೊಲೀಸರಿಗೆ ಗೊತ್ತಿಲ್ಲ ಎಂದೇನಲ್ಲ, ಅವರು ಈ ಎಲ್ಲ ದಂಧೆಕೋರರು ನೀಡುವ ಅಮೇಧ್ಯವನ್ನು ತಿಂದು ಬಾಯೊರೆಸಿಕೊಳ್ಳುತ್ತಾ ಕುಳಿತಿದ್ದಾರೆ.

ಮಳವಳ್ಳಿಯಲ್ಲಿ ಇಡೀ ಕಾನೂನು ವ್ಯವಸ್ಥೆಯನ್ನೆ ಕುಸಿಯುವಂತೆ ಮಾಡಿದ್ದು ಬಸವರಾಜ್ ಎಂಬ ಡಿವೈಎಸ್ಪಿ. ಕಳೆದ ಮೂರು ವರ್ಷಗಳಿಂದ ಮಳವಳ್ಳಿಯ ಡಿವೈಎಸ್ಪಿಯಾಗಿರುವ ಈತ ಇಲ್ಲಿ ಕೆಲಸ ಮಾಡಿದ್ದಕ್ಕಿಂತಲೂ ಮೇಯ್ದದ್ದೇ ಹೆಚ್ಚು. ಇವತ್ತು ಇಲ್ಲಿನ ವ್ಯವಸ್ಥೆ ಎಷ್ಟರಮಟ್ಟಿಗೆ ಹದಗೆಟ್ಟಿದೆ ಎಂದರೆ ಪ್ರತೀ ತಿಂಗಳು ಸುಖಾಸುಮ್ಮನೆ ಲಕ್ಷಾಂತರ ರೂಪಾಯಿ ಅಮೇಧ್ಯ ಪೊಲೀಸ್ ಇಲಾಖೆಗೆ ಬರುವ ಹಾಗೆ ಒಂದು ನೆಟ್‌ವರ್ಕ್ ಕಾರ್ಯನಿರ್ವಹಿಸುತ್ತಿದೆ. ಈ ವ್ಯವಸ್ಥೆಯಲ್ಲಿ ಪೇದಗಳಿಂದ ಹಿಡಿದು ಹಿರಿಯ ಅಧಿಕಾರಿಗಳಿಗೆ ತಕ್ಕ ಪಾಲು ಸಿಗುತ್ತಿದೆ.

ಬಾಯಿಬಿಟ್ಟರೆ ಸಾಕು "ಸಚಿವ ನರೇಂದ್ರಸ್ವಾಮಿಯ ಹೆಂಡತಿ ನನ್ನ ಹತ್ತಿರದ ಸಂಬಂಧಿ" ಎಂದು ಹೋದ ಕಡೆಯಲ್ಲೆಲ್ಲಾ ಜಂಬ ಕೊಚ್ಚಿಕೊಳ್ಳುತ್ತಿದ್ದ ಬಸವರಾಜ್‌ನನ್ನು ಸ್ವತಃ ನರೇಂದ್ರ ಸ್ವಾಮಿಯವರೇ ಮಳವಳ್ಳಿಯಿಂದ ಎತ್ತಂಗಡಿ ಮಾಡಿಸಿ ಬೆಂಗಳೂರಿಗೆ ಅಟ್ಟಿರುವುದು ಸ್ವಾಗತಾರ್ಹ. ಆದರೆ ಈತ ಇಲ್ಲಿ ಮಾಡಿರುವ ಅನಾಹುತಗಳನ್ನು ಅಷ್ಟು ಸಲೀಸಾಗಿ ಅಳಿಸಿಹಾಕುವಂತಿಲ್ಲ.

ಯುವ ಸಚಿವ ನರೇಂದ್ರಸ್ವಾಮಿ ಮಳವಳ್ಳಿಯಲ್ಲಿ ಮಾಡಬೇಕಾದ ಕೆಲಸಗಳು ಬಹಳಷ್ಟಿವೆ. ಮೊದಲು ಇಲ್ಲಿನ ನಿತ್ಯ ಕಾಯಕಗಳಾದ ಕಳ್ಳತನ, ದರೋಡೆ, ಸುಲಿಗೆ, ವೇಶ್ಯಾವಾಟಿಕೆ, ಬ್ಲೂಫಿಲಂ ದಂಧೆಗೆ ಕಡಿವಾಣ ಹಾಕಬೇಕಿದೆ. ಜೊತೆಗೆ ಇಲ್ಲಿನ ಇಡೀ ಪೊಲೀಸ್ ವ್ಯವಸ್ಥೆಗೆ ಮೇಜರ್ ಸರ್ಜರಿ ಮಾಡಬೇಕಿದೆ. ಆಗ ಮಾತ್ರ ನರೇಂದ್ರಸ್ವಾಮಿ ಸಚಿವರಾಗಿದ್ದು ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಮುಂದೊಂದು ದಿನ ಇಡೀ ಮಳವಳ್ಳಿ 'ಕೆಂಪುದೀಪ'ದ ನಗರವಾಗಿ ಮಾರ್ಪಡಲಿರುವುದು ಗ್ಯಾರಂಟಿ! ■



ಅಕ್ರಮವಾಗಿ ಸೇರಿಸಿಟ್ಟಿರುವ ಮರಳ ರಾಶಿ

ಪ್ರಕೃತಿಮಾತೆಯ ಒಡಲನ್ನು ಬಗೆಯುತ್ತಿರುವ ರಕ್ಕಸರು

ಇಂದಿನ ರಾಜಕೀಯ ವ್ಯಕ್ತಿಗಳು ಹಾಗೂ ಪಕ್ಷಗಳನ್ನು ನೋಡಿದರೆ "ಘಟಿಂಗರ ಕೊನೆಯ ಆಸರೆಯೇ ರಾಜಕೀಯ" ಎಂಬ ತತ್ವಜ್ಞಾನಿ ಪ್ಲೇಟೋನ ಮಾತು ಖರೆ ಅನ್ನಿಸುತ್ತದೆ. ಯಾಕೆಂದರೆ ಇವತ್ತು ರಾಜಕಾರಣ ಎಂಬುದು ಸಮಾಜ ಸೇವೆಯಲ್ಲದೆ ಸಮಾಜ 'ಶೇವೆ' ಆಗಿಹೋಗಿದೆ. ಇಂಥ ಠಕ್ಕ ರಾಜಕಾರಣಿಗಳು ಬರೀ ಸರಕಾರದ ದುಡ್ಡನ್ನು ಹೊಡೆಯುತ್ತಿದ್ದರೆ ಸುಮ್ಮನಿರಬಹುದಿತ್ತೇನೋ? ಆದರೆ ಇವರ ದುರಾಸೆಗೆ ಮಿತಿ ಎಂಬುದು ಇಲ್ಲದ್ದರಿಂದ ಇವರು ಪ್ರಾಕೃತಿಕ ಸಂಪತ್ತಿನ ಲೂಟಿಗೆ ಇಳಿದಿದ್ದಾರೆ.

ಪ್ರಕೃತಿ ಮಾತೆಯ ಮಡಿಲನ್ನು ಬರಿದು ಗೊಳಿಸಿ ತಮ್ಮ ಗುಡಾಣದಂಥ ಭ್ರಷ್ಟಹೊಟ್ಟೆಗಳನ್ನು ಬೆಳೆಸಲು ರಾಜಕಾರಣಿಗಳು ಮಾಡದ ಕಾರಸ್ಥಾನ; ಹಾಕದ ವೇಷವೇ ಇಲ್ಲವೆಂದರೂ ತಪ್ಪಾಗಲಿಕ್ಕಿಲ್ಲ. ಬಳ್ಳಾರಿಯಲ್ಲಿ ಗುಡ್ಡಗಳನ್ನು ಬರಿದುಗೊಳಿಸುತ್ತ ಅದಿರು ಲೂಟಿ ಮಾಡುತ್ತಿದ್ದರೆ, ಇಳಕಲ್ಲಿನಲ್ಲಿ ಗ್ರಾನೈಟ್ ದಂಧೆಗೆ ಇಳಿದಿದ್ದಾರೆ. ಗುಲಬರ್ಗಾ-ರಾಯಚೂರು-ಕೊಪ್ಪಳ ಜಿಲ್ಲೆಗಳಲ್ಲಂತೂ ಹಳ್ಳಗಳನ್ನು ಬಗೆಯುತ್ತ ಉಸುಕಿನ ಲೂಟಿಯನ್ನು ಮಾಡುತ್ತಿದ್ದಾರೆ.

ಇನ್ನು ಹೇಳುವ ಅರಸ, ಕೇಳುವ ಪ್ರಧಾನಿ ಇಲ್ಲ ಎಂಬಂತಹ ಪ್ರದೇಶಗಳಾದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕಳ್ಳ-ಕೊರಮರ ಕಾಟ ದಿನದಿಂದ ದಿನಕ್ಕೆ ಹೆಚ್ಚುವರಿಗೊಳ್ಳುತ್ತಲೆ ನಡೆದಿದೆ. ದೇವದುರ್ಗ ಸಮೀಪದ ಶಹಾಪುರ ತಾಲೂಕಿನ ಗೂಗಲ್ ಬ್ರಿಜ್ ಕಮ್ ಬ್ಯಾರೇಜಿನ ಕೃಷ್ಣಾ ನದಿಯ ಉಸುಕನ್ನು ಸ್ಥಳೀಯ ಮಾಜಿ ಎಂಎಲ್‌ಸಿ ಬಸವರೆಡ್ಡಿ ಇಟಗಿ ಅವರ ಕುಮ್ಮಕ್ಕಿನಿಂದ ಆಂಧ್ರ ಪ್ರದೇಶದವರು ಲೂಟಿ ಮಾಡುತ್ತಿದ್ದಾರೆ.

ಗೂಗಲ್ ಬ್ರಿಜ್‌ನಿಂದ ಸುಮಾರು ಒಂದು ಕಿ.ಮೀ. ಅಂತರದಲ್ಲಿ ಸುಮಾರು 100 ರಿಂದ 150 ಎಕರೆ ಉಸುಕು ಉತ್ತಮ ಗುಣಮಟ್ಟದ್ದಾಗಿದೆ. ಇದನ್ನು ಕಂಡು ಬಾಯಲ್ಲಿ ನೀರೂರಿಸಿಕೊಂಡಿರುವ ಘಟಿಂಗ ರಾಜಕಾರಣಿಗಳು ಯಾವ ಎಗ್ಗಿಲ್ಲದೆ, ಸರಕಾರಕ್ಕೂ ಕೇರ್ ಮಾಡದೆ ದಿನನಿತ್ಯ ಹಾಡುಹಗಲೇ ಪ್ರಕೃತಿ ಮಾತೆಯ ಒಡಲಿಗೆ ಬೆಂಕಿ ಇಕ್ಕುತ್ತಿದ್ದಾರೆ.

ಅತ್ಯಂತ ಕಡಿಮೆ ದರದಲ್ಲಿ ಸರಕಾರದಿಂದ ಟೆಂಡರ್ ಪಡೆದು ನಿಯಮ ಬಾಹಿರವಾಗಿ ಜೆಸಿಬಿ ಯಂತ್ರದ ಮೂಲಕ ನದಿಯಲ್ಲಿ ಸುಮಾರು 10 ಅಡಿ ಆಳದವರೆಗೂ ಮರಳು ತೆಗೆಯುತ್ತಿದ್ದಾರೆ. ಕೇವಲ ನಾಲ್ಕು ಅಡಿ ಆಳ ಮಾತ್ರ ಉಸುಕು ತೆಗೆಯಬೇಕು ಎಂಬ ಸರಕಾರದ ನಿಯಮಕ್ಕೆ ಇಲ್ಲಿ ಕವಡೆ ಕಾಸಿನ ಕಿಮ್ಮತ್ತು ಇಲ್ಲವಾಗಿದೆ. ಜೆಸಿಬಿ ಯಂತ್ರಗಳನ್ನು ಬಳಸಲೇಬಾರದು ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದರೂ ಆ ನಿಯಮವನ್ನು ಗಾಳಿಗೆ ತೂರಿದ್ದಾರೆ. ಒಂದೊಂದು ಲಾರಿಯಲ್ಲಿ ಸುಮಾರು 30 ರಿಂದ 35 ಟನ್ ಉಸುಕು ತುಂಬಿಕೊಂಡು ಪ್ರತಿದಿನ ಕನಿಷ್ಠ 130 ರಿಂದ 150 ಲಾರಿಗಳು ಈ ದಾರಿಗಳಲ್ಲಿ ಓಡಾಡುತ್ತಿವೆ.

ಈ ಕಳ್ಳ ದಂಧೆ ನಾಲ್ಕೈದು ತಿಂಗಳುಗಳಿಂದ ಅವ್ಯಾಹತವಾಗಿ ನಡೆಯುತ್ತಿದ್ದರೂ ಹುಚ್ಚಿಯ ಮದುವೆಯಲ್ಲಿ ಉಂಡವನೆ ಜಾಣ ಎಂಬಂತೆ ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ನೀರಾವರಿ ಹಾಗೂ ಕಂದಾಯ ಇಲಾಖೆಯ ಎಲ್ಲಾ ಅಧಿಕಾರಿಗಳು ಜಾಣ ಕುರುಡು ತಾಳಿದ್ದಾರೆ.

ಒಂದೊಂದು ಲಾರಿ ತುಂಬುವುದಕ್ಕೆ 2500 ರಿಂದ 3000 ರೂ.ವರೆಗೆ ಪಡೆಯುತ್ತಿರುವ ಇಲ್ಲಿನ ಜನ ದಿನವೊಂದಕ್ಕೆ ಎರಡರಿಂದ ಮೂರು ಲಕ್ಷದಷ್ಟು ವಹಿವಾಟು ನಡೆಸಿದ್ದಾರೆ. ಮಳೆಗಾಲ ಆರಂಭವಾದರೆ ತಮ್ಮ ಕಮಾಯಿಗೆ ಎಲ್ಲಿ ಧಕ್ಕೆ ಉಂಟಾಗುತ್ತದೋ ಎಂದು ಅರಿತ ಈ ಘಟಿಂಗರು ಹಳ್ಳವನ್ನು ಮಣ್ಣು ಬರುವವರೆಗೂ ಸಂಪೂರ್ಣ ಬಗೆದು, ಗುಡ್ಡದ ಸಮೀಪವಾಗಿ ಮರಳನ್ನು ರಾಶಿಗಟ್ಟಲೆ ಕೂಡಿ ಇಟ್ಟಿದ್ದಾರೆ. ಹೀಗೆ ರಾಶಿಗಟ್ಟಲೆ ಕೂಡಿಟ್ಟ ಉಸುಕಿನ ಫೋಟೋ ತೆಗೆಯಲು ಹೋದ ಫೋಟೋಗ್ರಾಫರ್‌ಗಳನ್ನು ಬೆನ್ನಟ್ಟಿ ಹೊಡೆದು ವಾಪಸ್ಸು ಕಳಿಸುತ್ತಿದ್ದಾರೆ.

ಇದೆಲ್ಲ ಹೀಗೆ ಮುಂದುವರಿದರೆ ನದಿ ಪಾತ್ರದಲ್ಲಿ ಉಸುಕು ಬರಿದಾಗಿ ಮಣ್ಣಿನಲ್ಲಿ ಜಬ್ಬಲ ಬೆಳೆದು ಹರಿಯುವ ನೀರಿಗೆ ಅಡಚಣೆ ಉಂಟಾಗಲಿದೆ. ಇದರಿಂದ ಅಕ್ಕಪಕ್ಕದ ಹೊಲಗದ್ದೆಗಳೂ ನೀರಿನಿಂದ ಜಲಾವೃತವಾಗಿ ಕೋಟ್ಯಂತರ ಆಸ್ತಿ ಹಾನಿಗೆ ಮೂಲ ಕಾರಣವಾಗಲಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಉಸುಕನ್ನು ಹೀಗೆ ದಿನದಿನಕ್ಕೆ ಖಾಲಿ ಮಾಡುವುದು ಪ್ರಾಕೃತಿಕವಾಗಿ ವಿಪತ್ತಿಗೆ ದಾರಿ ಮಾಡಿಕೊಟ್ಟಂತೆಯೆ ಸರಿ.

ಏರಿ ನೀರುಂಬಡೆ ಬೇಲಿ ಕೇಯ ಮೇವೊಡೆ
ತಾಯ ಮೊಲೆ ಹಾಲು ನಂಜಾಗಿ ಕೊಲ್ಲುವಡೆ
ಇನ್ನಾರಿಗೆ ದೂರುವೆನಯ್ಯಾ ಕೂಡಲ ಸಂಗಮ ದೇವಾ

ಎಂಬ ಸ್ಥಿತಿ ಇಲ್ಲಿ ನಿರ್ಮಾಣವಾಗಿದೆ.

ದೇಶಾಭಿಮಾನದ ಬಗ್ಗೆ, ಭಾರತ ಮಾತೆಯ ಬಗ್ಗೆ ಹುಸಿ ಪ್ರೇಮ ತೋರುವ ಚೆಡ್ಡಿಗಳ ಸರಕಾರವೇ ಈಗ ಅಸ್ತಿತ್ವದಲ್ಲಿದೆ. 'ಎದ್ದು ನಿಲ್ಲು ವೀರ ದೇಶ ಕರೆದಿದೆ' ಎಂದು ಮಸೀದಿ ಕಾಣುತ್ತಲೆ ಅರಚುವ ಇಂಥ ಖೊಟ್ಟಿ ದೇಶಪ್ರೇಮಿಗಳ ಕಣ್ಣೆದುರಿನಲ್ಲಿ ಪ್ರಕೃತಿ ಮಾತೆಯ ಹೊಟ್ಟೆ ಬಗಿದು, ಸರಕಾರವನ್ನು ವಂಚಿಸುತ್ತಿದ್ದರೂ ಯಡ್ಡಿಯ ಸರಕಾರ ಕಣ್ಣು ಮುಚ್ಚಿ ಕುಳಿತಿದೆ.

■ ವಿಶ್ವಾರಾಧ್ಯ ಸತ್ಯಂಪೇಟೆ

15 ಲಕ್ಷ ಸ್ವಾಹಾ!



ಚಿಕ್ಕಣ್ಣ ಗೌಡರ್

ಸರ್ಕಾರಿ ಕಾಮಗಾರಿಗಳನ್ನು ನಡೆಸುವ ಗುತ್ತಿಗೆದಾರರು ಕಳಪೆ ಕಾಮಗಾರಿ ಮಾಡಿಸಿ, ಸರ್ಕಾರಿ ಅಧಿಕಾರಿಗಳಿಗೆ ಒಂದಿಷ್ಟು ತಿನ್ನಿಸಿ ಬಿಲ್ ಹಾಕುವ ಬಿಲ್ಲುಗಾರರನ್ನು ನೀವು ನೋಡಿರಬಹುದು. ಆದರೆ, ಕಾಮಗಾರಿಯನ್ನು ಒಂದಿಷ್ಟೂ ಮಾಡಿಸದೇ ಕೇವಲ ಕಾಗದದ ಮೇಲೆ ತೋರಿಸಿ ಬಿಲ್ ತೆಗೆದುಕೊಳ್ಳುವ ಅಪ್ರತಿಮ ಬಿಲ್ಲುಗಾರರನ್ನು ಎಲ್ಲಾದರೂ ನೋಡಿದ್ದೀರಾ? ನೀವೇನಾದರೂ ಹುಬ್ಬಳ್ಳಿಗೆ ಬಂದರೆ ಇಂತಹ ಮಹಾತ್ಮರನ್ನು ನೋಡುವ ಭಾಗ್ಯ ಸಿಗುತ್ತದೆ.

ಅವರ ಹೆಸರು ದಾಡಿಬಾವಿ ಮತ್ತು ಡಿ.ಎಚ್. ನಾಯ್ಕರ್. ಮೊದಲನೆಯವನು ಗುತ್ತಿಗೆದಾರ. ಎರಡನೆಯವನು ಅಸಿಸ್ಟೆಂಟ್ ಇಂಜಿನಿಯರ್. ಹುಬ್ಬಳ್ಳಿ ತಾಲ್ಲೂಕಿನ ಇಂಗಳಹಳ್ಳಿ ಗ್ರಾಮದಲ್ಲಿ ನೀರು ಸರಬರಾಜು ಕೊಳವೆ ಮಾರ್ಗ ಹಾಕುವುದಕ್ಕೆ ದಾಡಿಬಾವಿ ಗುತ್ತಿಗೆ ಪಡೆದಿದ್ದ. ಆದರೆ, ಕೆಲಸವನ್ನು ಪ್ರಾರಂಭಿಸದೇ ಅದು ಪೂರ್ತಿಯಾಗಿದೆ ಎಂದು ಬಿಲ್ಲು ತೋರಿಸಿದ. ಇನ್ನು ಡಿ.ಎಚ್.ನಾಯ್ಕರ್ ಹಿಂದೂಮುಂದೂ ನೋಡದೆ ಸಹಿ ಮಾಡಿದ. ಹೀಗೆ, ಇಬ್ಬರೂ ಸೇರಿಕೊಂಡು ಬರೋಬ್ಬರಿ 15 ಲಕ್ಷ ಗುಳುಂ ಮಾಡಿಬಿಟ್ಟರು.

ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ಪೂರ್ತಿಯಾಗಿದೆ, ಚೆನ್ನಾಗಿದೆ ಎಂದೆಲ್ಲಾ ಪ್ರಮಾಣಪತ್ರ ನಿಡಿದ ಈ ಡಿ.ಎಚ್.ನಾಯ್ಕರ್ ಬೇರೆ ಊರಿನವರಲ್ಲ, ಯಾವ ಊರಿನಲ್ಲಿ ಈ ಕಾಮಗಾರಿ ನಡೆಯಬೇಕಿತ್ತೋ ಅದೇ ಇಂಗಳಹಳ್ಳಿಯವನು. ಕಾಮಗಾರಿ ನಡೆದಿದ್ದರೆ ಕನಿಷ್ಠ ತನ್ನ ಊರಿನ, ತನ್ನ ಮನೆಯ ಜನಕ್ಕಾದರೂ ಅನುಕೂಲವಾಗುತ್ತಿತ್ತು, ತನ್ನ ಊರಿನ ಜನರಿಗೂ ಈ ರೀತಿ ಮಕ್ಮಲ್‌ಟೋಪಿ ಹಾಕುತ್ತಾನೆಂದರೆ ಇವನಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ ಹೇಳಿ? ಇನ್ನೊಂದು ವಿಚಾರ ಎಂದರೆ, ಜಿಲ್ಲಾ ಪಂಚಾಯತಿಯಲ್ಲಿ ಈ ಭಾಗವನ್ನು ಪ್ರತಿನಿಧಿಸುತ್ತಿರುವುದು ಕಾಂಗ್ರೆಸ್‌ನ ಸಾವಿತ್ರಿ ಭಗವತಿ. ಈ ಕ್ಷೇತ್ರದ ಶಾಸಕ ಎಸ್.ಐ.ಚಿಕ್ಕನಗೌಡ್ರ. ಇವರೆಲ್ಲರ ಗಮನಕ್ಕೆ ಬಾರದಂತೆ ಇದೆಲ್ಲಾ ನಡೆದು ಹೋಯಿತು ಎಂದೇನಿಲ್ಲ, ಅವರಿಗೆ ತಲುಪಬೇಕಾದ ಪ್ರಸಾದ ಸರಿಯಾಗಿ ತಲುಪಿದೆಯಷ್ಟೆ.

ಇದರ ಬಗ್ಗೆ ಚರ್ಚಿಸಲು ಜುಲೈ 31ರಂದು ಇದೇ ಇಂಗಳಹಳ್ಳಿಯಲ್ಲಿ ಗ್ರಾಮ ಪಂಚಾಯತಿ ಸಭೆ ನಡೆದಿತ್ತು, ಸಭೆಗೆ ಹೋದರೆ ಜನ ತಮ್ಮ ಚೆಡ್ಡಿ ಕಳಚುತ್ತಾರೆ ಎಂಬುದನ್ನು ಅರಿತು ಡಿ.ಎಚ್. ನಾಯ್ಕರ್ ಆಗಲೀ, ಸಾವಿತ್ರಿ ಭಗವತಿಯಾಗಲೀ ಯಾರೂ ಬಂದಿಲ್ಲ, "ಅಂವ ಊರಿಗೆ ಬರಲಿ" ಅಂತ ಜನ ಕಾಯುತ್ತಿದ್ದಾರೆ. ನಾಯ್ಕರ್‌ನ ರಕ್ಷಣೆಗೆ ಅದ್ಯಾರು ಬರ್ತಾರೋ ನೋಡಬೇಕು.

ಹುಬ್ಬಳ್ಳಿ ಬಿಟ್ಸ್

ಭಾರತ ಉತ್ಸವಕ್ಕೆ ಹೊರರಾಜ್ಯದ ಕಲಾವಿದರು!

ಈ ಜನ ದುಡ್ಡು ತಿನ್ನೋದಕ್ಕೆ ಎಂತೆಂಥಾ ಮಾರ್ಗಗಳನ್ನು ಹುಡುಕಿಕೊಳ್ಳುತ್ತಾರೆ ನೋಡಿ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಆಗಸ್ಟ್ 13 ರಿಂದ 15ರ ವರೆಗೆ 'ಭಾರತ ಉತ್ಸವ – 08' ಅಂತ ಒಂದು ಉತ್ಸವ ಆಚರಿಸಿದರು. ಅವರಿಗೆ ಅದೆಷ್ಟು ಪ್ರಮಾಣದಲ್ಲಿ ದೇಶಭಕ್ತಿ ಉಕ್ಕಿ ಬಂದಿತ್ತೋ ಗೊತ್ತಿಲ್ಲ, ಈ ಬಾರಿ ಹೊರ ರಾಜ್ಯದ ಸಾಂಸ್ಕೃತಿಕ ಕಲೆಗಳನ್ನು ಸ್ಥಳೀಯರಿಗೆ ಪರಿಚಯ ಮಾಡಿಕೊಡುವ ನೆಪವೊಡ್ಡಿ ಬೇರೆ ರಾಜ್ಯಗಳಿಂದ ಸಾಂಸ್ಕೃತಿಕ ತಂಡಗಳನ್ನು ಕರೆಸಿದರು. ಅದಕ್ಕೆ ಅವರು ವ್ಯಯಿಸಿದ ದುಡ್ಡು ಎಷ್ಟು ಗೊತ್ತೆ? ಕೇವಲ 20 ಲಕ್ಷ!

ಹುಬ್ಬಳ್ಳಿ-ಧಾರವಾಡಗಳ ಜನ ತಮ್ಮ ಬೆವರು ಸುರಿಸಿ ತೆರಿಗೆ ಕಟ್ಟಿದ ಹಣ ಇದು. ಇದನ್ನು ಈ ರೀತಿ ಬೇಕಾಬಿಟ್ಟಿ ಖರ್ಚು ಮಾಡುತ್ತಾರೆಂದರೆ ಇವರು ಹೊಟ್ಟೆಗೆ ಏನು ತಿನ್ನುತ್ತಾರೆ? ಇದೇ ದುಡ್ಡನ್ನು ಸ್ಥಳೀಯರ ಅಭಿವೃದ್ಧಿಗೆ ಖರ್ಚು ಮಾಡಿದ್ದರೆ ಯಾವುದಾದರೂ ಒಂದೆರಡು ಸ್ಲಮ್ಮುಗಳಲ್ಲಿ ಶೌಚಾಲಯಗಳನ್ನೋ, ಕುಡಿಯುವ ನೀರಿನ ವ್ಯವಸ್ಥೆಯನ್ನೋ ಮಾಡಿಸಬಹುದಿತ್ತು, ಅದಕ್ಕೇನು ಭಾರತಾಂಬೆ ಬೇಡ ಅನ್ನುತ್ತಿರಲಿಲ್ಲ.

ಹೋಗಲಿ, ಇಷ್ಟೊಂದು ಹಣ ಬೇರೆ ರಾಜ್ಯದ ಕಲಾವಿದರಿಗಾದರೂ ತಲುಪಿದೆಯೆ? ಖಂಡಿತ ಇಲ್ಲ, ಅದು ಕಾಗದದ ಮೇಲೆ ಮಾತ್ರ. ಏಕೆಂದರೆ, ಕಾಗದದಲ್ಲಿ ಇಂತಹ ಲೆಕ್ಕ ತೋರಿಸಿ ದುಡ್ಡು ಗುಳುಂ ಮಾಡುವುದರಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಜನ ಎತ್ತಿದ ಕೈ. ಈಗ್ಗೆ ಹನ್ನೊಂದು ವರ್ಷಗಳ ಹಿಂದೆ ಇದೇ ಮಹಾನಗರ ಪಾಲಿಕೆ ನಿವೃತ್ತ ನೌಕರ ಮತ್ತು ರಂಗಭೂಮಿ ಕಲಾವಿದ ಎಸ್.ಆರ್.ಕಂಪ್ಲಿಯವರನ್ನು ಪಲ್ಸ್ ಪೋಲಿಯೋ ಪ್ರಚಾರ ಕಾರ್ಯಕ್ರಮಕ್ಕೆ ಕರೆಸಿತ್ತು. ಅವರು ಉರಿಬಿಸಿಲೆನ್ನದೇ ರಸ್ತೆ ರಸ್ತೆಗಳಲ್ಲಿ ಬೀದಿ ನಾಟಗಳನ್ನು ಮಾಡಿ ಜನರಿಗೆ ತಿಳಿವಳಿಕೆ ನೀಡಿದ್ದರು. ಅವರಿಗೆ ನ್ಯಾಯವಾಗಿ ನೀಡಬೇಕಾದ ಸಂಭಾವನೆಯನ್ನು ಈವರೆಗೆ ನೀಡಿಲ್ಲ, ಕಂಪ್ಲಿಯವರ ಹೆಸರಿನಲ್ಲಿ ಬಿಲ್ ಹಾಕಿಕೊಂಡು ಪಾಲಿಕೆಯವರೇ ನುಂಗಿ ನೀರು ಕುಡಿದಿರುತ್ತಾರಷ್ಟೆ. ಇನ್ನು ಹೊರರಾಜ್ಯದಿಂದ ಬಂದ ಕಲಾವಿದರ ಪರಿಸ್ಥಿತಿ ಇದಕ್ಕಿಂತ ಬಹಳ ವ್ಯತ್ಯಾಸವೇನೂ ಇರಲಿಕ್ಕಿಲ್ಲ.

■ಹುಬ್ಬಳ್ಳಿಯಾಂವ

ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ ಚೆಡ್ಡಿನಾಯಕರು



'ದೇಶಭಕ್ತಿ ತಮ್ಮ ಆಸ್ತಿ' ಎಂಬಂತೆ ಮಾತನಾಡುವ ನಕಲಿ ದೇಶಭಕ್ತರು ರಾಷ್ಟ್ರಧ್ವಜಕ್ಕೇ ಅವಮಾನ ಮಾಡಿದ ಘಟನೆ ಉಜಿರೆಯಲ್ಲಿ ನಡೆದಿದೆ. ಸ್ವಾತಂತ್ರ್ಯ ದಿನಾಚರಣೆಯ ಮುನ್ನಾ ದಿನದಂದು ದೇಶಭಕ್ತಿ ಪ್ರಕಟಿಸಲು ಸಾವಿರಾರು ಸಂಖ್ಯೆಯಲ್ಲಿ ಪಂಜು ಹಿಡಿದು ಬನ್ನಿ ಎಂದು ಕರೆ ನೀಡಿದ್ದ ಬೆಳ್ತಂಗಡಿಯ ಹಿಂದೂ ಜಾಗರಣ ವೇದಿಕೆ ಮತ್ತು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು ಸಾರ್ವಜನಿಕವಾಗಿ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿವೆ.

ಈ ಕಾರ್ಯಕ್ರಮದ ನೇತೃತ್ವ ವಹಿಸಿದವರು ಬೇರೆ ಯಾರೂ ಅಲ್ಲ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯನ್ನು ಗುಂಡಿಟ್ಟು ಕೊಂದ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ನ ದಕ್ಷಿಣ ಪ್ರಾಂತ್ಯದ ಮುಖ್ಯಸ್ಥ ಕಲ್ಲಡ್ಕ ಪ್ರಭಾಕರ ಭಟ್ಟ.

ಭಗವದ್ಧ್ವಜಾರೋಹಣ

ತಾವು ಮಾತ್ರ ದೇಶಭಕ್ತರು, ದೇಶಭಕ್ತರೆಲ್ಲಾ ತಮ್ಮೊಂದಿಗೆ ಗುರುತಿಸಿಕೊಳ್ಳಬೇಕೆಂಬ ವಾತಾವರಣ ನಿರ್ಮಿಸುತ್ತಿರುವ ಚೆಡ್ಡಿ ಪಡೆಯ ಈ ಸಂಘಟನೆಗಳು ಸ್ವಾತಂತ್ರ್ಯ ದಿನಾಚರಣೆ ಆಚರಿಸಿದ್ದೇ ಹಾಸ್ಯಾಸ್ಪದ ವಿಷಯ. ಏಕೆಂದರೆ ಈ ನಮ್ಮ ಭಾರತವೆಂಬ ಜಾತ್ಯತೀತ ರಾಷ್ಟ್ರದ ಬಗ್ಗೆ ಅವರಿಗೆ ಎಳ್ಳಷ್ಟೂ ಗೌರವವಿಲ್ಲ, ಅದು ಅವರ ವರ್ತನೆಯಿಂದಲೇ ಸಾಬೀತಾಗುತ್ತಿದೆ. ಆದರೂ ತಮ್ಮ ನಿಲುವಿನಲ್ಲಿ ಸ್ವಲ್ಪ ಬದಲಾವಣೆಮಾಡಿಕೊಂಡು, ಜನರನ್ನು ತಮ್ಮತ್ತ ಸೆಳೆಯಲು ಈ ಕಾರ್ಯಕ್ರಮ ಆಯೋಜಿಸಿದ್ದರು. ಕಾರ್ಯಕ್ರಮದ ಪ್ರತಿ ಹಂತದಲ್ಲಿಯೂ ಹುಸಿ ರಾಷ್ಟ್ರಪ್ರೇಮ ಮೆರೆವ ಘೋಷಣೆ ಕೂಗಿದ ಚೆಡ್ಡಿಗಳು, ಕೊನೆಗೂ ನಿರೀಕ್ಷೆಯಂತೆ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿ, ತಮ್ಮ ಭಗವದ್‌ಧ್ವಜಕ್ಕೆ ಗೌರವ ಸಲ್ಲಿಸಿದರು!



'ಅಖಂಡ ಭಾರತ ಸಂಕಲ್ಪದಿನ'ದ ಹೆಸರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅದೇನು ಸಂಕಲ್ಪ ಮಾಡಲಾಯಿತೋ ಗೊತ್ತಿಲ್ಲ, ಆದರೆ ಮಧ್ಯರಾತ್ರಿ 12 ಗಂಟೆಗೆ ಧ್ವಜಾರೋಹಣ ಮಾಡುವಾಗ ಶಿಷ್ಟಾಚಾರಗಳನ್ನು ಉಲ್ಲಂಘಿಸಲಾಯಿತು. ಧ್ವಜಾರೋಹಣದ ನಂತರವೂ ಹೂವುಗಳು ಧ್ವಜದಮೇಲೆ ಸಿಕ್ಕಿ ಹಾಕಿಕೊಂಡಿದ್ದವು. ಇಷ್ಟೇ ಅಲ್ಲ, ಅಲ್ಲೇ ರಾಷ್ಟ್ರಧ್ವಜದ ಸಮೀಪವೇ ಭಗವದ್‌ಧ್ವಜವನ್ನೂ ಹಾರಿಸಲಾಯಿತು. ಅದು ರಾಷ್ಟ್ರಧ್ವಜಕ್ಕಿಂತ ಮೇಲಕ್ಕಿತ್ತು, ಇವರ ಪ್ರಕಾರ ರಾಷ್ಟ್ರಧ್ವಜಕ್ಕಿಂತ ಭಗವದ್‌ಧ್ವಜವೇ ಶ್ರೇಷ್ಠ! ಆರ್‌ಎಸ್‌ಎಸ್‌ನ ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟರ ಸಮ್ಮುಖದಲ್ಲೇ ಈ ರೀತಿ ರಾಷ್ಟ್ರಧ್ವಜಕ್ಕೆ ಅವಮಾನ ನಡೆದಿದೆ. ಬೇರೆ ಯಾವುದೇ ಸಂಘಟನೆ ತಿಳಿಯದೇ ಈ ತಪ್ಪು ಮಾಡಿದ್ದರೂ ಇವರು ಸುಮ್ಮನಿರುತ್ತಿದ್ದರೇ? ಸರ್ಕಾರಕ್ಕೆ, ಪೊಲೀಸರಿಗೆ ತಾಕತ್ತಿದ್ದರೆ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿಯೇ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ ಈ ನಕಲಿ ದೇಶಭಕ್ತರನ್ನು ಬಂಧಿಸಿ, ಜೈಲಿಗಟ್ಟಲಿ. ■

ಕೊಪ್ಪಳ ಜಿಪಂನಲ್ಲಿ ಆರ್ತನಾದ



ಮಾಲತಿ ನಾಯಕ

"ಇಳಿದು ಬಾ ತಾಯೇ, ಕುರ್ಚಿಯಿಂದ ಇಳಿದು ಬಾ...."

ಒಬ್ಬ ಐನಾತಿ ಶಾಸಕ ಸಂಗಣ್ಣ ಕರಡಿಯನ್ನು ಹೊರತು ಪಡಿಸಿದರೆ ಉಳಿದ ನಾಲ್ವರು ಶಾಸಕರೂ ಹೊಸಬರೇ. ಹೀಗಾಗಿ ಇನ್ನು ಮುಂದಾದರೂ ಜಿಲ್ಲೆಗೆ ಒಂದೀಟು ಒಳ್ಳೆಯದಾದೀತು ಎಂಬ ಕೊಪ್ಪಳದ ಜನ ಭರವಸೆಯನ್ನು ಹೊಂದಿದ್ದರು. ಆದರೆ ಶಾಸಕ ಸ್ಥಾನವನ್ನು ಗೆದ್ದ ನೂರು ದಿನಗಳಲ್ಲಿಯೇ ಜನರ ಈ ಭರವಸೆಯನ್ನು ಎಲ್ಲಾ ಪುಣ್ಯಾತ್ಮ ಶಾಸಕರೂ ಮೂರಾಬಟ್ಟೆ ಮಾಡಿಬಿಟ್ಟಿದ್ದಾರೆ.

ಮಾಜಿಗಳಿಗೂ-ಹಾಲಿಗಳಿಗೂ ಹೋಲಿಸಿದರೆ ಊದುವುದನ್ನು ಕೊಟ್ಟು ಬಾರಿಸುವುದನ್ನು ತಗಂಡಂಗಾತು ಎಂಬಂತಾಗಿದೆ ಜನರ ಪರಿಸ್ಥಿತಿ. ಒಂದು ವೇಳೆ ಇವರೆಲ್ಲರು ಶಾಸಕರಾಗಿ ಐದು ವರ್ಷ ಕಂಪ್ಲೀಟ್ ಮಾಡಿಬಿಟ್ಟರೆ ಹೇಗಪ್ಪ ಅಂತಲೂ ಜನ ಬೆದರಿದ್ದಾರೆ.



ಗೋವಿಂದ ಕಾರಜೋಳ

ಯಾಕೆಂದರೆ ಕುಷ್ಟಗಿ ಸಂಗಣ್ಣ ಕರಡಿ ಎಂಬ ಬಿಜೆಪಿ ಶಾಸಕ ಇವತ್ತಿಗೂ ಸನ್ಮಾನ-ಸುಡುಗಾಡು ಅದು-ಇದು ಅಂತ ತಿರುಗುತ್ತಿದ್ದಾರೆ. ಇನ್ನು ಯಲಬುರ್ಗಿ ಈಶಣ್ಣ ಗುಲಗಣ್ಣನವರ್ (ಬಿಜೆಪಿ) ಶಾಸಕನಾಗಿ ತಾನು ಏನು ಮಾಡಬೇಕೆಂಬುದೇ ಗೊತ್ತಿಲ್ಲ. ಕನಕಗಿರಿಯ ಶಿವರಾಜ್ ತಂಗಡಗಿ ಎಂಬ ಪಕ್ಷೇತರ ಶಾಸಕ ಯಾವಾಗ ತನ್ನ ಮಿನಿಸ್ಟರ್‌ಗಿರಿ ಹೋಗುತ್ತದೋ ಎಂಬುದೇ ದೊಡ್ಡ ಚಿಂತೆಯಾಗಿದೆ. ಗಂಗಾವತಿಯ ಪಿ.ಐ. ಮುನವಳ್ಳಿಗೆ ಅನ್ಸಾರಿಯ ಹಳೆಯ ಕೆಲಸಗಳಿಗೆ ಸೈಯದ್ ಆಲಿ ಎಂಬ ಅಡ್ಡ ಕಸುಬಿಯಿಂದ ಅಡ್ಡಗಾಲು ಹಾಕಿಸುವುದೇ ಮುಖ್ಯವಾಗಿದೆ. ಇನ್ನು ಕೊಪ್ಪಳದ ಸಂಗಣ್ಣ ಕರಡಿ "ಜನ ನನ್ನ ಸುಮ್ನೆ ಗೆಲ್ಲಿಸಿಲ್ಲ, ರೊಕ್ಕ ತಗೊಂಡೆ ಓಟು ಹಾಕ್ಯಾರ. ಏನಾರ ಕೇಳಿದ್ರೆ ಐತಿ ನೋಡು ವಾಲಗ" ಅಂತ ಬೆದರಿಸುತ್ತಿದ್ದಾನೆಯೇ ಹೊರತು ಕೊಪ್ಪಳಕ್ಕೆ ಕುಡಿಯುವ ನೀರನ್ನೂ ಕೊಡಿಸುತ್ತಿಲ್ಲ.

ಈಗಾಗಲೇ ಮಳೆ ಕೈಕೊಟ್ಟು ಜಿಲ್ಲೆಯನ್ನು ಬರಗಾಲದ ಕರಾಳ ನೆರಳು ಆವರಿಸುತ್ತಿದೆ. ಹತ್ತಿರವಿರುವ ಹತ್ತಾರು ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಕೆಲಸ ಸಿಗುತ್ತಿಲ್ಲ, ದುಡಿಮೆ ಸಿಗದೇ 50 ಸಾವಿರ ಜನ ಗುಳೆ ಹೋಗುತ್ತಿದ್ದಾರೆ. ಕಳ್ಳ-ಖದೀಮರ ಕೈ ಜೋಡಿಸುವಿಕೆಯಿಂದ ಉದ್ಯೋಗ ನೀಡಬೇಕಿದ್ದ ಉದ್ಯೋಗ ಖಾತ್ರಿ ಯೋಜನೆಯೇ ಹಳ್ಳ ಹಿಡಿಯುತ್ತಿದೆ. ಆದರೂ ಸಂಸದ ವಿರೂಪಾಕ್ಷಪ್ಪ ಇತ್ತ ಹೊರಳಿ ಕೂಡ ನೋಡುತ್ತಿಲ್ಲ.


ಜಿಲ್ಲಾ ಪಂಚಾಯತಿಯಂತೂ ಕಳೆದ ಆರು ತಿಂಗಳಿನಿಂದ ಐಸಿಯುನಲ್ಲಿದೆ. ಅತೃಪ್ತ ಕಾಂಗ್ರೆಸ್ಸಿಗರಿಂದ ತನ್ನ ಕುರ್ಚಿಯನ್ನು ಉಳಿಸಿಕೊಳ್ಳಲು ಎರಡು ಬಾರಿ ತಲೆ ತಪ್ಪಿಸಿಕೊಂಡಿರುವ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಮಾಲತಿ ನಾಯಕರಿಗೆ ಕೊಲ್ಲಾಪುರದ ಮಹಾಲಕ್ಷ್ಮಿದೇವಿ ಕೂಡಾ "ಯಾಕವ್ವಾ ಇಷ್ಟು ಹಠ ಮಾಡ್ತಿ? ಕುರ್ಚಿ ಬಿಡು ತಾಯಿ" ಅಂತ ಹೇಳುತ್ತಿಲ್ಲ.

ಆದರೆ ಜಿ.ಪಂ. ಕಾಂಗ್ರೆಸ್‌ನವರು ಮಾತ್ರ "ಇಳಿದು ಬಾ ತಾಯೇ, ಕುರ್ಚಿಯಿಂದ ಇಳಿದು ಬಾ..." ಅಂತ ವಿಕಾರವಾಗಿ ರೋದಿಸುತ್ತಿದ್ದಾರೆ. ಒಬ್ಬ ಬಿ. ಬಸವರಾಜಪ್ಪನನ್ನು ಹೊರತುಪಡಿಸಿ ಇದೆಲ್ಲ ಭಂಡಾಟದ ನಡುವೆ ಜನರ ಬವಣೆ ಜಿ.ಪಂ ಸದಸ್ಯರಿಗೆ ಕಾಣುತ್ತಿಲ್ಲ.

ಹತ್ತು ತಿಂಗಳ ಹಿಂದೆ ಕಾಂಗ್ರೆಸ್ಸಿನ ಒಳಜಗಳದ ಲಾಭವನ್ನು ಬಳಸಿಕೊಂಡಿದ್ದರು. ಅವತ್ತು ಜೆಡಿಎಸ್‌ನಲ್ಲಿದ್ದ ಕರಿಯಣ್ಣ ಸಂಗಟಿಯನ್ನು ಉಪಯೋಗಿಸಿಕೊಂಡು ಜಿ.ಪಂನಲ್ಲಿದ್ದ ಜೆಡಿಎಸ್‌ನ ಆರು, ಕಾಂಗ್ರೆಸ್‌ನ ಒಂಭತ್ತು ಬಿಜೆಪಿಯ ಮೂರು ಸದಸ್ಯರ ಬಲದೊಂದಿಗೆ ಅರ್ಧ ಕೋಟಿಯಷ್ಟು ರೂಪಾಯಿಗಳನ್ನು ಖರ್ಚು ಮಾಡಿ, ಮಾಲತಿ ನಾಯಕರನ್ನು ಅಧ್ಯಕ್ಷ ಗಾದಿ ತಂದು ಕೊಡಿಸಿದ್ದರು.

ಅಂದು ಪರಸ್ಪರರ ಗುಂಪಿಗೆ ಅಧಿಕಾರ ಸಿಗದದ್ದನ್ನು ಕಂಡು ಖುಷಿಯಿಂದ ಉಬ್ಬಿಹೋಗಿದ್ದರು ಅವಿವೇಕಿ ಕಾಂಗ್ರೆಸ್ಸಿಗರು. ಆದರೆ ಅವರದೇ ಪಾರ್ಟಿಯ ಬಸವರಾಜಪ್ಪನ ಸೂಪರ್ ಪ್ರೆಸಿಡೆಂಟ್‌ಗಿರಿಯಿಂದ ರೊಚ್ಚಿಗೆದ್ದು ಕೊನೆಗೆ ಮಾಲತಿ ನಾಯಕರ ವಿರುದ್ಧ ಅವಿಶ್ವಾಸ ಮತವನ್ನು ಯಾಚಿಸಲು ಸಿಇಓಗೆ ಮನವಿ ಸಲ್ಲಿಸುವ ಮೂಲಕ ತಮ್ಮ ಜನರೇಟರ್ ನಾಲೆಡ್ಜ್ ಅನ್ನು ಬಹಿರಂಗಪಡಿಸಿಕೊಂಡಿದ್ದರು.

ಅದೆಲ್ಲ ದೊಡ್ಡ ರಾದ್ಧಾಂತವಾಗಿ ಕೊನೆಗೆ ಕೋರ್ಟು "ಮೊದಲಿನಿಂದ ಅವಿಶ್ವಾಸದ ಪ್ರಕ್ರಿಯೆಯನ್ನು ಮತ್ತೆ ಚಾಲೂ ಮಾಡಬೇಕು" ಎಂದು ಹೇಳಿದಾಗ ಅವಸರವಾಗಿ ಕೊಪ್ಪಳಕ್ಕೆ ಓಡಿಬಂದ ಕಾಂಗ್ರೆಸ್ಸಿಗರು ಮಾಲತಿ ನಾಯಕ್‌ಗೆ ಅವಿಶ್ವಾಸದ ಮನವಿ ಕೊಡಲು ಹೋದರು.



ಈಶಣ್ಣ ಗುಳಗಣ್ಣನವರ್

ಇವರನ್ನು ಕಂಡು "ಉಂಡು ಬರ್ತೀನಿ ತಡ್ರೀ..." ಅಂತ ಮನೆಗೆ ಹೋದ ಮಾಲತಿ ನಾಯಕ ಆವತ್ತು ವಾಪಸ್ ಬರಲೇ ಇಲ್ಲ, ಅವರ ಪಿಎಗೆ ತಮ್ಮ ಮನವಿಯನ್ನು ಕೊಟ್ಟು ಬಂದ ಕಾಂಗ್ರೆಸಿಗರು ಮತ್ತೊಮ್ಮೆ ತಮ್ಮ ಅವಿವೇಕವನ್ನು ಪ್ರದರ್ಶಿಸಿದರು.

ಅದೂ ಸಾಲದೆಂಬಂತೆ ಮತ್ತೆ ಕೋರ್ಟ್‌ಗೆ ಹೋಗಿ, ಮತ್ತೆ ಹೊಸದಾಗಿ ಅವಿಶ್ವಾಸದ ಕೆಲಸ ಶುರುಮಾಡಿದ್ದಾರೆ.

ಇದೆಲ್ಲ ಆಗುವ ಹೊತ್ತಿಗೆ ಕುಷ್ಟಗಿ ತಾಲ್ಲೂಕಿನಲ್ಲಿ ಒಂದು ಕಡೆ ಆರಂಭವಾದ ಉದ್ಯೋಗ ಖಾತ್ರಿ ಯೋಜನೆ ಒಂದೇ ದಿನಕ್ಕೆ ನಿಂತುಹೋಗಿದೆ. ಆದರೂ ತಿನ್ನಲು ತಮಗೇನಾದರು ಉಳಿದಿದೆಯಾ ಅಂತ ಜಿ.ಪಂ ಸದಸ್ಯರು ನೋಡಿದರೆ ಜಿಲ್ಲಾ ಪಂಚಾಯತಿಯ ತಿಜೋರಿಯಲ್ಲಿ ಏನೂ ಉಳಿದಿಲ್ಲ, ಕೊನೆಗೆ 121 ಕೋಟಿ ರೂ.ಗಳ ಉದ್ಯೋಗ ಖಾತ್ರಿ ಯೋಜನೆಗೆ ಒಂದು ಪ್ಲಾನ್ ತಯಾರಿಸಿ ತಾವು ಎಷ್ಟೆಷ್ಟು ಹಂಚಿಕೊಳ್ಳಬಹುದು ಅಂತ ಲೆಕ್ಕ ಹಾಕುತ್ತಿದ್ದಾರೆ.

ಆರು ವರ್ಷಗಳ ಹಿಂದೆ ಹಸಿವನ್ನು ತಾಳಲಾರದೆ ಆರು ಜನ ಆತ್ಮಹತ್ಯೆ ಮಾಡಿಕೊಂಡಾಗ ರಾಷ್ಟ್ರದ ತುಂಬ ಕೊಪ್ಪಳ ಜಿಲ್ಲೆ ಸುದ್ದಿಯಾಗಿತ್ತು. ಇವತ್ತು ಅಂತಹದ್ದೇ ಪ್ರಕರಣಗಳು ಜಿಲ್ಲೆಯಲ್ಲಿ ನಡೆಯಲಿ ಎಂಬ ಕೆಟ್ಟ ಆಲೋಚನೆಯಲ್ಲಿ ಇಲ್ಲಿನ ಜನಪ್ರತಿನಿಧಿಗಳಿರುವಂತಿದೆ.

ಇವತ್ತು ಕೊಪ್ಪಳದ ಬಹುತೇಕ ಜಿ.ಪಂ. ಸದಸ್ಯರು ಯಾವ-ಯಾವ ಪಾರ್ಟಿಯವರು ಅಂತ ಗೊತ್ತೇ ಆಗತ್ತಿಲ್ಲ, ಯಾಕೆಂದರೆ ನುಂಗುವುದರಲ್ಲಿ ಅವರೆಲ್ಲರದ್ದೂ ಒಂದೇ ಧರ್ಮ, ಒಂದೇ ಜಾತಿ, ಒಂದೇ ವರ್ಗ.

ಇವರೆಲ್ಲರಿಗೆ ಚುರುಕು ಮುಟ್ಟಿಸಬಹುದೆಂಬ ಭರವಸೆ ಹುಟ್ಟಿಸಿದ್ದ ಜಿಲ್ಲಾ ಮಂತ್ರಿ ಗೋವಿಂದ ಕಾರಜೋಳ ಮಾತ್ರ ತಿಂಗಳಿಗೆ ಎರಡು ಬಾರಿ ಟೂರ್ ಹೊಡೆದು, ಸೈಟ್ ಸೀಯಿಂಗ್ ಮಾಡಿ ಬೆಂಗಳೂರಿಗೆ ವಾಪಸ್ ಹೋಗುತ್ತಿದ್ದಾರೆ.

■ ವರದಿಗಾರ

ಸತತ ಅಡೆತಡೆಗಳ ನಡುವೆಯೂ ಯಶಸ್ವಿಯಾದ ಕೆ.ಎಫ್.ಡಿ.ಯ

ಫ್ರೀಡಂ ಪೆರೇಡ್!



ಪಾಪ್ಯುಲರ್ ಫ್ರಂಟ್‌ನ ಫ್ರೀಡಂ ಪೆರೇಡ್ ಎಲ್ಲ ಅಡೆತಡೆಗಳನ್ನು ಮೀರಿ, ತಡೆಗೋಡೆಗಳನ್ನು ಏರಿ ಆಕರ್ಷಕವೂ, ನಿರೀಕ್ಷೆಗೂ ಮೀರಿ ಯಶಸ್ವಿಯಾಗಿಯೂ, ಅರ್ಥಗರ್ಭಿತವಾಗಿಯೂ ನಡೆಯಿತು. ಈ ದೇಶದ ಸ್ವಾತಂತ್ರ್ಯವನ್ನು ಈ ದೇಶದ ಹುಸಿ ದೇಶಭಕ್ತರು ಮತ್ತು ಸರ್ಕಾರವೇ ಮುಂದೆ ನಿಂತು ಹರಾಜು ಹಾಕುತ್ತಿರುವಾಗ ಈ ದೇಶದ ಜನತೆಯ ಸ್ವಾತಂತ್ರ್ಯದ ರಕ್ಷಣೆಗೆ ಯುವ ಮುಸ್ಲಿಂ ಯೋಧರು ತಾವು ಕಟಿ ಬದ್ಧ ಎಂದು ಘೋಷಿಸಿದ್ದು ಭರವಸೆ ಹುಟ್ಟಿಸುವಂತಿತ್ತು.

ಸ್ವಾತಂತ್ರೋತ್ಸವ ಆಚರಿಸಲು ಬರೋಬ್ಬರಿ ಮೂರು ತಿಂಗಳಿಂದ ಸಂಗ್ರಾಮ ನಡೆಸಿದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕೊನೆಗೂ ಫ್ರೀಡಂ ಪೆರೇಡ್ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿತು. ಸ್ಥಳ ಸ್ಥಳಾಂತರಗೊಂಡರೂ ಪಾಪ್ಯುಲರ್ ಫ್ರಂಟ್‌ನ ಸಂಕಲ್ಪ ಬದಲಾಗಲಿಲ್ಲ. ಹೀಗಾಗಿ ಸ್ವಾತಂತ್ರ್ಯೋತ್ಸವ ದಿನದಂದು ಮಂಗಳೂರಿನ ಉತ್ಸವ ಮೈದಾನ ಮತ್ತು ಮಂಗಳಾ ಕ್ರೀಡಾಂಗಣದಲ್ಲಿ ಅಭೂತ ಪೂರ್ವ ಫ್ರೀಡಂ ಪೆರೇಡ್ ನಡೆಯಿತು. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಆಯೋಜಿಸಿದ ಈ ಪೆರೇಡ್‌ನಲ್ಲಿ ಶಿಸ್ತಿನ ಸಿಪಾಯಿಗಳಂತೆ ಹೆಜ್ಜೆ ಹಾಕಿದ ಫ್ರಂಟ್‌ನ ಸದಸ್ಯರ ಘನತೆ, ಗಾಂಭೀರ್ಯಕ್ಕೆ ಅಲ್ಲಿ ಸೇರಿದ್ದ ಹತ್ತಾರು ಸಾವಿರ ಜನರು ತಲೆದೂಗಿದರು. ಕೆಎಫ್‌ಡಿಯ ಪ್ರಯತ್ನವನ್ನು ಜನಸಾಗರ ಶ್ಲಾಘಿಸುತ್ತಿದ್ದರೆ ಸಂಘಪರಿವಾರದ ಮತ್ತು ಬಿಜೆಪಿ ಸರ್ಕಾರ ಮಾತ್ರ ಕಂಗಾಲಾಗಿತ್ತು.





ನಾಲ್ಕು ತಿಂಗಳ ಹಿಂದೆಯೇ ಅಂದರೆ ಮೇ ತಿಂಗಳಲ್ಲಿ ಸಂಘಟಕರು ಫ್ರೀಡಂ ಪೆರೇಡ್ ಅನುಮತಿಗಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಲ್ಲಿ ಮನವಿ ಸಲ್ಲಿಸಿದ್ದರು. "ಪರ್ವಾಗಿಲ್ಲ, ಪೆರೇಡ್‌ನ ಸಿದ್ಧತೆಗಳನ್ನೆಲ್ಲ ನಡೆಸಿರಿ, ಅನುಮತಿ ಹೇಗೂ ಕೊಡುತ್ತೇವೆ" ಎಂದು ಮೌಖಿಕ ಭರವಸೆಯನ್ನೂ ಜಿಲ್ಲಾ ಪೊಲೀಸ್ ಅಧಿಕಾರಿಗಳು ಹೇಳಿದ್ದರು. ಅಷ್ಟಕ್ಕೂ ಸ್ವಾತಂತ್ರ್ಯೋತ್ಸದ ಕಾರ್ಯಕ್ರಮವಾಗಿರುವುದರಿಂದ ಅನುಮತಿ ಪಡೆಯಲು ಜಿಲ್ಲಾಡಳಿತ ಇಷ್ಟೊಂದು ಸತಾಯಿಸುತ್ತದೆ ಎಂಬುದರ ಅರಿವು ಸಂಘಟಕರಿಗೆ ಇರಲಿಲ್ಲ. ಫ್ರೀಡಂ ಪೆರೇಡ್‌ನ ಪ್ರಚಾರ ಅಬ್ಬರದಿಂದಲೇ ನಡೆಯಿತು. ರಾಜ್ಯಾದ್ಯಂತ ಪೋಸ್ಟರ್, ಕಟೌಟ್‌ಗಳು ಕಾಣಿಸಿಕೊಂಡವು. ಸಂಘಪರಿವಾರದವರಿಗೆ ಮುಟ್ಟಿದ ಬಿಸಿ ಪೊಲೀಸ್ ಇಲಾಖೆಗೂ ಮುಟ್ಟಿತು. ಮತ್ತೆ ಶುರುವಾಯಿತು ಒಂದೊಂದೇ ತಕರಾರುಗಳು...

"ಯೂನಿಫಾರ್ಮ್ ಪರ್ಮಿಶನ್ ತೆಗೆದುಕೊಂಡಿದ್ದೇನಪ್ಪಾ?"- ಮೊದಲ ಸುತ್ತಿನ ಮಾತುಕತೆಯ ವೇಳೆ ಡಿವೈಎಸ್ಪಿ ಬಾಯಿಯಲ್ಲಿ ತೇಲಿಬಂದ ಮಾತಿದು. ಅವರ ಬಾಯಿಯಿಂದ ಈ ಮಾತನ್ನು ಯಾರು ಆಡಿಸಿದರೋ, ಆತ ದೇವರೇನಲ್ಲ! "ಯೂನಿಫಾರ್ಮ್‌ಗೆ ಪರ್ಮಿಶನ್ ಅಗತ್ಯ ಇದೆಯಾ" ಎಂದು ಪಾಪ್ಯುಲರ್ ಫ್ರಂಟ್‌ನ ನಿಯೋಗ ಮರುಪ್ರಶ್ನಿಸಿದಾಗ, "ಅದೆಲ್ಲಾ ನಂಗೊತ್ತಿಲ್ಲ, ಫರ್ಮಿಶನ್ ಬೇಕೋ ಬೇಡವೋ ಎಂದು ಮೊದಲೇ ಕೇಳ್ಬೇಕಾಗಿತ್ತು, ನನ್ನನ್ನು ಕೇಳಿದರೆ ನಾನ್ಯಾಕೆ ಹೇಳ್ಬೇಕು.." ಎಂದಾಗಲೇ ಬಂದಿದ್ದವರಿಗೆ ಅವರ ಮಾತಿನ ಮರ್ಮ ಅರಿವಾಯಿತು. "ಸಾರ್! ಅರೆ ಚೆಡ್ಡಿಗಳು ಪಥಸಂಚಲನ ಮಾಡುತ್ತಾರಲ್ಲಾ, ಅವರಿಗೆ ಪರ್ಮಿಶನ್ ಕೊಟ್ಟಿದ್ರಾ? ಶಾಲೆಗಳಲ್ಲಿ, ಫ್ಯಾಕ್ಟರಿಗಳಲ್ಲಿ, ಕಂಪೆನಿಗಳಲ್ಲಿ ಯೂನಿಫಾರ್ಮ್‌ಗೆ ಪರ್ಮಿಶನ್ ಅಂತ ನೀವು ಕೊಟ್ಟಿದ್ರಾ?" ಎಂದು ಪ್ರಶ್ನಿಸಿದಾಗ, ಸುಮ್ಮನೆ ಜಾಗ ಖಾಲಿ ಮಾಡಿದ್ದಾರೆ ಡಿವೈಎಸ್ಪಿ ಸಾಹೇಬ್ರು. ಇನ್ನೇನು ಫ್ರೀಡಂ ಪೆರೇಡ್‌ನ ತಯಾರಿಯೆಲ್ಲ ಮುಗಿದು ಕೇವಲ 15 ದಿನಗಳೇ ಬಾಕಿಯುಳಿದಿರುವಾಗ ಜಿಲ್ಲಾಧಿಕಾರಿಯಿಂದ ಪಾಪ್ಯುಲರ್ ಫ್ರಂಟ್‌ನ ಪ್ರಧಾನ ಕಾರ್ಯದರ್ಶಿಗೆ ಪತ್ರವೊಂದು ಬಂತು. ಅದರಲ್ಲಿ "ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ಇದೆ. ಅಲ್ಲಲ್ಲಿ ಬಾಂಬ್ ಸ್ಫೋಟವಾಗಿರುವುದರಿಂದ ಇಲ್ಲೂ ಆತಂಕವಿದೆ. ಈ ಕಾರಣಕ್ಕಾಗಿ ಮಂಗಳೂರು ನಗರ ವಲಯದೊಳಗೆ ಪೆರೇಡ್‌ಗಾಗಲೀ ಅಥವಾ ಕಾರ್ಯಕ್ರಮಕ್ಕಾಗಲೀ ಅವಕಾಶವಿಲ್ಲ, ಅದೇನಿದ್ದರೂ ನಗರದ ಹೊರವಲಯದಲ್ಲಿ ಖಾಸಗಿ ಸ್ಥಳದಲ್ಲಿ ಮಾತ್ರ ಕಾರ್ಯಕ್ರಮ ನಡೆಸಬಹುದು. ಪೆರೇಡ್ ನಡೆಸುವುದು ಸಾಧ್ಯವಿಲ್ಲ" ಎಂದು ಬರೆಯಲಾಗಿತ್ತು.

ಇಂತಹ ಸಂದರ್ಭದಲ್ಲಿ ಕೆಎಫ್‌ಡಿಯ ಬೆಂಬಲಕ್ಕೆ ನಿಂತ ಸಾರ್ವಜನಿಕರು ಜಿಲ್ಲಾಡಳಿತವನ್ನು ಪ್ರಶ್ನಿಸತೊಡಗಿದರು. ಶಾಸಕರಾದ ಅಭಯಚಂದ್ರ ಜೈನ್, ಯು.ಟಿ.ಖಾದರ್, ವಸಂತ ಬಂಗೇರ ಮುಂತಾದ ರಾಜಕೀಯ ಮುಖಂಡರು ಜಿಲ್ಲಾಧಿಕಾರಿಯೊಂದಿಗೆ ಮಾತುಕತೆ ನಡೆಸಿ ಕಾರ್ಯಕ್ರಮ ನಡೆಸಲು ಅನುಮತಿ ಕೇಳಿದಾಗ, "ನೋಡೋಣ" ಎಂದಿದ್ದರು ಜಿಲ್ಲಾಧಿಕಾರಿ. ಮರುದಿನ ಬೆಳಗ್ಗೆ ಎಸ್ಪಿಯವರ ಮೂಲಕ ನಗರದೊಳಗೆ ಪೆರೇಡ್ ನಡೆಸಲು ಅನುಮತಿ ನೀಡದೆ, ಕರಾವಳಿ ಉತ್ಸವ ಮೈದಾನ ಮತ್ತು ಮಂಗಳಾ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ನಡೆಸಬಹುದು ಎಂದು ಆದೇಶ ನೀಡಿದ್ದರು.

ದುರದೃಷ್ಟವಶಾತ್, ಆಗಸ್ಟ್ 14ರಂದು ಅಂದರೆ ಕಾರ್ಯಕ್ರಮದ ಮುನ್ನಾ ದಿನ ಮಂಗಳೂರು ಸಮೀಪ ಉಳ್ಳಾಯಬೆಟ್ಟು ಎಂಬಲ್ಲಿ ಶಾಲಾ ಬಸ್ ನದಿಗೆ ಉರುಳಿ ಪುಟಾಣಿಗಳು ಸೇರಿದಂತೆ 11 ಮಂದಿ ನೀರುಪಾಲಾಗಿದ್ದರು. ಇಡೀ ಜಿಲ್ಲೆಯೇ ಶೋಕತಪ್ತವಾಗಿತ್ತು. ಫ್ರೀಡಂ ಪೆರೇಡ್ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿಯಿಂದ ಲಿಖಿತ ಅನುಮತಿ ಸಿಕ್ಕಿದ್ದು ಸಂಜೆ 5.30ಕ್ಕೆ. ಅಂದು ರಾತ್ರಿ ಮೈದಾನದಲ್ಲಿ ಕಾರ್ಯಕ್ರಮದ ವೇದಿಕೆ ಮತ್ತು ಮತ್ತಿತರ ಸಿದ್ಧತೆಗಳನ್ನು ನಡೆಸುತ್ತಿರುವಾಗಲೇ ಅಲ್ಲಿಗೆ ಆಗಮಿಸಿದ ಡಿವೈಎಸ್ಪಿ ಧರ್ಮಯ್ಯರ ತಂಡದಿಂದ ಅಡ್ಡಿ. ದುರಂತದ ಸಲುವಾಗಿ ಜಿಲ್ಲಾಡಳಿತ ಶೋಕಾಚರಣೆ ಘೋಷಿಸಿಕೊಂಡಿರುವುದರಿಂದ ಸ್ವಾತಂತ್ರ್ಯೋತ್ಸವದ ಎಲ್ಲ ಸಾಂಸ ತಿಕ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದೆ ಎಂಬ ಹೊಸ ವರಸೆಯನ್ನು ಸಾಕಷ್ಟು ಮುತುವರ್ಜಿಯಿಂದ ಹೇಳತೊಡಗಿದರು. "ನಮ್ಮದು ಸಾಂಸ್ಕೃತಿಕ ಕಾರ್ಯಕ್ರಮವಲ್ಲ, ಗೌರವ ರಕ್ಷೆ ಸ್ವೀಕಾರ ಮತ್ತು ರಾಷ್ಟ್ರಧ್ವಜದೊಂದಿಗೆ ಪಥಸಂಚಲನ ಕಾರ್ಯಕ್ರಮ ಮಾತ್ರ. ಅಲ್ಲದೆ ದುರಂತದ ಸ್ಥಳಗಳಿಗೆ ನಮ್ಮ ಕಾರ್ಯಕರ್ತರು, ನಾಯಕರು ಭೇಟಿ ನೀಡಿ ಪರಿಹಾರ ಕಾರ್ಯದಲ್ಲಿ ನಿರತರಾಗಿದ್ದಾರೆ ಮತ್ತು ಸಾಂತ್ವನ ನೀಡುತ್ತಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿ ಮತ್ತು ಎಸ್ಪಿಯವರು ಅನುಮತಿ ನೀಡಿರುವ ಕಾರ್ಯಕ್ರಮವನ್ನು ರದ್ದುಪಡಿಸುವಂತಿಲ್ಲ" ಎಂದು ಕೆಎಫ್‌ಡಿ ಸಮಜಾಯಿಷಿ ನೀಡಿದಾಗಲೂ ಡಿವೈಎಸ್ಪಿ ವೇದಿಕೆಯ ಕೆಲಸವನ್ನು ಬಲವಂತವಾಗಿ ನಿಲ್ಲಿಸಿದರು. ಆನಂತರ ಡಿವೈಎಸ್ಪಿ ಬಹಳ ಉತ್ಸಾಹದಿಂದ ರಾತ್ರಿ ವೇಳೆಯೇ ಪತ್ರಿಕಾ ಕಚೇರಿಗಳಿಗೆ ಫೋನಾಯಿಸಿ, "ಕೆಎಫ್‌ಡಿ ಕಾರ್ಯಕ್ರಮ ರದ್ದಾಗಿದೆ" ಎಂದು ಪತ್ರಿಕಾ ಹೇಳಿಕೆ ನೀಡಿದ್ದರು. ಟಿವಿ9 ಅಂದು ರಾತ್ರಿಯಿಂದ ಬೆಳಗ್ಗಿನವರೆಗೆ "ಕೆಎಫ್‌ಡಿ ಕಾರ್ಯಕ್ರಮ ರದ್ದು, ಜಿಲ್ಲಾಧಿಕಾರಿ ಆದೇಶ" ಎಂಬ ಬ್ರೇಕಿಂಗ್ ನ್ಯೂಸ್ ಬಿತ್ತರಿಸುತ್ತಿತ್ತು.

"ಏನೇ ಆಗಲಿ, ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ ನಡೆಸಿಯೇ ಸಿದ್ಧ" ಎಂದು ತೀರ್ಮಾನಿಸಿದ ಸಂಘಟಕರು ಪೊಲೀಸರ ಯಾವುದೇ ಒತ್ತಡಗಳಿಗೆ ಮಣಿಯದೇ ಇದ್ದಾಗ ನಿರ್ವಾಹವಿಲ್ಲದೆ ಜಿಲ್ಲಾಡಳಿತವು ಆಗಸ್ಟ್ 15ರಂದು ಬೆಳಗ್ಗೆ ಮತ್ತೆ ಮೌಖಿಕ ಅನುಮತಿ ನೀಡಿತ್ತು. ಸ್ವಾತಂತ್ರ್ಯ ದಿನಾಚರಣೆ ದೇಶದ ಪ್ರತಿಯೊಬ್ಬ ಪ್ರಜೆಯ ಮೂಲಭೂತ ಹಕ್ಕು. ಅದನ್ನು ತಡೆಯಲು ಸರಕಾರಕ್ಕೂ ಹಕ್ಕಿಲ್ಲ. ಅಂದಮೇಲೆ ಇಲ್ಲಿ ನಡೆದದ್ದಾದರೂ ಏನು? "ಪೊಲೀಸ್ ಇಲಾಖೆಗೆ ಕೆಎಫ್‌ಡಿಯೊಂದಿಗೆ ಯಾವುದೇ ವೈಮನಸ್ಸು ಇಲ್ಲ. ಬಿಜೆಪಿಯ ರಾಜ್ಯ ಸರಕಾರಕ್ಕೂ ಕೆಎಫ್‌ಡಿಗೂ ನಡೆಯುತ್ತಿರುವ ನೇರ ಸಮರ ಇದು. ನಾವು ಇಲ್ಲಿ ಮಧ್ಯವರ್ತಿಗಷ್ಟೇ" ಎಂದು ಹೇಳಿದ ಪೊಲೀಸ್ ಅಧಿಕಾರಿಯೊಬ್ಬರ ಮಾತು ಅಕ್ಷರಶಃ ನಿಜವೆನಿಸಿದೆ. ಅಂತು ಪಾಪ್ಯುಲರ್ ಫ್ರಂಟ್‌ನ ಫ್ರೀಡಂ ಪೆರೇಡ್ ಎಲ್ಲ ಅಡೆತಡೆಗಳನ್ನು ಮೀರಿ, ತಡೆಗೋಡೆಗಳನ್ನು ಏರಿ ಆಕರ್ಷಕವೂ, ನಿರೀಕ್ಷೆಗೂ ಮೀರಿ ಯಶಸ್ವಿಯಾಗಿಯೂ, ಅರ್ಥಗರ್ಭಿತವಾಗಿಯೂ ನಡೆಯಿತು. ಈ ದೇಶದ ಸ್ವಾತಂತ್ರ್ಯವನ್ನು ಈ ದೇಶದ ಹುಸಿ ದೇಶಭಕ್ತರು ಮತ್ತು ಸರ್ಕಾರವೇ ಮುಂದೆ ನಿಂತು ಹರಾಜು ಹಾಕುತ್ತಿರುವಾಗ ಈ ದೇಶದ ಜನತೆಯ ಸ್ವಾತಂತ್ರ್ಯದ ರಕ್ಷಣೆಗೆ ಯುವ ಮುಸ್ಲಿಂ ಯೋಧರು ತಾವು ಕಟಿ ಬದ್ಧ ಎಂದು ಘೋಷಿಸಿದ್ದು ಭರವಸೆ ಹುಟ್ಟಿಸುವಂತಿತ್ತು. ■




ಷಡಾಕ್ಷರಿ

ಯಡ್ಡಿ ಮನೆಯಲ್ಲಿ ಬ್ರೋಕರ್ ಷಡಾಕ್ಷರಿ

ಯಡಿಯೂರಪ್ಪ ಇದ್ದರೂ ಅಷ್ಟೇ ಇಲ್ಲದಿದ್ದರೂ ಅಷ್ಟೆ. ಅವರ ಶಿಕಾರಿಪುರದ ಬಂಗಲೆ ಮಾತ್ರ ಪ್ರತಿನಿತ್ಯ ಕಿಕ್ಕಿರಿದೆ ಇರುತ್ತದೆ. ಅವರ್‍ಯಾರೂ ಶಿಕಾರಿಪುರದ ಮತದಾರರಾಗಲಿ, ಶಿವಮೊಗ್ಗ ಆಸುಪಾಸಿನ ಬಿಜೆಪಿ ಕಾರ್ಯಕರ್ತರಲ್ಲ. ಚಿಕ್ಕೆಜಮಾನ್ರು ರಾಘು ಭೇಟಿಗೂ ಈ ಪಾಟಿ ಜನ ಬರಲಿಕ್ಕಿಲ್ಲ.

ಅದು ಷಡಾಕ್ಷರಿ ಎಂಬ ದ್ವಿತೀಯ ದರ್ಜೆ ಗುಮಾಸ್ತನೊಬ್ಬನ ತಾಕತ್ತು ಮತ್ತು ನಿಯತ್ತಿನ ಫಲ. ಸದ್ಯ ಇಡೀ ಶಿವಮೊಗ್ಗ ಜಿಲ್ಲೆಯ ಶಿಕ್ಷಣ ಇಲಾಖೆಯನ್ನು ಆಳುತ್ತಿರುವ ಷಡಾಕ್ಷರಿ ತನ್ನನ್ನು ತಾನೇ ಮುಖ್ಯಮಂತ್ರಿಗಳ ಆಪ್ತ ಸಹಾಯಕನೆಂದು ಘೋಷಿಸಿಕೊಂಡಿದ್ದಾನೆ. ಈತ ಶಿಕಾರಿಪುರದ ಮಟ್ಟಿಗೋ ಅಥವಾ ಶಿವಮೊಗ್ಗದ ಪಾಲಿಗೋ ಮುಖ್ಯಮಂತ್ರಿಗಳ ಆಪ್ತ ಸಹಾಯಕನಾಗಿರಬಹುದು. ಆದರೆ ಟ್ರಾನ್ಸ್‌ಫರ್ ದಂಧೆಯಲ್ಲಿ ಷಡಾಕ್ಷರಿಯನ್ನು ಸ್ವತಃ ಯಡ್ಡಿ ಕೂಡ ಮೀರಿಸಲಾರರು!

ಪ್ರತಿ ಬೆಳಿಗ್ಗೆ 10 ಕ್ಕೆ ಸರಿಯಾಗಿ ಶಿಕಾರಿಪುರದ ಯಡ್ಡಿ ಮನೆಯನ್ನು ಷಡಾಕ್ಷರಿ ಹೊಕ್ಕನೆಂದರೆ ಮತ್ತೆ ಹೊರಬೀಳುವುದು ರಾತ್ರಿ ಎಂಟಕ್ಕೇ. ದಿನಕ್ಕೆ ಕನಿಷ್ಠ ಐವತ್ತು ಟ್ರಾನ್ಸ್‌ಫರ್ ಮಾಡಿಸದೇ ಹೋದರೆ ಆತನಿಗೆ ಉಂಡ ಅನ್ನ ಅರಗೋಲ್ಲ. ಇಂತಿಂಥಾ ಶಿಕ್ಷಕರನ್ನು ಇಂಥಲ್ಲಿಗೆ, ಶಿವಮೊಗ್ಗದ ಮೆಡಿಕಲ್ ಕಾಲೇಜಿನ ಸಿಬ್ಬಂದಿ ನೇಮಕಾತಿ, ಪೊಲೀಸ್ ವರ್ಗಾವರ್ಗಿ, ಇತರೇ ಇಲಾಖೆಗಳ ಎತ್ತಂಗಡಿ ದಂಧೆ, ಕಾಂಟ್ರಾಕ್ಟು, ಬೋಗಸ್ ಬಿಲ್ಲು ಹೀಗೆ ಪ್ರತಿಯೊಂದನ್ನು ಷಡಾಕ್ಷರಿಯೇ ನಿಭಾಯಿಸುತ್ತಾನೆ.



ವಿಜಯೇಂದ್ರ

ಇದ್ಯಾವುದೂ ಬಿಜೆಪಿ ಸರ್ಕಾರದ ಹಿತದೃಷ್ಟಿಯಿಂದಾಗಲಿ, ಯಡ್ಡಿ ಮೇಲಿನ ನಿಷ್ಠೆಗಾಗಲಿ ಮಾಡುವ ಸೇವೆಯಲ್ಲ. ಪ್ರತಿಯೊಂದಕ್ಕೆ ಇಂತಿಷ್ಟೆಂಬ ರೇಟಿದೆ. ಶಿಕ್ಷಕರ ಟ್ರಾನ್ಸ್‌ಫರ್‌ಗೆ ಕನಿಷ್ಠ ನಲವತ್ತರಿಂದ ಐವತ್ತು ಸಾವಿರ ಕಕ್ಕಲೇಬೇಕು. ಪೊಲೀಸ್ ಟ್ರಾನ್ಸ್‌ಫರಿಗೆ ಮಿನಿಮಮ್ 25 ಸಾವಿರ ಮಡಗಲೇಬೇಕು. ಇನ್ನು ಕಾಂಟ್ರಾಕ್ಟು, ಬೋಗಸ್‌ಬಿಲ್‌ಗಳ ತೂಕ ಅಳೆದು ಪರ್ಸೆಂಟೇಜ್ ಫಿಕ್ಸ್ ಮಾಡುತ್ತಾನೆ. ಯಾವುದೇ ನಾಚಿಕೆಯಿಲ್ಲದೇ ಹಣ ವಸೂಲಿ ಮಾಡುತ್ತಾನೆ. 'ತೆಗೀರಿ, ನಾನೇನೂ ಮನೆಗೆ ತಗೊಂಡ್ ಹೋಗ್ತೀನಾ? ಇಂತಿಷ್ಟು ಅಂತ ರಾಘಣ್ಣಂಗೆ ಕೊಡಲೇಬೇಕು ಗೊತ್ತಾ? ಚೌಕಾಸಿ ಮಾಡ್ತೀರಲ್ಲಾ; ನನ್ನ ಕೈಯಿಂದ ಹಾಕಿ ಕೊಡ್ಲಾ....?

ಇದು ಷಡಾಕ್ಷರಿಯ ಕಟ್ಟಾ ರೋಫು. ಯಃಕಶ್ಚಿತ್ ದ್ವಿತೀಯ ದರ್ಜೆ ಗುಮಾಸ್ತನೊಬ್ಬ ಶಿವಮೊಗ್ಗದ ಅಧಿಕಾರಿಗಳನ್ನು ಏಕವಚನದಲ್ಲಿ ವಾಚಾಮಗೋಚರ ಬಯ್ಯುತ್ತಾನೆಂದರೆ ಏನರ್ಥ? ಮೂಲತಃ ತುಮಕೂರಿನ ಷಡಾಕ್ಷರಿ ಶಿವಮೊಗ್ಗದ ಡಿಡಿಪಿಐ ಕಚೇರಿಯಲ್ಲಿ ಗುಮಾಸ್ತನಾಗಿದ್ದ. ಸಿದ್ದಗಂಗೆಯ ಶಿವಕುಮಾರ ಸ್ವಾಮಿಯ ರೆಕಮಂಡಿನ ಮೇಲೆ ಯಡ್ಡಿ ಬಳಗ ತೂರಿಕೊಂಡ.

ಇಂಥವನನ್ನು ಯಡ್ಡಿ ಮನೆಗೆ ಹಾಕಿಸಿಕೊಂಡಿದ್ದು ಶಿಕಾರಿಪುರದ ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ ರಾಜಪ್ಪ ಮತ್ತು ಸರ್ಕಾರಿ ಜೂನಿಯರ್ ಕಾಲೇಜಿನ ಪ್ರಿನ್ಸಿಪಾಲ್ ಬಿ.ಎಸ್. ಪಾಟೀಲ್. ಇಬ್ಬರೂ ಯಡ್ಡಿ ಚೇಲಾಗಳೆ. ಯಡಿಯೂರಪ್ಪ ಉಪಮುಖ್ಯಮಂತ್ರಿಯಾಗಿದ್ದೇ ಶಿಕಾರಿಪುರಕ್ಕೆ ವಕ್ಕರಿಸಿದ ಷಡಾಕ್ಷರಿ ಮೊದಮೊದಲು ಶಿವಮೊಗ್ಗದ ಶಿಂಗಾರ ಬಾರಿನಲ್ಲಿ ಪ್ರತಿ ಸಂಜೆ ಅಡ್ಡೆ ಹಾಕುತ್ತಿದ್ದ. ಅಲ್ಲೇ ಡೀಲು ಕುದುರಿಸಿಕೊಂಡಿದ್ದ. ಈಗ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಯಾಗಿದ್ದೇ ಡೀಲು ಕುದುರಿಸುವುದಕ್ಕೆ ಟೈಮಿಲ್ಲ. ತಾಲ್ಲೂಕು ಶಿಕ್ಷಣಾಧಿಕಾರಿಯನ್ನೇ ಏಕವಚನದಲ್ಲಿ ಹೀಯಾಳಿಸುತ್ತಾನೆ. ಸ್ವತಃ ಯಡ್ಡಿ ಮಗನೇ ಹೇಳಿದರೂ ಕಾಸು ಹುಟ್ಟದೇ ಹೋದರೆ ತಾಂತ್ರಿಕ ದೋಷ, ಟೆಕ್ನಿಕಲ್ ಪ್ರಾಬ್ಲಮ್ಮು ಅನ್ನುತ್ತಾನೆ. ಬಂತೆಂದರೆ ಯಾವ ಕಾಯ್ದೆಯಿದ್ದರೂ ಡೋಂಟ್ ಕೇರ್, ಎಂಥಾ ಪಾಖಂಡಿಯೆಂದರೆ ಯಡ್ಡಿ ಮಗ ರಾಘುವಿಗೇ ದಿಕ್ಕುತಪ್ಪಿಸಿ ಅರ್ಧಕ್ಕರ್ಧ ಮುಂಡಾಯಿಸುತ್ತಾನೆ.

ಇಂಥದ್ದೇ ಕೇಸಿನಲ್ಲಿ ಇಂತಿಷ್ಟೇ ದುಡ್ಡು ಬಂತೆಂಬುದು ಯಡ್ಡಿ ಮಗನಿಗೆ ಹೇಗೆ ಗೊತ್ತಾಗಬೇಕು?

ತಾನು ದುಡ್ಡು ತಿಂದು ಅದನ್ನು ಯಾರ್‍ಯಾರೋ ಬಿಜೆಪಿ ನಾಯಕರ ತಲೆಗೆ ಕಟ್ಟುತ್ತಾನೆ. ಕೆಲಸಕ್ಕೆ ಸೇರಿದ ಹೊಸತರಲ್ಲಿ ತನಗೆ ಆಶ್ರಯವಿತ್ತು ವರ್ಷಗಟ್ಟಲೇ ಅನ್ನಹಾಕಿದ ಆಯನೂರಿನ ವಿಶಾಲಾಕ್ಷಿ ಎಂಬ ಶಿಕ್ಷಕಿಯ ವರ್ಗಾವಣೆಗೇ ನಲವತ್ತು ಸಾವಿರ ಕಿತ್ತಿದ್ದಾನೆಂದರೆ ಇನ್ನು ಯಾರನ್ನು ಬಿಡುತ್ತಾನೆ?


ಯಡ್ಡಿ ಮಗ ರಾಘು ದರ್ಶನಕ್ಕಿಂತಲೂ ಬ್ರೋಕರ್ ಷಡಾಕ್ಷರಿಯ ಟ್ರಾನ್ಸ್‌ಫರ್ ಕಾಯಕಕ್ಕೆಂದು ಶಿಕಾರಿಪುರಕ್ಕೆ ಬರುವವರ ಸಂಖ್ಯೆಯೇ ದಿನೇದಿನೇ ಹೆಚ್ಚುತ್ತಿದೆ. ಯಃಕಶ್ಚಿತ್ ಗುಮಾಸ್ತ ಇಡೀ ಶಿವಮೊಗ್ಗದ ಟ್ರಾನ್ಸ್‌ಫರ್ ದಂಧೆಯನ್ನು ನಿಭಾಯಿಸುತ್ತಾನೆಂದರೆ ಅದು ಶಿವಮೊಗ್ಗದ ಸೌಭಾಗ್ಯವಲ್ಲದೇ ಮತ್ತೇನು?

■ ರಾ.ಸೋ.

ವಲಸೆ ಹೋಗುತ್ತಿರುವ ರಾಜ್ಯದ ಕ್ರೀಡಾಪಟುಗಳು

ಈ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ಭಾರತಕ್ಕೆ ಒಲಿಂಪಿಕ್ ಮೆಡಲ್ ಯಾಕೆ ಸಿಗುತ್ತಿಲ್ಲ?' ಎಂಬ ಲೇಖನವನ್ನು ನೀವು ಓದಿರಬಹುದು. ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಭಾರತದ ಪಾಲು ಶೇ.೧೦ ರಷ್ಟಿದ್ದರೂ ಒಲಿಂಪಿಕ್ ಮೆಡಲ್‌ಗಳಲ್ಲಿ ಶೇ.೧ಕ್ಕಿಂತ ಕಡಿಮೆ ಪಡೆಯುತ್ತಿರುವ ನಮ್ಮ ಕಳಪೆ ಸಾಧನೆಗೆ ಕಾರಣಗಳೇನು ಎಂಬುದನ್ನು ಆ ಲೇಖನದಲ್ಲಿ ವಿಶ್ಲೇಷಿಸಲಾಗಿತ್ತು.

ಈಗ ಚೀನಾದಲ್ಲಿ ಒಲಿಂಪಿಕ್ ಕ್ರೀಡಾಕೂಟ ಮುಕ್ತಾಯದ ಹಂತಕ್ಕೆ ಬಂದಿದೆ. ಕರ್ನಾಟಕಕ್ಕಿಂತ ಚಿಕ್ಕದೇಶಗಳೆಲ್ಲಾ ಪದಕಗಳ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಆದರೆ ನಮ್ಮ ರಾಜ್ಯ ಸರ್ಕಾರ ಕ್ರೀಡಾಪಟುಗಳಿಗೆ ಸರಿಯಾದ ಪ್ರೋತ್ಸಾಹ ನೀಡದೇ ಇರುವುದರಿಂದ ರಾಜ್ಯದ ಅನೇಕ ಪ್ರತಿಭಾವಂತರು ಬೇರೆ ರಾಜ್ಯಗಳಿಗೆ ವಲಸೆ ಹೋಗಿ, ಆಶ್ರಯ ನೀಡಿದ ರಾಜ್ಯಗಳನ್ನು ಪ್ರತಿನಿಧಿಸುತ್ತಿದ್ದಾರೆ ಎಂಬ ಸುದ್ದಿ ಮಾತ್ರ ಒಲಿಂಪಿಕ್‌ನ ಬಣ್ಣಬಣ್ಣದ ಸುದ್ದಿಗಳ ನಡುವೆ ಕಾಣಿಸುತ್ತಲೇ ಇಲ್ಲ.



ಗೂಳಿಹಟ್ಟಿ ಶೇಖರ್

ಈ ಬಾರಿ ಭಾರತವನ್ನು 57 ಕ್ರೀಡಾಪಟುಗಳು ಪ್ರತಿನಿಧಿಸಿದ್ದರು. ಅವರಲ್ಲಿ ರಾಜ್ಯದವರ ಸಂಖ್ಯೆ ಸುಮಾರು ಒಂಬತ್ತು ಎಂದು ಹೇಳಬಹುದು. ಆದರೆ ನಿಜವಾಗಿಯೂ ನಾವು ಕರ್ನಾಟಕದವರು ಎಂದು ಹೇಳಿಕೊಳ್ಳುವವರು ಕೇವಲ ನಾಲ್ಕು ಮಂದಿ ಮಾತ್ರ. ಉಳಿದವರೆಲ್ಲ ಕನ್ನಡಿಗರಾದರೂ ಅವರು ಪ್ರತಿನಿಧಿಸುತ್ತಿರುವ ರಾಜ್ಯ ಬೇರೆ. ಇದು ಐದು ಕೋಟಿ ಕನ್ನಡಿಗರು ತಲೆತಗ್ಗಿಸಬೇಕಾದ ವಿಷಯ.

ಇದಕ್ಕೆ ಕಾರಣ ನಿರ್ಲಜ್ಜ ಸರ್ಕಾರ ಎಂದು ಇಲ್ಲಿ ಬಿಡಿಸಿ ಹೇಳಬೇಕಾಗಿಲ್ಲ. ಬೇಕೆನಿಸಿದಾಗ ವಿದೇಶಿ ಪ್ರವಾಸ ಮಾಡಲು, ಭಾರತದ ಕ್ರೀಡಾಪಟುಗಳೆಲ್ಲಾ ಬೆಂಗಳೂರಿಗೇ ಬರಬೇಕು. ಹೊರ ರಾಜ್ಯಗಳಿಗೆ ಹೋದ ಕನ್ನಡಿಗರೂ ಕೂಡ ನಮ್ಮ ಬೆಂಗಳೂರಿನಲ್ಲಿಯೇ ತರಬೇತಿ ಪಡೆಯುತ್ತಾರೆ. ತರಬೇತಿ ಪಡೆಯುವ ವ್ಯವಸ್ಥೆ ಇಲ್ಲಿ ಇದ್ದರೂ ದೀಪದ ಕೆಳಗೆ ಕತ್ತಲು!

ತರಬೇತಿ ಸೌಕರ್ಯವಿಲ್ಲ ಎಂದು ಬೇರೆ ರಾಜ್ಯಗಳ ಕ್ರೀಡಾಪಟುಗಳು ಕೊರಗುತ್ತಿರುತ್ತಾರೆ. ರಾಜ್ಯದ ಮಟ್ಟಿಗೆ ಈ ಸಮಸ್ಯೆ ಗಂಭೀರವಾಗಿಯೇನೂ ಇಲ್ಲ. ಬೆಂಗಳೂರಿನಲ್ಲಿಯೇ 'ಸಾಯಿ' ಕೇಂದ್ರವಿದೆ. ಆದರೆ ಸರ್ಕಾರಕ್ಕೆ ಮಾತ್ರ ಇಲ್ಲಿಯ ಕ್ರೀಡಾಪಟುಗಳ ಸಮಸ್ಯೆಗಳೇ ಅರ್ಥವಾಗುತ್ತಿಲ್ಲ.

ಅದಿರು ಲೂಟಿ ಮಾಡಿ ಚೀನಾಕ್ಕೆ ಗೂಳಿಹಟ್ಟಿ



ಶೋಭಾ


ಕ್ರೀಡೆ ಎಂದರೆ ಏನು ಎಂಬುದು ಗೊತ್ತಿಲ್ಲದವರೆಲ್ಲಾ ನಮ್ಮ ರಾಜ್ಯದಲ್ಲಿ ಕ್ರೀಡಾ ಸಚಿವರಾಗಿದ್ದಾರೆ. ನೆಪಕೊಂದು ಖಾತೆ, ಓಡಾಡಲು ಗೂಟದ ಕಾರು ಸಿಕ್ಕರೆ ಸಾಕು ಎಂದು ಬಾಯಿ ಬಿಡುವ ರಾಜಕಾರಣಿಗಳಿಂದ ಕ್ರೀಡಾ ಕ್ಷೇತ್ರ ಸಂಪೂರ್ಣ ಹಾಳಾಗಿಹೋಗಿದೆ. ಇದುವರೆಗಿನ ಯಾವ ಕ್ರೀಡಾ ಸಚಿವರೂ ಕ್ರೀಡಾಪಟುಗಳ ವಲಸೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ಒಬ್ಬರ ಮೇಲೊಬ್ಬರು ಆರೋಪ ಮಾಡುತ್ತಲೇ ಕಾಲ ಕಳೆದಿದ್ದಾರೆ. ಈಗಿನ ಕ್ರೀಡಾ ಸಚಿವ ಗೂಳಿಹಟ್ಟಿ ಚಂದ್ರಶೇಖರ್ ಕೂಡ ಇದಕ್ಕಿಂತ ಭಿನ್ನವಾಗಿ ವರ್ತಿಸಿಲ್ಲ. ಕ್ರೀಡಾಪಟುಗಳು ವಲಸೆ ಹೋಗಿದ್ದಾರಲ್ಲ ಎಂದು ಅವರನ್ನು ಪ್ರಶ್ನಿಸಿದರೆ ಹಿಂದಿನ ಸರ್ಕಾರ ಇದಕ್ಕೆ ಕಾರಣ ಎಂದು ಕೈತೊಳೆದುಕೊಳ್ಳುತ್ತಾರೆ.

ಕ್ರೀಡಾಪಟುಗಳಿಗೇ ಏನೆಲ್ಲಾ ಮೂಲ ಸೌಕರ್ಯ ಒದಗಿಸಬೇಕೆಂದು ತಿಳಿದುಕೊಳ್ಳಲು ಕಳೆದ ಐವತ್ತು ವರ್ಷಗಳಲ್ಲಿ ಹತ್ತಾರು ಸಚಿವರು, ಅಧಿಕಾರಿಗಳು ಅಧ್ಯಯನ ಪ್ರವಾಸ ಕೈಗೊಂಡು, ಮೋಜು ಮಾಡಿ ಬಂದಿದ್ದಾರೆ. ಈಗ ಗೂಳಿಹಟ್ಟಿ ಸರದಿ. ಗೂಳಿಹಟ್ಟಿಗೆ ಇನ್ನೂ ಕ್ರೀಡಾಪಟುಗಳಿಗೆ ಹೇಗೆ ಪ್ರೋತ್ಸಾಹ ನೀಡಬೇಕೆಂದು ಗೊತ್ತಾಗಿಲ್ಲವಂತೆ. ಅದಕ್ಕೆ ಬೀಜಿಂಗ್‌ಗೆ ಹೋಗಿದ್ದಾರೆ. ಮನೆಯಲ್ಲಿ ಕುಳಿತು ಟಿವಿ ನೋಡಿ ತಿಳಿದುಕೊಳ್ಳಬಹುದಾದ ವಿಷಯಗಳನ್ನು ತಿಳಿದುಕೊಳ್ಳಲು ಇವರು ವಿಮಾನದಲ್ಲಿ ಹಾರಿದ್ದಾರೆ.

SPORTS AUTHORITY OF INDIA

...ಸಿದಿದ್ದು ಏನೂ ಇಲ್ಲದಿದ್ದರೂ ಸಾಧನೆಯ ಸಮಾವೇಶ ಮಾಡಲು, ಅಧಿಕಾರ ನೀಡಿದ್ದು ಜನರಾದರೂ ಮನೆಯ ವಾಸ್ತು ನಮ್ಮ ಅಧಿಕಾರದ ಭವಿಷ್ಯ ಬರೆಯುತ್ತದೆ ಎಂಬ ಮೌಢ್ಯದಿಂದ ಸರ್ಕಾರಿ ನಿವೇಶನಗಳ ವಾಸ್ತು ಬದಲಾಯಿಸಲು ಹತ್ತಾರು ಲಕ್ಷ ಸುರಿಯುವ ಈ ನಮ್ಮ ...ಡಳಿತಗಾರರಿಗೆ ಕ್ರೀಡಾಪಟುಗಳಿಗೆ ಅಗತ್ಯ ಸೌಲಭ್ಯ ಒದಗಿಸಲು, ಪ್ರೋತ್ಸಾಹಧನ ನೀಡಲು ಮಾತ್ರ ಹಣವಿಲ್ಲ.

ಹೆಚ್ಚೇನೂ ಬೇಡ, ಒಲಿಂಪಿಕ್ ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹತೆ ಪಡೆದಂತಹ ಪ್ರತಿಭಾವಂತ ಓರ್ವ ಕ್ರೀಡಾಪಟು ನಿರೀಕ್ಷಿಸುವುದು ಹತ್ತರಿಂದ ಹದಿನೈದು ಲಕ್ಷ ರೂ. ಮಾತ್ರ. ಅದನ್ನು ಕೊಡಲೂ ರಾಜ್ಯ ಸರ್ಕಾರಕ್ಕೆ ಯೋಗ್ಯತೆ ಇಲ್ಲದಿರುವುದರಿಂದ ಈಗಾಗಲೇ ಹಲವಾರು ಮಂದಿ ಬೇರೆ ರಾಜ್ಯಗಳಿಗೆ ವಲಸೆ ಹೋಗಿದ್ದಾರೆ. ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ ಇನ್ನೇನು ಒಲಿಂಪಿಕ್ ...ಡೆಯಲ್ಲಿ ಭಾಗವಹಿಸಲು ಕ್ರೀಡಾಪಟುಗಳು ...ರಟ ಮೇಲೆ ಅವರ ಕೈಗೆ ಒಂದಿಷ್ಟು ...ಸು ತುರುಕಲಾಗಿದೆಯಾದರೂ ಅದು ...ಲ್ಲಿಗೂ ಸಾಲದು.



ಈಗಾಗಲೇ ರಾಜ್ಯ ಬಿಟ್ಟು ಹೋಗಿರುವ ಅಥ್ಲೆಟಿಕ್ ಪಟು ಜೆ.ಜೆ. ಶೋಭಾ, ಪ್ರಮೀಳಾ ಐಯಪ್ಪ ಮೊನ್ನೆ ಮೊನ್ನೆ ರಚನೆಯಾದ ಜಾರ್ಖಂಡ್ ರಾಜ್ಯವನ್ನು ಪ್ರತಿನಿಧಿಸಿದ್ದರು. ನಾಚಿಕೆಯಾಗಬೇಕು ...ವರ್ಣ ಕರ್ನಾಟಕಕ್ಕೆ.

ಇತ್ತೀಚಿನ ವರ್ಷಗಳಲ್ಲಿ ಸುಮಾರು ಹದಿನೈದಕ್ಕೂ ಹೆಚ್ಚು ಮಂದಿ ಕ್ರೀಡಾಪಟುಗಳು ಹೀಗೆ ಬೇರೆ ರಾಜ್ಯಗಳಿಗೆ ವಲಸೆ ಹೋಗಿದ್ದಾರೆ. ...ವರಲ್ಲಿ ಹೆಚ್ಚಿನವರು ಅಥ್ಲೀಟ್‌ಗಳು. ಮೊದಲೆಲ್ಲಾ ಆಂಧ್ರಕ್ಕೆ ಹೋಗುತ್ತಿದ್ದ ಪಟುಗಳನ್ನು ಈಗ ಜಾರ್ಖಂಡ್ ರಾಜ್ಯ ಆಕರ್ಷಿಸುತ್ತಿದೆ.

ಮನೆಯಲ್ಲಿಯೇ ತರಬೇತಿ

ಭಾರತೀಯ ಕ್ರೀಡಾಪ್ರಾಧಿಕಾರದ ದಕ್ಷಿಣ ಭಾರತದ ಕೇಂದ್ರ ಇರುವುದು ಬೆಂಗಳೂರಿನಲ್ಲಿ. ಹೀಗಾಗಿ ತರಬೇತಿಗೆಂದು ದಕ್ಷಿಣ


"ವಿವಾದಗಳಿಂದ ದೂರವಾಗಲು ನಾನು ನನ್ನ ಸ್ವಂತ ಹಣದಿಂದ ಬೀಜಿಂಗ್‌ಗೆ ಹೋಗುತ್ತಿದ್ದೇನೆ" ಎಂದು ವಿಮಾನವೇರುವ ಮುನ್ನ ಗೂಳಿಹಟ್ಟಿ ಹೇಳಿದ್ದರು. ಕ್ರೀಡೆಯ ಬಗ್ಗೆ ಗೂಳಿಹಟ್ಟಿಗಿರುವ ಆಸಕ್ತಿ ಎಲ್ಲರಲ್ಲೂ ಆಶ್ಚರ್ಯ ಮೂಡಿಸಿತ್ತು. ಆದರೆ ಸತ್ಯ ವಿಷಯವೇ ಬೇರೆ.

ಬೀಜಿಂಗ್‌ನಲ್ಲಿ ಒಲಿಂಪಿಕ್ ಕ್ರೀಡಾ ಗ್ರಾಮ, ಬೃಹತ್ ಕಟ್ಟಡಗಳ ನಿರ್ಮಾಣಕ್ಕೆ ಲಕ್ಷಾಂತರ ಟನ್ ಉಕ್ಕು ಬಳಸಲಾಗಿದೆ. ಈ ಉಕ್ಕು ನಿರ್ಮಾಣವಾಗಿದ್ದು ನಮ್ಮ ಬಳ್ಳಾರಿ-ಸಂಡೂರು-ಹೊಸಪೇಟೆ-ಚಿತ್ರದುರ್ಗದ ಅದಿರಿನಿಂದ. ಇದನ್ನು ಲೂಟಿ ಮಾಡಿ ಮಾರಿ, ದುಡ್ಡು ಮಾಡಿಕೊಂಡವರು ಗೂಳಿಹಟ್ಟಿ ಸೇರಿದಂತೆ ಗಣಿಧಣಿಗಳು. ಒಲಿಂಪಿಕ್‌ಗೆ ಇವರು ನೀಡಿದ 'ಕೊಡುಗೆ'ಯನ್ನು ಮರೆಯುವಷ್ಟು ಚೀನಿಯರು ಕೃತಘ್ನರೇನೂ ಅಲ್ಲ. ಹೀಗಾಗಿ ಈ ಗಣಿಧಣಿಗಳನ್ನೂ ಕ್ರೀಡಾಕೂಟಕ್ಕೆ ಆಹ್ವಾನಿಸಿದ್ದಾರೆ. ಹೀಗೆ ಬಂದ ಆಹ್ವಾನ ಪತ್ರಿಕೆಯೊಂದನ್ನು ಹಿಡಿದುಕೊಂಡು ಗೂಳಿಹಟ್ಟಿ ಬೀಜಿಂಗ್‌ಗೆ ಹೋಗಿದ್ದಾರೆಯೇ ಹೊರತು ಕ್ರೀಡಾಸಕ್ತಿಯಿಂದೇನೂ ಅಲ್ಲ.

ಕ್ರೀಡಾ ಖಾತೆಯ ಅಧಿಕಾರಿಗಳೇ ಈ ರೀತಿಯ ಪ್ರವಾಸದಿಂದ ಏನೂ ಪ್ರಯೋಜನವಿಲ್ಲ ಎಂದು ಹೇಳುತ್ತಿದ್ದರೂ ಸಚಿವರು ಅವರ ಮಾತಿಗೆ ಬೆಲೆ ನೀಡದೆ ಚೀನಾಕ್ಕೆ ಹಾರಿರುವುದನ್ನು ನೋಡಿದರೇ ಈ ವಿಷಯ ಮನದಟ್ಟಾಗುತ್ತದೆ.

ಈ ರೀತಿಯ ನಾಟಕದ ರಾಜಕಾರಣಿಗಳಿಂದ ಕ್ರೀಡೆಗೆ ಪ್ರೋತ್ಸಾಹ ಸಿಕ್ಕೀತೆಂದು ನಿರೀಕ್ಷಿಸುವುದಾದರೂ ಹೇಗೆ?

■ ವರದಿಗಾರ



ಹುಡುಗ: ಓ ಪ್ರಿಯತಮೆ, ನೀನೇ ನನ್ನ ಬೆಳದಿಂಗಳು.

ಹುಡುಗಿ : ಓ ಬೋಳಿ ಮಗನೇ, ನಿನ್ನ ಬೆಳದಿಂಗಳಿಗೆ ಈಗ ಮೂರು ತಿಂಗಳು!

****

ಆಕಸ್ಮಾತ್ ಆಡಂ ಮತ್ತು ಈವ್ ಚೀನಿಯರಾಗಿದ್ದಾರೆ ಏನಾಗುತ್ತಿತ್ತು?

ನಾವೆಲ್ಲ ಈಗಲೂ ಪ್ಯಾರಡೈಸ್‌ನಲ್ಲಿರುತ್ತಿದ್ದೆವು. ಏಕೆಂದರೆ ಅವರು ಸೇಬನ್ನು ನಿರ್ಲಕ್ಷಿಸಿ ಹಾವನ್ನೇ ತಿಂದಿರುತ್ತಿದ್ದರು.

****

ತಿಮ್ಮ : ಬ್ರಾಂದಿ ಕುಡಿದ್ರೆ ಕೆಮ್ಮು ಹೋಗುತ್ತಾ?

ಗುಂಡ : ಯಾಕೆ ಹೋಗಲ್ಲ? ನನ್ನ ಹೊಲ, ತೋಟ, ಮನೆ ಎಲ್ಲಾ ಹೋಗಿದೆ, ನಿನ್ನ ಕೆಮ್ಮು ಏನು ಮಹಾ?

****

ಭಿಕ್ಷುಕರಿಗೆ ಕಾಯಿನ್ ಕೊಟ್ಟರೆ ಸಿಗುತ್ತದೆ ಪುಣ್ಯ,

ಸೊಳ್ಳೆಗೆ ರಕ್ತ ಕೊಟ್ಟರೆ ಬರುತ್ತದೆ ಚಿಕೂನ್ ಗುನ್ಯಾ!

ಸೆನ್ಸಾರ್‌ಗೂ ನಾಲಾಯಕ್



ಇದೇನು ಕತ್ತೆ ಮಾದೇಶ?



ಬ್ಲೂಫಿಲ್ಮ್ ಹೊರತಾಗಿ ಯಾವ ಚಿತ್ರವೂ ಸೆನ್ಸಾರ್ ಬೋರ್ಡ್‌ನಿಂದ ತಿರಸ್ಕಾರಕ್ಕೀಡಾಗುವುದಿಲ್ಲ. ಹಾಗೊಮ್ಮೆ 'A' ಸರ್ಟಿಫಿಕೇಟ್ ಬೇಡವೆಂದರೆ ಮುಂಬಯಿಯ ಟ್ರಿಬ್ಯುನಲ್‌ಗೆ ಮೇಲ್ಮನವಿ ಸಲ್ಲಿಸಬಹುದು. ಆದರೆ 'ಮಾದೇಶ' ಟ್ರಿಬ್ಯೂನಲ್ಲಿಗೂ ಅಪೀಲು ಹೋಗುವಂತಿಲ್ಲ. ಏಕೆಂದರೆ ಸೆನ್ಸಾರ್ ಬೋರ್ಡ್ ಅದಕ್ಕೆ ಯಾವ ಸರ್ಟಿಫಿಕೇಟ್ಟನ್ನೂ ಕೊಟ್ಟಿಲ್ಲ! ಹಾಗಾದರೆ 'ಮಾದೇಶ' ಬ್ಲೂಫಿಲ್ಮ್‌ಗಿಂತಲೂ ಅಸಹ್ಯದ ಚಿತ್ರವೆ? ಏಕೆ ಸೆನ್ಸಾರ್ ಬೋರ್ಡ್ ಅದನ್ನು ತಿರಸ್ಕರಿಸಿದೆ?

■ ರಾ. ಸೋಮನಾಥ್

ರೌಡಿಗಳಿಂದ, ರೌಡಿಗಳಿಗಾಗಿ, ರೌಡಿಗಳೇ ನಿರ್ಮಿಸಿದ ಚಿತ್ರ ಅಂತಿರುತ್ತಾ? ಅಥವಾ ಹುಟ್ಟಾಸ್ಪತ್ರೆಗೆಂದೇ ಯಾರಾದರೂ ಸಿನಿಮಾ ಮಾಡುತ್ತಾರಾ? ಮಾಡಿದರೆ ಏನಾಗುತ್ತೆ?

ಈ ಎಲ್ಲಾ ಪ್ರಶ್ನೆಗಳಿಗೆ ಒಂದೇ ಉತ್ತರ ಅಂತಿದ್ದರೆ ಅದು ಮಾದೇಶ!

ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಶಿವಣ್ಣ ಅಭಿನಯದ 'ಮಾದೇಶ' ವಿಲಕ್ಷಣ ಮತ್ತು ಅಸಹ್ಯದ ದಾಖಲೆಯೊಂದನ್ನು ನಿರ್ಮಿಸಿದೆ. ಮೊದಲನೆಯದಾಗಿ ಸೆನ್ಸಾರ್ ಮಂಡಳಿ ಇದನ್ನು ನೋಡುವುದಕ್ಕೇ ಯೋಗ್ಯವಲ್ಲದ, ಜನ ನೋಡಬಾರದ, ಸಮಾಜಕ್ಕೆ ಹಾನಿಕಾರಕ ಚಿತ್ರವೆಂದು ನಿರ್ಧರಿಸಿದೆ. ಎಂತೆಂಥದೋ ಕೊಳಕು ಸಿನಿಮಾಗಳಿಗೆ ಕನಿಷ್ಠ 'ಎ' ಸರ್ಟಿಫಿಕೇಟನ್ನಾದರೂ ಕೊಡುತ್ತಿತ್ತು. ಆದರೆ ಮಾದೇಶ ಯಾವ ಸರ್ಟಿಫಿಕೆಟ್ಟಿಗೂ ಯೋಗ್ಯವಲ್ಲದ ಚಿತ್ರವೆಂದು ತಿರಸ್ಕರಿಸಿರುವುದು ಬಹುಶಃ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಇದೇ ಓಂ ಪ್ರಥಮ.

ಅಲ್ಲಿಗೆ ಬಿ.ಎಂ. ಗೋವರ್ಧನ್ ಮೂರ್ತಿ ಎಂಬ ನೆಲಹಿಡುಕ ನಿರ್ಮಾಪಕನ ಏಳುಕೋಟಿಯ(!) ರೊಕ್ಕ, ತಲೆತಿರುಕ ಡೈರೆಕ್ಟರ್ ರವಿಶ್ರೀವತ್ಸನ ಲೆಕ್ಕ ಮತ್ತು ಬೆಂಗಳೂರಿನ ಅರ್ಧ ಡಜನ್ ರೌಡಿಗಳೆಲ್ಲ ಸೇರಿಕಟ್ಟಿದ ಹುತ್ತವೊಂದು ಹೊಳೆಯಲ್ಲಿ ಕೊಚ್ಚಿ ಹೋದಂತಾಗಿದೆ.

ಸಾಮಾನ್ಯವಾಗಿ ಸೆನ್ಸಾರ್ ಬೋರ್ಡ್ ಯಾವುದೇ ಚಿತ್ರವನ್ನು ಈತನಕ ತಿರಸ್ಕರಿಸಿಲ್ಲ. ಒಂದೋ 'A' ಸರ್ಟಿಫಿಕೇಟ್ ಕೊಡುತ್ತದೆ. ಅದನ್ನು ವಯಸ್ಕರಷ್ಟೇ ನೋಡಬೇಕು. ಬ್ಲೂಫಿಲ್ಮ್ ಹೊರತಾಗಿ ಯಾವ ಚಿತ್ರವೂ ಸೆನ್ಸಾರ್ ಬೋರ್ಡ್‌ನಿಂದ ತಿರಸ್ಕಾರಕ್ಕೀಡಾಗುವುದಿಲ್ಲ. ಹಾಗೊಮ್ಮೆ 'A' ಸರ್ಟಿಫಿಕೇಟ್ ಬೇಡವೆಂದರೆ ಮುಂಬಯಿಯ ಟ್ರಿಬ್ಯುನಲ್‌ಗೆ ಮೇಲ್ಮನವಿ ಸಲ್ಲಿಸಬಹುದು. ಆದರೆ 'ಮಾದೇಶ' ಟ್ರಿಬ್ಯೂನಲ್ಲಿಗೂ ಅಪೀಲು ಹೋಗುವಂತಿಲ್ಲ. ಏಕೆಂದರೆ ಸೆನ್ಸಾರ್ ಬೋರ್ಡ್ ಅದಕ್ಕೆ ಯಾವ ಸರ್ಟಿಫಿಕೆಟ್ಟನ್ನೂ ಕೊಟ್ಟಿಲ್ಲ!

ಹಾಗಾದರೆ 'ಮಾದೇಶ' ಬ್ಲೂಫಿಲ್ಮ್‌ಗಿಂತಲೂ ಅಸಹ್ಯದ ಚಿತ್ರವೆ? ಏಕೆ ಸೆನ್ಸಾರ್ ಬೋರ್ಡ್ ಅದನ್ನು ತಿರಸ್ಕರಿಸಿದೆ?

ಮುಹೂರ್ತದಲ್ಲಿ ಒಂಟೆ ಗ್ಯಾಂಗ್

ಉತ್ತರಕ್ಕೆ 'ಮಾದೇಶ' ಚಿತ್ರದ ಬಿಡುಗಡೆಯ ತನಕ ಕಾಯುವ ಅಗತ್ಯವೇ ಇಲ್ಲ. 2007 ರ ನವೆಂಬರ್ 11 ರ ಸಂಚಿಕೆಯಲ್ಲಿ 'ಲಂಕೇಶ್' ಮಾದೇಶ ಚಿತ್ರದ ಮುಹೂರ್ತದ ಅಧ್ವಾನದ ಬಗ್ಗೆ ಬರೆದಿತ್ತು. ರೌಡಿ ಬೆಕ್ಕಿನ ಕಣ್ಣು ರಾಜೇಂದ್ರನ ಹಂತಕರಾದ ಇಡೀ ಗ್ಯಾಂಗ್ ಆವತ್ತು ಮುಹೂರ್ತಕ್ಕೆಂದು 'ಮಾದೇಶ' ಸೆಟ್‌ನಲ್ಲಿ ಜಮೆಯಾಗಿತ್ತು. ಹಂತಕ ಒಂಟೆ, ಮಾರ್ಕೆಟ್ ವೇಡಿ, ಪಿಟಿ, ಪೀಸಿ; ಹೀಗೆ ಅರ್ಧ ಡಜನ್ ರೌಡಿಗಳೂ ಅವರ ಅಸಂಖ್ಯಾತ ಶಿಷ್ಯರೆಲ್ಲ ಮಾದೇಶದ ಮುಹೂರ್ತದಲ್ಲಿ ಮಿಂಚುತ್ತಿದ್ದರೆ, ಹೀರೋ ಶಿವಣ್ಣ ಲೆಕ್ಕಕ್ಕೇ ಇಲ್ಲದಂತೆ ಮಂಕುಬಡಿದು ಕುಳಿತಿದ್ದರು.

ಆವತ್ತು ಇಂಥ ರೌಡಿಗಳನ್ನೆಲ್ಲ ಕಲೆಹಾಕಿ ಬರಮಾಡಿಕೊಂಡಿದ್ದು ಡೈರೆಕ್ಟರ್ ಶ್ರೀವತ್ಸ. ಅದು ಈತನ ಟೇಸ್ಟು. ಹುಟ್ಟಿಸಿದ ಅಪ್ಪ ಅಮ್ಮನಿಗಿಂತಲೂ ರೌಡಿಗಳ ಮೇಲೇ ಈತನಿಗೆ ಹೆಚ್ಚು ಭಕ್ತಿ. ಇಂಥಾ ತಲೆತಿರುಕನ ನಾಲ್ಕನೇ ಚಿತ್ರವೇ ಮಾದೇಶ. ಅದರ ಜಾಹೀರಾತು, ಶಿವಣ್ಣನ ಪಾರ್ಟು ಎಲ್ಲವನ್ನೂ ತೂ... ನೋಡಿದರೆ ಅದೊಂದು ಮಚ್ಚು-ಕೊಚ್ಚು ಧಾಟಿಯ...

ಮಾದೇಶ ಮಾಡಿದ್ದೇ ಸೈಲೆಂಟ್ ಸುನೀಲನಿಗಾಗಿ

ರವಿಶ್ರೀವತ್ಸ ಉರ್ಫ್ ಸ್ತ್ರೀವಸ್ತ್ರನ ಪ್ರಕಾರ ಮಾದೇಶದ್ದು ಮುತ್ತಪ್ಪ ರೈ ಕತೆಯಂತೆ. ಹಲವೆಡೆ ಅದನ್ನು ರೌಡಿ ಸೈಲೆಂಟ್ ಸುನೀಲನ ಕತೆ ಅಂತಲೂ ಬುಳಂಗುಬಿಟ್ಟಿದ್ದಾನೆ. ಕೊಲೆಯಾಗದೇ ಬದುಕುಳಿದವನು ಯಾವ ರೌಡಿಯಾದರೇನು? ಕೊಲ್ಲಲು ನಿಂತ ಪ್ರತಿಯೊಬ್ಬರದೂ ಒಂದೇ ಕತೆಯಾಗಿರುತ್ತದೆ.



ಸುನೀಲ

ಹಕೀಕತ್ತೆಂದರೆ ಮುಹೂರ್ತಕ್ಕೆ ಇಡೀ ಸುನೀಲನ ಗ್ಯಾಂಗ್‌ನ ಅಷ್ಟೂ ರೌಡಿಗಳು ಜಮೆಗೊಂಡಿದ್ದು ಮಾತ್ರ ಬೇರೆಯದೇ ಕಾರಣಕ್ಕೇ. ಮೇಲುನೋಟಕ್ಕೆ ಗೋವರ್ಧನಮೂರ್ತಿ ಇದರ ನಿರ್ಮಾಪಕನಾದರೂ ದೊಡ್ಡ ಮೊತ್ತದ ಬಂಡವಾಳ ಹಾಕಿದ್ದು ನಟೋರಿಯಸ್ ಲ್ಯಾಂಡ್ ಗ್ರಾಬರ್ ಬಾಬುರೆಡ್ಡಿ!

ಈ ಹಿಂದೆ 'ಸ್ಟೂಡೆಂಟ್' ಸಿನಿಮಾ ಮಾಡಿ ಕೈಸುಟ್ಟುಕೊಂಡು ಗೋವರ್ಧನಮೂರ್ತಿ ಬಾಣಸವಾಡಿ, ಹೆಣ್ಣೂರು ಭಾಗದ ಕುಖ್ಯಾತ ನೆಲಗಳ್ಳ, ಹುಟ್ಟಾ 'ಹಕ್ಕಿ' ಶೋಕಿಲಾಲ. ಸಿನಿಮಾ ನಟಿಯರೆಂದರೆ ಸಾಕು, ಜೊಲ್ಲು ಸುರಿಸುತ್ತಾನೆ. ಕೇಳಿದಷ್ಟು ರೊಕ್ಕ ಬಿಚ್ಚುತ್ತಾನೆ. ಕನಿಷ್ಠ ವಾರಕ್ಕೊಮ್ಮೆಯಾದರೂ ಸಿಕ್ಕ 'ಹಕ್ಕಿ'ಯನ್ನು ಹಾಕಿಕೊಂಡು ಊಟಿ ಟ್ರಿಪ್ಪಿಗೆ ಹೋಗುತ್ತಾನೆ. ಈತನ ಅಣ್ಣ ಚನ್ನಕೇಶವ ದೊಡ್ಡ ಗುಬ್ಬಿಯಲ್ಲಿ ಲ್ಯಾಂಡ್ ಡೀಲರ್. ಅಣ್ಣನ ಕೀರ್ತಿ ಅಳಿಸಲೆಂದೇ ಹುಟ್ಟಿಕೊಂಡವನಂತೆ ಕಂಡಕಂಡಲ್ಲಿ ಸರ್ಕಾರಿ ಭೂಮಿ ದೋಚುವ ಗೋವರ್ಧನಮೂರ್ತಿ ಪ್ರಾರಂಭದಲ್ಲಿ ಲಲ್ಲೇಶ್ ರೆಡ್ಡಿಯ ಜೊತೆ ಸೇರಿ ಸ್ಟೂಡೆಂಟ್ ತೆಗೆದ.



ಒಂಟೆ



ಮದನ್ ಮಲ್ಲು

ಮದನ್‌ಮಲ್ಲು ಮಹಾತ್ಮೆಯಲ್ಲಿ ಸ್ಟೂಡೆಂಟ್ ತೋಪಾಗಿ ಒಂದೂವರೆ ಕೋಟಿ ಕೈಕಚ್ಚಿತು. ಲಲ್ಲೇಶ್ ರೆಡ್ಡಿಗೂ ಗೋವರ್ಧನಮೂರ್ತಿಗೂ ಕಿತ್ತಾಟ ಬಂತು. ಗೋವರ್ಧನಮೂರ್ತಿ ಲಲ್ಲೇಶ್ ರೆಡ್ಡಿಗೆ ಕೊಡಬೇಕಿದ್ದ ಕೋಟಿಯಷ್ಟು ದುಡ್ಡಿಗೆ ಕೈ ಎತ್ತುವಲ್ಲಿ ನೆರವಿಗೆ ಬಂದವನು ಬಾಬುರೆಡ್ಡಿ. ಈತನೂ ಭೂಕಂಟಕನೆ. ಪಾತಕಿಗಳಾದ ಸೈಲೆಂಟ್ ಸುನೀಲ ಮತ್ತು ಒಂಟೆ ಗ್ಯಾಂಗ್ ಜೈಲಲ್ಲಿದ್ದಷ್ಟೂ ದಿನ ಪ್ರತಿನಿತ್ಯ ಜೈಲಿಗೆ ಬಿರಿಯಾನಿ ಕಳಿಸುತ್ತಿದ್ದದ್ದೇ ಈ ಬಾಬುರೆಡ್ಡಿ. ಬಹುಶಃ ಸೈಲೆಂಟ್ ಸುನೀಲನನ್ನು ಮೆಚ್ಚಿಸುವುದಕ್ಕೆಂದೇ ಆತನ ಮೇಲೊಂದು ಚಿತ್ರ ಮಾಡುವಂತೆ ಬಾಬುರೆಡ್ಡಿ ದುಂಬಾಲು ಬಿದ್ದಿದ್ದಾನೆ. ಅದಕ್ಕೆ ತಕ್ಕಂತೆ ಶ್ರೀವತ್ಸನೂ ಕತೆ ಪೋಣಿಸಿದ್ದಾನೆ.



ಗೋವರ್ಧನ್

ರೌಡಿಗಳಿಗಾಗಿ, ರೌಡಿಗಳೇ ಸಿನಿಮಾ ಮಾಡಲು ನಿಂತರೆ ಕತೆ ಇದಕ್ಕಿಂತ ಭಿನ್ನವಾಗಿರಲು ಸಾಧ್ಯವೇ ಇಲ್ಲ ಮತ್ತು ಇಂಥ ಕೊಲೆಗಡುಕರ ಪೋಷಕ ಕತೆಯನ್ನು ಸೆನ್ಸಾರ್ ಬಿಲ್‌ಕುಲ್ ಒಪ್ಪುವುದಿಲ್ಲ. ಒಂದು ಮೂಲದ ಪ್ರಕಾರ ರವಿಶ್ರೀವತ್ಸ ಕಳ್ಳ ಲೆಕ್ಕ ಕೊಟ್ಟು ಸರಿಸುಮಾರು ಒಂದು ಕೋಟಿಯಷ್ಟನ್ನು ಸದರಿ ನೆಲಗಳ್ಳ ನಿರ್ಮಾಪಕರಿಗೆ ಮುಂಡಾಯಿಸಿದ್ದಾನೆ.

ಹಾಗೊಮ್ಮೆ ಮಾದೇಶ ಖಾಯಂ ಆಗಿ ಡಬ್ಬಾ ಸೇರಿತೆಂದರೆ ಅಷ್ಟೂ ದುಡ್ಡನ್ನು ಬಾಬುರೆಡ್ಡಿಯ ಗ್ಯಾಂಗ್ ವಸೂಲಿ ಮಾಡದೆ ಬಿಡುವುದಿಲ್ಲ. ರವಿಶ್ರೀವತ್ಸನ ಪಾಲಿಗೆ ಒದೆ ತಿನ್ನುವುದು ಕಟ್ಟಿಟ್ಟಬುತ್ತಿ.

ತುವೆಂಬುದು ಎಂಥವರಿಗೂ ತೋಚುಬಿಡುತ್ತದೆ. ತೇ ವಾಟಿಯಲ್ಲಿ ರಾಜ್ಯಾದ್ಯಂತ ಪ್ರಚಾರ ಮಾಡಿ ಗಸ್ಟ್ 15ಕ್ಕೆ ಅದನ್ನು ಬಿಡುಗಡೆ ಮಾಡಬೇಕಿತ್ತು. ಡುವೆಂಬಲ್ಲೇ ಕಳೆದ ಸೋಮವಾರ ಸೆನ್ಸಾರ್ ಬೋರ್ಡಿನಲ್ಲಿ ಇದನ್ನು ನೋಡಿದ ಸದಸ್ಯರಿಗೇ ತಲೆಕೆಟ್ಟು ಹೋಗಿತ್ತು.

ಅದೊಂದು ತರ್ಕವೇ ಇಲ್ಲದ, ವಿಕೃತ, ಚಿತವ ಚಿತ. ಹಿಂದೆ ಇದೇ ಶ್ರೀವತ್ಸ ರ್ದೇಶಿಸಿದ್ದ ಡೆಡ್ಲಿ ಸೋಮದ ಎರಡನೇ ವೃತ್ತಿಯಂತಿದೆ ಮಾದೇಶ. ಹಳ್ಳಿಹೈದನೊಬ್ಬ ಬೆಂಗಳೂರಿಗೆ ಬಂದು ರೌಡಿಯಾಗುವುದು ಇದರ ಸಾರಾಂಶ. ಇದೇ ಧಾಟಿಯಲ್ಲಿ ಈಗಾಗಲೇ ಪ್ರೇಮ್‌ನ 'ಜೋಗಿ' ಮತ್ತು ಸೂರಿಯ 'ದುನಿಯಾ' ಚಿತ್ರಗಳು ಬಂದು ಹಿಟ್ಟಾಗಿವೆ. ಇದೇ ಗುಂಗಿಗೆ ಬಿದ್ದ ಶ್ರೀವತ್ಸ 'ಮಾದೇಶ'ಕ್ಕೆ ಕತೆ ಹೊಸೆದಿದ್ದಾನೆ. 'ಜೋಗಿ' ಮತ್ತು 'ದುನಿಯಾ' ಎರಡೂ ಹಿಂಸಾತ್ಮಕ ಚಿತ್ರಗಳೇ ಆದರೂ ಅಲ್ಲಿ ಹಿಂಸೆಗೊಂದು ತರ್ಕವಿದೆ. ಹೀರೋ ಪರಿಸ್ಥಿತಿಯ ಬಲಿಗೆ ಸಿಕ್ಕು ರೌಡಿ ಎನ್ನಿಸಿಕೊಳ್ಳುತ್ತಾನೆಯೇ ಹೊರತು ರೌಡಿ ಎನ್ನಿಸಿಕೊಳ್ಳಲೆಂದೇ 'ಲಾಂಗ್' ಹಿಡಿಯೋಲ್ಲ.



ತಾಯಿಯೇ ರೌಡಿ

ಆದರೆ 'ಮಾದೇಶ' ಇದರ ಉಲ್ಟಾ. ಕತೆ ಥೇಟು ಜೋಗಿ ಮತ್ತು ದುನಿಯಾದ್ದೇ ಆದರೂ ಹೀರೋನ ಉದ್ದೇಶ ತಾನೊಬ್ಬ ರೌಡಿ ಎನ್ನಿಸಿಕೊಳ್ಳಬೇಕೆಂಬುದು. ರೌಡಿ ಆಗಲಿಕ್ಕೆಂದೇ ಹಳ್ಳಿಯಿಂದ ಬೆಂಗಳೂರಿಗೆ ಬರುತ್ತಾನೆ. ತನ್ನ ತಾಯಿಯ ಬಗ್ಗೆ ಯಾರೋ ಒಬ್ಬ ಕೆಟ್ಟವಾಗಿ ಮಾತನಾಡಿದ ಎಂಬ ಒಂದೇ ಕಾರಣಕ್ಕೆ ಆತನನ್ನು ಕೊಂದುಬಿಡುತ್ತಾನೆ. ಸಾಮಾನ್ಯವಾಗಿ ಯಾವ ತಾಯಿಯೂ ತನ್ನ ಮಗ ಓರ್ವ ರೌಡಿ ಎನ್ನಿಸಿಕೊಳ್ಳಬೇಕೆಂದು ಬಯಸುವುದಿಲ್ಲ. ಆದರೆ ಮಾದೇಶನ ರೌಡಿಜಮ್ಮಿಗೆ ತಾಯಿಯೇ ಕಾರಣ. ಪೊಲೀಸ್ ಅಧಿಕಾರಿಯೊಬ್ಬ ಬಂದು 'ನಿನ್ನ ಮಗನಿಗೆ ಬುದ್ಧಿ ಕಲಿಸು' ಎಂದರೆ ತಾಯಿ 'ನನ್ನ ಮಗ ಈತನಕ ಮೂರು ಮರ್ಡರ್ ಮಾಡಿದ್ದಾನೆ. ಆ ಬಗ್ಗೆ ನನಗೆ ಹೆಮ್ಮೆಯಿದೆ' ಎನ್ನುತ್ತಾಳೆ. ಅವಳೇ

ಕತೆಗೊಂದು ಉದ್ದೇಶವಿಲ್ಲ.

ಮೆಂಟಲ್ ಕ್ಯಾಟಗರಿ?

ಮಾನಸಿಕ ಆರೋಗ್ಯವುಳ್ಳ ಯಾರೇ ಡೈರೆಕ್ಟರ್ ಕನಿಷ್ಠ ಅಂತ್ಯದಲ್ಲಾದರೂ ರೌಡಿಸಂ ತಪ್ಪೆಂಬುದನ್ನು ನಿರೂಪಿಸುತ್ತಾನೆ. ಒಂದೋ ಹೀರೋ ಕೊಲೆಯಾಗುತ್ತಾನೆ ಅಥವಾ ಜೈಲು ಪಾಲಾಗುವ ಕತೆಯಿರುತ್ತದೆ. ಆದರೆ ಮಾದೇಶ ಹಾಗಲ್ಲ. ಬೆಂಗಳೂರಿನಲ್ಲಿ ಹತ್ತಾರು ಹೆಣ ಉರುಳಿಸಿ ಅಂತ್ಯದಲ್ಲಿ ಆಸ್ಟ್ರೇಲಿಯಾಕ್ಕೆ ಪರಾರಿಯಾಗುತ್ತಾನೆ. ಅಲ್ಲಿ ಕೂತು ಪೊಲೀಸರನ್ನು ಗೇಲಿ ಮಾಡುತ್ತಾನೆ. ನೀವೆಲ್ಲ ಷಂಡರು, ನಿಮಗೆ ತಾಕತ್ತಿದ್ದರೆ ನನ್ನನ್ನು ಹಿಡಿಯಿರಿ ಎಂದು ದೇಶಕ್ಕೆ ಸವಾಲು ಹಾಕುತ್ತಾನೆ. ಅಂತ್ಯದಲ್ಲಿ ಮಾದೇಶನೇ ಬೆಂಗಳೂರಿನ ಡಾನ್ ಎಂದು ರವಿಬೆಳಗೆರೆಯ ಪಾತ್ರಧಾರಿ ಪಟ್ಟಕಟ್ಟುತ್ತಾನೆ.


ಇದು 'ಮಾದೇಶ' ಚಿತ್ರದ ಸಂಕ್ಷಿಪ್ತ ಕತೆ. ಯಾವ ತಾಯಿ ತಾನೇ ತನ್ನ ಮಗನೊಬ್ಬ ಕೊಲೆಗಡುಕನಾಗಬೇಕೆಂದು ಬಯಸುತ್ತಾಳೆ? ತನಗೆ ಗಂಡನಾಗುವವನು ಓರ್ವ ರೌಡಿಯಾಗಿರಬೇಕೆಂದು ಯಾವ ಪ್ರೇಯಸಿ ಬಯಸಲು ಸಾಧ್ಯ? ರೌಡಿಯಾಗಲಿಕ್ಕೆಂದು ಯಾರಾದರೂ ಬೆಂಗಳೂರಿಗೆ ಬರುತ್ತಾರಾ? ರೌಡಿಜಮ್ಮೇ ಆದರ್ಶವೆಂದು ತಲೆ ಸರಿಯಿರುವ ಯಾರಾದರೂ ಚಿತ್ರ ನಿರ್ದೇಶಕ ಕತೆ ಕಟ್ಟುತ್ತಾನಾ? ಬಹುಶಃ ಹುಚ್ಚನೊಬ್ಬ ಹುಚ್ಚರಿಗಾಗಿ ಅಥವಾ ರೌಡಿಯೊಬ್ಬ ರೌಡಿಗಳಿಗಾಗಿ ಸಿನಿಮಾ ಮಾಡಿದರೇನೇ ಮಾದೇಶದಂತ ಚಿತ್ರ ಸೃಷ್ಟಿಯಾಗಲು ಸಾಧ್ಯ.

ಇಂಥ 'ಮೆಂಟಲ್' ಕ್ಯಾಟಗರಿಯ ಚಿತ್ರ ತೆಗೆದು ಸೆನ್ಸಾರ್ ಸರ್ಟಿಫಿಕೇಟ್ ಕೊಡಿ ಎಂದರೆ ಸೆನ್ಸಾರ್ ಬೋರ್ಡಿನ ಮಂದಿಗೇನೂ ಹುಚ್ಚು ಹಿಡಿದಿಲ್ಲವಲ್ಲ? ಬೆಂಗಳೂರು ವಲಯದ ಸೆನ್ಸಾರ್ ಅಧಿಕಾರಿ ಚಂದ್ರಶೇಖರ್ ಮೊದಲೇ ಕಟ್ಟುನಿಟ್ಟು. ಚಿತ್ರ ನೋಡಿದ್ದೇ 'ಇದಕ್ಕೆ ಸೆನ್ಸಾರ್ ಸರ್ಟಿಫಿಕೆಟ್ಟೇ ವೇಸ್ಟು' ಎಂದಿದ್ದಾರೆ. ಬಹುಶಃ 'ಎ' ಸರ್ಟಿಫಿಕೇಟ್ ಕೊಟ್ಟಿದ್ದರೆ ಶ್ರೀವತ್ಸ ಅದನ್ನೇ ಕಣ್ಣಿಗೊತ್ತಿಕೊಳ್ಳುತ್ತಿದ್ದ. ಯಾವತ್ತು ಸೆನ್ಸಾರ್ ಮಂಡಳಿ ತಿರಸ್ಕರಿಸಿ ಕಸದಬುಟ್ಟಿಗೆಸೆಯಿತೋ ಅಕ್ಷರಶಃ ಹುಚ್ಚನಾಗಿದ್ದಾನೆ.

ಥೇಂಬರ್ ಆಸಕ್ತಿ ವಹಿಸಬೇಕೆಂದರೆ ಡೈರೆಕ್ಟರ್ ಶ್ರೀವತ್ಸನ ಮುಖ ಕಂಡರೇನೇ ಯಾರಿಗೂ ಆಗೋಲ್ಲ. ಪಕ್ಕಾ ಪೋರ್ಕಿ. ಯಾವತ್ತೂ ರೌಡಿಗಳನ್ನು ಜೊತೆ ಹಾಕಿಕೊಂಡೇ ಸುತ್ತುತ್ತಾನೆ. ಬಾಯಿಬಿಟ್ಟರೆ ಸಂಸ್ಕೃತ ಮಂತ್ರಗಳೆ.

ಪ್ರಾರಂಭದಲ್ಲಿ ಅನ್ನನೀರು ಕೊಟ್ಟು ಬೆಳೆಸಿದ ತಪ್ಪಿಗೆ ನಿರ್ಮಾಪಕ ರಾಮು ಬುಡಕ್ಕೇ ಕೊಳ್ಳಿಯಿಟ್ಟ. ಮುಂದೆ ಡೆಡ್ಲಿ ಸೋಮ ಎಂಬ ಹತರೌಡಿಯನ್ನೇ ಕಾರ್ಗಿಲ್ ವೀರನಂತೆ ಚಿತ್ರಿಸಿ ಸಿನಿಮಾ ಮಾಡಿದ. ಅದು ಬರಕತ್ತಾಗದೇ ಗಂಡಹೆಂಡತಿ ಎಂಬ ಬ್ಲೂಫಿಲ್ಮ್ ತೆಗೆದ. ಇಂಥಾ ಗಬ್ಬು ಚಿತ್ರ ತೆಗೆದಿದ್ದನ್ನು ಟೀಕಿಸಿದ್ದಕ್ಕೆ ಹಿರಿಯ ಪತ್ರಕರ್ತರೊಬ್ಬರ ಮೇಲೆ ಹಲ್ಲೆಗೆ ಯತ್ನಿಸಿದ. ಪತ್ರಕರ್ತರಿಂದ

ಆನಂತರ ನಟ ಶೃತಿಯವರನ್ನು ಅಶ್ಲೀಲವಾಗಿ ಹೀಯಾಳಿಸಿ ಫಿಲ್ಮ್ ಛೇಂಬರ್‌ನಿಂದ ಛೀಮಾರಿಗೀಡಾದ. ಇದು ಆತನ ಟ್ರ್ಯಾಕ್ ರೆಕಾರ್ಡ್. ಶ್ರೀವತ್ಸನಿಗೆ ದೈಹಿಕ ಆರೋಗ್ಯವಷ್ಟೇ ಅಲ್ಲ ಮಾನಸಿಕವಾಗಿಯೂ ಆತ ರೋಗಗ್ರಸ್ತ. ರೌಡಿಗಳನ್ನೂ ಅವರ ಮಾರ್ಗದರ್ಶಕರನ್ನೂ ಓಲೈಸಿಬಿಟ್ಟರೆ ಎಲ್ಲಾ ನಡೆದುಹೋಗುತ್ತದೆ ಎಂಬುದು ಆತನ ನಂಬಿಕೆ. ಇಷ್ಟೆಲ್ಲ ಗಬ್ಬು ಚಿತ್ರಗಳನ್ನು ಕೊಟ್ಟೂ ಈಗ ಮಾದೇಶಕ್ಕೆ ಮೂರು ಕೋಟಿ ಬಂಡವಾಳ ಹುಟ್ಟಿಸಿದ್ದು ಆತನ ರೌಡಿ ಲಿಂಕುಗಳ ಕಾರಣಕ್ಕೇ ಹೊರತು ಪ್ರತಿಭೆಯಿಂದಲ್ಲ. ನಿರ್ಮಾಪಕ ಗೋವರ್ಧನ್ ಮೂರ್ತಿ ಓರ್ವ ನೆಲಗಳ್ಳನೇ ಹೊರತು ವೃತ್ತಿ ನಿರತ ಚಿತ್ರ ನಿರ್ಮಾಪಕನಲ್ಲ. ಎಂಥಾ ಕತೆ ಮಾಡಬೇಕು?



ಲಾಂಗ್ ಎತ್ತಿ ಮಗನಿಗೆ ಕೊಡುತ್ತಾಳೆ. ರೌಡಿಜಮ್ಮಿನ ಹುಚ್ಚಿಗೆ ಬಿದ್ದ ಮಾದೇಶ ತನ್ನ ಗುರುವಿನಂತಿದ್ದ ರೌಡಿಯನ್ನೇ ಕೊಂದು ಹಾಕುತ್ತಾನೆ. ಮುಂದೆ ತಾನೇ ಡಾನ್ ಆಗುತ್ತಾನೆ.

ತಮಾಷೆಯೆಂದರೆ ಹೀರೋನ ಪ್ರೇಯಸಿ ಕೂಡ ಆತನ ತಾಯಿಯ ಹಾಗೇ ರೌಡಿಜಮ್ಮನ್ನು ಬೆಂಬಲಿಸುತ್ತಾಳೆ. 'ನಿನ್ನ ತಾಯಿಯ ಬಗ್ಗೆ ಯಾರೋ ಕೆಟ್ಟದಾಗಿ ಮಾತಾಡಿದ್ದಕ್ಕೇ ಆತನನ್ನು ಕೊಂದೆಯಲ್ಲಾ; ನನ್ನ ಪ್ರೀತಿ ಪ್ರೇಮಕ್ಕೇ ನೀನು ಇಷ್ಟೆಷ್ಟು ಕೊಲೆ ಮಾಡಲ್ಲ? ನನ್ನ ಬಗ್ಗೆ ಯಾರಾದರೂ ಕೆಟ್ಟದಾಗಿ ಮಾತಾಡಿದರೆ ಬಿಡ್ತೀಯಾ? ಎನ್ನುತ್ತಾಳೆ. ತನ್ನ ವಿರೋಧಿಗಳ ತಲೆಗೆ ಸುತ್ತಿಗೆಯಿಂದ ಹೊಡೆದು ಕೊಲ್ಲುವುದು, ಚಾಕುವಿನಿಂದ ಚುಚ್ಚಿ ಕಿಬ್ಬೊಟ್ಟೆಯನ್ನು ಸೀಳುವುದು, ತಲೆಕೆಟ್ಟು ಕೈಗೆ ಸಿಕ್ಕವರನ್ನು ಚುಚ್ಚಿ ಸಾಯಿಸುವುದು ಮಾದೇಶನ ಹವ್ಯಾಸ. ಇಡೀ ಚಿತ್ರದಲ್ಲಿ ಎಲ್ಲೂ ತರ್ಕವಿಲ್ಲ.

ಫಿಲ್ಮ್ ಛೇಂಬರ್ ಅಧ್ಯಕ್ಷೆ ಜಯಮಾಲಾ, ನಿರ್ಮಾಪಕ ಸಾ.ರಾ. ಗೋವಿಂದು ಕಾಲಿಗೆ ಬಿದ್ದು ಗೋಳಾಡಿದ್ದಾನೆ.

ರೌಡಿ ಡೈರೆಕ್ಟರ್

ತೆಗೆದ ಚಿತ್ರವೇ ಹುಚ್ಚರ ಚಿತ್ರವಾಗಿರುವಾಗ ಯಾರು ತಾನೇ ಏನು ಮಾಡಲು ಸಾಧ್ಯ? ಒಂದೋ ಸೆನ್ಸಾರ್ ಬೋರ್ಡ್ ಸೂಚಿಸಿದ ಹಾಗೆ ವಿಕೃತ ಭಾಗಗಳನ್ನು ಕತ್ತರಿಸಬೇಕು. ಕತ್ತರಿಸಿದರೆ ಚಿತ್ರದ ಕತೆಯೇ ಎಕ್ಕುಟ್ಟಿ ಹೋಗುತ್ತದೆ. ಕತೆಯೇ ಬದಲಾಯಿತೆಂದರೆ ಇಡೀ ಚಿತ್ರವನ್ನೇ ರೀಶೂಟ್ ಮಾಡಬೇಕು. ಆತ ಟ್ರಿಬ್ಯೂನಲ್ಲಿಗೂ ಅಪೀಲು ಹೋಗುವಂತಿಲ್ಲ, ಇತ್ತ ಕಟ್ ಮಾಡದೇ ಬೆಂಗಳೂರಿನ ಪರಿಶೀಲನಾ ಸಮಿತಿಗೂ ಅರ್ಜಿ ಹಾಕಿಕೊಳ್ಳುವಂತಿಲ್ಲ. ಮೂರು ಕೋಟಿ ಸಣ್ಣ ಮೊತ್ತವೇನಲ್ಲ, ಕನಿಷ್ಠ ನಿರ್ಮಾಪಕನ ಕಷ್ಟಕ್ಕಾದರೂ

ಬಹಿಷ್ಕಾರಕ್ಕೀಡಾದ. ಆನಂತರ ನಿರ್ಮಾಪಕ ಶೋಭಾ ರಾಜಣ್ಣನಿಗೆ ಅಮರಿಕೊಂಡು 'ರಾಜೀವ್ ಗಾಂಧಿ ಅಲ್ಲಾ' ಎಂಬ ಅಸಂಬದ್ಧ ಹೆಸರಿನ ಚಿತ್ರ ಮಾಡಿದ. ಚಿತ್ರದ ಹೆಸರೇ ಹಾಗಿದ್ದ ಮೇಲೆ ಅದನ್ನು ನೋಡುವವರ್ಯಾರು? ಒಂದೇ ವಾರಕ್ಕೆ ಥೇಟರುಗಳಿಂದ ಎತ್ತಂಗಡಿಯಾದ 'ರಾಜೀವ್ ಗಾಂಧಿ ಅಲ್ಲಾ'ದ ನಿರ್ಮಾಪಕ ಶೋಭಾ ರಾಜಣ್ಣ ಆದ ನಷ್ಟಕ್ಕೆ ಆತ್ಮಹತ್ಯೆಗೆ ಯತ್ನಿಸಬೇಕಾಯಿತು.

ಪಾಠವಾಗಲಿ

ಇನ್ನೂ ವಿಚಿತ್ರವೆಂದರೆ, ಡೆಡ್ಲಿಸೋಮ, ಗಂಡಹೆಂಡತಿ ಮತ್ತು ರಾಜೀವ್... ಅಲ್ಲ ಈ ಮೂರು ಚಿತ್ರಗಳೂ ಸೆನ್ಸಾರ್ ತಾಪತ್ರಯಕ್ಕೀಡಾದವುಗಳೇ. 'ರಾಜೀವ್... ತಿರಿಕ್ಕಿನಲ್ಲಿ ಸೆನ್ಸಾರ್ ಅಧಿಕಾರಿ ಚಂದ್ರಶೇಖರರನ್ನು ಛೇಂಬರಿನಲ್ಲೇ ಶ್ರೀವತ್ಸ ಹೊಡೆಯಲು ಹೋಗಿದ್ದ.

ಯಾವುದನ್ನು ಸೆನ್ಸಾರ್ ಒಪ್ಪಲ್ಲ? ಸಮಾಜಕ್ಕೆ ಯಾವುದು ಹಿತ? ಇತ್ಯಾದಿ ಯಾವುದೂ ಗೋವರಧನ್ ಮೂರ್ತಿಗೆ ಗೊತ್ತಿಲ್ಲ.

ಮಾಡಬಾರದ್ದನ್ನು ಮಾಡಹೊರಟರೆ ಏನಾಗುತ್ತೋ ಅದೇ ಗತಿ 'ಮಾದೇಶ'ಕ್ಕಾಗಿದೆ. ಎಷ್ಟೆಂದರೂ ರೌಡಿ ಸಮಾಜ ಕಂಟಕನೇ ಹೊರತು ಆದರ್ಶನಲ್ಲ. ಕೊಲೆಗಡುಕರು, ಘಾತಕಿಗಳೇ ಆದರ್ಶಪುರುಷರಾದರೆ, ಅದನ್ನೇ ಚಿತ್ರವೊಂದು ಬೋಧಿಸಹೊರಟರೆ ಅದಕ್ಕೆ ಎಂಥಾ ಗತಿ ಕಾದಿದೆಯೆಂಬುದಕ್ಕೆ 'ಮಾದೇಶ' ಮತ್ತು ಅದರ ಪೋರ್ಕಿ ಡೈರೆಕ್ಟರ್ ಶ್ರೀವತ್ಸ ಉತ್ತಮ ಉದಾಹರಣೆಯಾಗುತ್ತಾರೆ. ಆಗಲೇಬೇಕು.

ನಟ ಶಿವಣ್ಣ ಇನ್ನು ಮುಂದಾದರೂ ಪಾಠ ಕಲಿಯಬೇಕು. ■

ಖದೀಮರ ಕಳ್ಳ ಲೆಕ್ಕ



ನಿಜಕ್ಕೂ ಮಾದೇಶ ಏಳುಕೋಟಿ ಬಜೆಟ್ಟಿನ ಚಿತ್ರವೆ?

ಮೊದಲೇ ಮಾರುಕಟ್ಟೆಯಿಲ್ಲ. ಶಿವಣ್ಣನನ್ನು ಬಿಟ್ಟರೆ 'ಸ್ಟಾರ್' ಅಂತ ಬೇರೆ ಯಾರೂ ಇಲ್ಲ, ಮುಂಬಯಿ ಹೀರೋಯಿನ್ ಸೋನು ವಾಟಿಯಾ ಯಾರೆಂಬುದೇ ಗೊತ್ತಿಲ್ಲ. ಗೊತ್ತಿರುವ ಅಗತ್ಯವೂ ಇಲ್ಲ. ಮಿಕ್ಕಂತೆ ಮರಾಠಿಯ ರವಿಕಾಳೆ, ಹರೀಶ್ ರಾಯ್, ಕೋಟೆ ಪ್ರಭಾಕರ, ಶ್ರೀನಗರದ ನರಸಿಂಹ ರಘುರಾಮ್ ಯಾರೂ ಖ್ಯಾತನಾಮರಲ್ಲ.

ಮಾದೇಶ ಶಿವಣ್ಣನ 'ಒನ್‌ಮ್ಯಾನ್ ಷೋ' ಚಿತ್ರ. ಶಿವಣ್ಣನ ಕಾಲ್‌ಶೀಟ್‌ಗೆಂದು ಹೆಚ್ಚೆಂದರೆ 75 ಲಕ್ಷ ಕೊಟ್ಟಿರಬಹುದು. ಸೋನುವಾಟಿಯಾಗೆ ಐದು ಲಕ್ಷ ಕೊಟ್ಟರೆ ಅದೇ ಹೆಚ್ಚು. ರವಿಕಾಳೆಗೆ ಒಂದೋ ಎರಡೋ ಲಕ್ಷ ಕೊಟ್ಟು ಮಿಕ್ಕವರ್ಯಾರಿಗೂ ಸಂಭಾವನೆ ಅಂತ ಪುಡಿಗಾಸನ್ನೂ ಬಿಚ್ಚಿರಲಿಕ್ಕಿಲ್ಲ. ಮನೋಮೂರ್ತಿಯ ಸಂಗೀತಕ್ಕೆ, ಥ್ರಿಲ್ಲರ್ ಮಂಜು ಸ್ಟಂಟ್‌ಗೆ, ಆಸ್ಟ್ರೇಲಿಯಾ ಟ್ರಿಪ್ಪಿಗೆ ಮತ್ತು ಪ್ರಚಾರಕ್ಕೆಂದು ಲೆಕ್ಕ ಹಾಕಿದರೆ ಅದು ಮೂರು ಕೋಟಿಯನ್ನು ಮೀರಲ್ಲ.



ಆದರೆ ರವಿಶ್ರೀವತ್ಸ ಏಳು ಕೋಟಿಯ ಬಜೆಟ್ಟೆಂದು ರೈಲು ಬಿಡುತ್ತಾನೆ. ಇದ್ದುದರಲ್ಲಿ ನಂಬುವಂತೆ ಬಂಡಲ್ ಬಿಡುವವನು ಗೋವರ್ಧನ್ ಮೂರ್ತಿ. ಆತ ಐದು ಕೋಟಿ ಎನ್ನುತ್ತಾನೆ. ಕನ್ನಡದ ಮಾರುಕಟ್ಟೆಗೆ ಅದೂ ರವಿಶ್ರೀವತ್ಸನಂಥ ಪೋರ್ಕಿಯನ್ನು ನಂಬಿ ಮೂರ್ಖರಷ್ಟೆ ಏಳುಕೋಟಿ ಸುರಿಯಲು ಸಾಧ್ಯ.


ಹಂಪಿಯಲ್ಲಿ ನಿಜವಾಗಲೂ ನಡೆದದ್ದೇನು?

ತರುಪಿ ಎಂದಾಕ್ಷಣ ಕೆಲವರು ಮೈಮೇಲೆ ದೆವ್ವ ಬಂದವರಂತೆ ಆಡುತ್ತಾರೆ. ಈ ಭೂತಗಳಿಗೆ ದಿನಪತ್ರಿಕೆಗಳು ದೊಡ್ಡ ಪ್ರಚಾರ ಕೊಟ್ಟು 'ಇಲ್ಲದವರ'ನ್ನು ಹೀರೋಗಳನ್ನಾಗಿ ಮಾಡಿ ಬಿಡುತ್ತಿವೆ.

ಕೋಮುವಾದಿ ಹಿಂದುತ್ವದ ಕೇಂದ್ರಸ್ಥಾನದವಾದ ಕೇಶವಶಿಲ್ಪದ ದ್ವಾರಪಾಲಕರಂತಿರುವ ಸೂರ್ಯನಾಥ ಕಾಮತ್ ಮತ್ತು ಚಿದಾನಂದಮೂರ್ತಿ ಎಂಬ ಇತಿಹಾಸತಜ್ಞರಂತೂ ಅವಕಾಶ ಸಿಕ್ಕಾಗಲೆಲ್ಲ ತಮ್ಮ ಮನಸ್ಸಿನಲ್ಲಿರುವ ಕೊಳಕು ವಿಷವನ್ನು ಮಾಧ್ಯಮಗಳ ಮುಂದೆ ಕಾರಿದ್ದೇ ಕಾರಿದ್ದು. ಅವರು ಕಾರಿದ್ದನ್ನೇ ಪರಮ ಪ್ರಸಾದವೆಂಬಂತೆ ದಿನ ಪತ್ರಿಕೆಗಳು, ವಿದ್ಯುನ್ಮಾನ ಮಾಧ್ಯಮಗಳು ವರದಿ ಮಾಡಿದ್ದೇ ಮಾಡಿದ್ದು.

'ಹಂಪಿಯಲ್ಲಿ ವಿಗ್ರಹ ಭಗ್ನ!' ಎನ್ನುವ ಇತ್ತೀಚಿನ ವರದಿಯನ್ನೇ ತೆಗೆದುಕೊಂಡರೆ 'ಎಲ್ಲಾ ಸುಳ್ಳು, ರಾಮ ಸುಳ್ಳು, ರಾಮಾ ಸುಳ್ಳು, ರಾಮಾಯಣವಂತೂ ಮೊದಲೇ ಸುಳ್ಳು' ಎನ್ನುವ ಪರೀಘ್'ರ ಹಾಡು ನೆನಪಾಗುತ್ತದೆ. ಆದರೆ ಈ ಸುಳ್ಳುಗಳನ್ನೇ ಸತ್ಯ ಎಂದು ಪ್ರತಿಪಾದಿಸುವುದಕ್ಕೆ ಸಂಘ ಪರಿವಾರ, ಚೆಡ್ಡಿ ಸರ್ಕಾರ ಹಾಗೂ ಮಾಧ್ಯಮಗಳಲ್ಲಿರುವ ಮಂಗಗಳು ಟೊಂಕ ಕಟ್ಟಿ ನಿಂತಿವೆ.

ಮೊದಲು ವಿಗ್ರಹ ಎನ್ನುವ ಪದವನ್ನೇ ಗಮನಿಸೋಣ. ಹಂಪಿಯಲ್ಲಿರುವ ಎಲ್ಲಾ ಮಂಟಪಗಳು, ದೇವಸ್ಥಾನಗಳು ಹಾಗೂ ಎಲ್ಲೆಡೆ ಬಿದ್ದಿರುವ ಕಲ್ಲು ಕಲ್ಲುಗಳಲ್ಲೂ ಉಬ್ಬು ಶಿಲ್ಪಗಳಿವೆ. ಈ ಎಲ್ಲಾ ಉಬ್ಬುಶಿಲ್ಪಗಳು ಕಾಲರಾಯನ ಹೊಡೆತಕ್ಕೆ ಸಿಕ್ಕು, ಪ್ರವಾಸಿಗರ ಮೋಜಿಗೆ ಸಿಕ್ಕು ಸಾಕಷ್ಟು ಸಂಖ್ಯೆಯಲ್ಲಿ ವಿರೂಪಗೊಂಡಿವೆ. ಇತಿಹಾಸದ ಬಗ್ಗೆ ಜನರಿಗಿರುವ ಅವಜ್ಞತೆಯಿಂದಲೂ, ಪುರಾತತ್ವದ ಮಹತ್ವ ಗೊತ್ತಿಲ್ಲದಿರುವುದರಿಂದಲೂ ಇವೆಲ್ಲಾ ನಡೆಯುತ್ತಿವೆ.


ನವಿಲುಗಳು ಉಬ್ಬು ಶಿಲ್ಪಗಳು ಸತತ ವಿರೂಪಗೊಂಡಿವೆ. ಇದ್ಯಾವ ಸೀಮೆಯ [illegible] ಮುಖವಾಡ [illegible]!

ಆದರೆ ಎಲ್ಲೆಡೆ ಬಿದ್ದಿರುವ ಇಂತಹ ವಿರೂಪಗೊಂಡಿರುವ ಉಬ್ಬು ಶಿಲ್ಪಗಳನ್ನು ಕಂಡೊಡನೇ "ಇದನ್ನು ಅನ್ಯಧರ್ಮಿಯರೇ ಮಾಡಿದ್ದಾರೆ, ಇದರ ಹಿಂದೆ ವ್ಯವಸ್ಥಿತ ಪಿತೂರಿ ಇದೆ, ಹಂಪಿಯಲ್ಲಿ ಇಸ್ಲಾಮೀಕರಣ ನಡೆಯುತ್ತಿದೆ, ಅದನ್ನು ನಿಲ್ಲಿಸಬೇಕು" ಎಂದು 'ಹಂಪಿ ಉಳಿಸಿ ಆಂದೋಲನ ಸಮಿತಿ' ಎಂಬ ಸಂಘ ಪರಿವಾರದ ಇನ್ನೊಂದು ಮುಖವಾಡ ಬೊಬ್ಬೆ ಹಾಕುತ್ತದೆ. ಇವರ ಬೊಬ್ಬೆಗೆ ಮಾಧ್ಯಮದವರು ಮುಗಿಬಿದ್ದು 'ಸೆನ್ಸೆಷಿಯೇಷನಲ್ ನ್ಯೂಸ್' ಎಂದು ರಾಜ್ಯಮಟ್ಟದಲ್ಲಿ ಪ್ರಕಟಿಸಿ ಧನ್ಯರಾಗುತ್ತಾರೆ.

ವಿಗ್ರಹ ಯಾವುದು? ಉಬ್ಬು ಶಿಲ್ಪ ಯಾವುದು? ಎಂಬ ಸಾಮಾನ್ಯ ಜ್ಞಾನವೂ ಇವರಿಗೆ ಇಲ್ಲದಂತಾಗಿದೆ. ಘಟನೆಯ ಹಿಂದಿನ ಸತ್ಯಗಳನ್ನಾಗಲಿ, ಅದು ನಡೆದ ಸ್ಥಳವನ್ನಾಗಲಿ ಅವರು ಪರೀಕ್ಷಿಸುವುದೇ ಇಲ್ಲ, ಇನ್ನೂ ಸ್ಥಳೀಯರ ಅಭಿಪ್ರಾಯವನ್ನು ಕೇಳುವುದಂತೂ ದೂರದ ಮಾತು. ಸಂಘ ಪರಿವಾರದ ಜನರನ್ನೇ ತಮ್ಮ ಸುದ್ದಿಗೆ ಆಶ್ರಯಿಸುತ್ತಾರೆ. ಎಷ್ಟೋ ಬಾರಿ ಅವರು ತೆಗೆದಿರುವ ಫೋಟೋಗಳನ್ನೇ ಯಾವ ಅಳುಕು ಇಲ್ಲದೇ ಬಳಸಿಕೊಳ್ಳುತ್ತಾರೆ. ಇದಕ್ಕೆ ಸರಿಯಾಗಿ ಚಿದಾನಂದಮೂರ್ತಿಗಳು ಬೆಂಗಳೂರಲ್ಲಿ ಪತ್ರಿಕಾಗೋಷ್ಠಿ ನಡೆಸಿ ಅಥವಾ ಪತ್ರಿಕೆಗಳಿಗೆ ಪತ್ರ ಬರೆದು ಮತ್ತೆ ಮುಸಲ್ಮಾನರ ವಿರುದ್ಧ ಕೆಂಡಕಾರುತ್ತಾರೆ.


ಹಂಪಿ ಗೆಜ್ಜಲು ಮಂಟಪದಲ್ಲಿ ಉಬ್ಬು ಶಿಲ್ಪಗಳು ವಿರೂಪಗೊಳಿಸಿರುವುದನ್ನು ಪರಿಶೀಲಿಸುತ್ತಿರುವ ಅಧಿಕಾರಿ ವರ್ಗ.

'ಹಂಪಿಯಲ್ಲಿ ವಿಗ್ರಹ ಭಗ್ನ!' ಎನ್ನುವ ಇತ್ತೀಚಿನ ವರದಿಯನ್ನೇ ತೆಗೆದುಕೊಂಡರೆ 'ಎಲ್ಲಾ ಸುಳ್ಳು, ರಾಮ ಸುಳ್ಳು, ರಾಮಾ ಸುಳ್ಳು, ರಾಮಾಯಣವಂತೂ ಮೊದಲೇ ಸುಳ್ಳು' ಎನುವ ಪರೀಘ್'ರ ಹಾಡು ನೆನಪಾಗುತ್ತದೆ. ಆದರೆ ಈ ಸುಳ್ಳುಗಳನ್ನೇ ಸತ್ಯ ಎಂದು ಪ್ರತಿಪಾದಿಸುವುದಕ್ಕೆ ಸಂಘ ಪರಿವಾರ, ಚೆಡ್ಡಿ ಸರ್ಕಾರ ಹಾಗೂ ಮಾಧ್ಯಮಗಳಲ್ಲಿರುವ ಮಂಗಗಳು ಟೊಂಕ ಕಟ್ಟಿ ನಿಂತಿವೆ.

ಇದೊಂದು ನಿರಂತರ ಕಾರ್ಯಕ್ರಮದಂತಾಗಿ ಹೋಗಿದೆ.

ಇತ್ತೀಚಿನ ತಾಜಾ ಉದಾಹರಣೆ ಹೀಗಿದೆ: ಇಲ್ಲಿನ ಸರಸ್ವತಿ ದೇವಾಲಯ (ಈ ದೇವಾಲಯ ಭಗ್ನಗೊಂಡಿದ್ದು ಅನಾಥವಾಗಿದೆ, ಹೆಸರಿಗೆ ಮಾತ್ರ ಅದು ದೇವಾಲಯವಾಗಿದೆ) ದಲ್ಲಿ ವಿಗ್ರಹ ಭಗ್ನ ಮಾಡುತ್ತಿರುವಾಗಲೇ ಅಹ್ಮದ್ (26) ಎಂಬ ಮುಸಲ್ಮಾನ ಯುವಕನನ್ನು 'ಹಂಪಿ ಉಳಿಸಿ ಆಂದೋಲನ ಸಮಿತಿ'ಯ ಕಾರ್ಯಕರ್ತರು ರೆಡ್‌ಹ್ಯಾಂಡ್ ಆಗಿ ಹಿಡಿದಿದ್ದಾರೆ. ಅದನ್ನು ಎಲ್ಲಾ ಪತ್ರಿಕೆಗಳು ಯಥಾವತ್ತಾಗಿ ವರದಿ ಮಾಡಿವೆ.

ಆದರೆ ಈ ಅಹ್ಮದ್ ಯಾರು? ಅವನು ವಿಗ್ರಹ ಭಗ್ನ ಮಾಡುವ ಸಮಯಕ್ಕೆ ಈ ಸಂಘ ಪರಿವಾರದವರು ಹೋಗಿದ್ದಾದರೂ ಹೇಗೆ? ಅದರ ಬಗ್ಗೆ ಮಾಹಿತಿ ಕೊಟ್ಟವರು ಯಾರು? ಇತ್ಯಾದಿ ಕನಿಷ್ಠ ಪ್ರಶ್ನೆಗಳನ್ನು ಅವರ್‍ಯಾರು ಕೇಳಿಕೊಂಡಿಲ್ಲ. ಅದು ಅವರ ಪತ್ರಿಕೋದ್ಯಮಕ್ಕೆ ಹಿಡಿದ ಕನ್ನಡಿ, ಬಿಡಿ.

ವಾಸ್ತವವಾಗಿ ನಡೆದಿದ್ದು ಇಷ್ಟು: ಕಮಲಾಪುರದವನಾದ ಅಹ್ಮದ್ ಮಾನಸಿಕ ಅಸ್ವಸ್ಥನೂ ಹೌದು. ಸರಸ್ವತಿ ಮಂದಿರ ಬಳಿಯೇ ಈತನ ಹೊಲವಿದೆ. ಈತ ಹೆಚ್ಚು ವಾಸಿಸುವುದೂ ಇಲ್ಲಿಯೇ. ಕುರಿ ಮೇಯಿಸುವವರ, ದನ ಕಾಯುವವರ ಬುತ್ತಿಯಿಂದ ಒಂದಿಷ್ಟು ಆಹಾರ ಪಡೆದು ಇಲ್ಲಿಯೇ ಇರುತ್ತಾನೆ.

ಚರಂತಿಮಠನಿಗೆ ತಿರುಗುಬಾಣ!


ವೀರಣ್ಣ ಚರಂತಿಮಠನ ದೆಸೆಯಿಂದ ಬಾಗಲಕೋಟೆ ಬಿಜೆಪಿ ಒಡೆದ ಮನೆಯಂತಾಗಿದೆ ಎಂಬುದಕ್ಕೆ ಮತ್ತೊಂದು ನಿದರ್ಶನ ಮೊನ್ನೆ ನಡೆದುಹೋಯಿತು. ಜಿಲ್ಲಾ ಬಿಜೆಪಿ ವತಿಯಿಂದ ಒಂದು ಸನ್ಮಾನ ಸಮಾರಂಭ ಏರ್ಪಾಡಾಗಿತ್ತು. ಅದೂ ಚರಂತಿಮಠನ ಸಂಸ್ಥೆಯಲ್ಲಿ. ಮೊದಲೇ ಇವನನ್ನು ಕಂಡರೆ ಉಳಿದ ಲೀಡರ್‌ಗಳಿಗೆ ಆಗುವುದಿಲ್ಲ, ಅಂತಹದ್ದರಲ್ಲಿ ಅವನದೇ ಸಂಸ್ಥೆಯಲ್ಲಿ ಸಮಾರಂಭ ಏರ್ಪಡಿಸಿದರೆ ಏನಾಗಬೇಕು?


ಮುರುಗೇಶ್ ನಿರಾಣಿ

ಮುರುಗೇಶ ನಿರಾಣಿ ಬರುವುದನ್ನು ತಡೆಯುವುದಕ್ಕೇ ಈತ ತನ್ನ ಸಂಸ್ಥೆಯಲ್ಲಿ ಕಾರ್ಯಕ್ರಮ ಆಯೋಜಿಸಿದ್ದು ಎಂಬುದು ಎಲ್ಲರಿಗೂ ಗೊತ್ತಿರುವ ಸೀಕ್ರೆಟ್. ಆದರೆ ಅದೇ ಅವನಿಗೆ ತಿರುಗುಬಾಣವಾಗಿಬಿಟ್ಟಿತು. ಅಂದು ಮುರುಗೇಶ್ ನಿರಾಣಿ ಸಮಾರಂಭಕ್ಕೆ ಬಂದೇ ಬಿಟ್ಟ; ಸನ್ಮಾನವನ್ನೂ ಮಾಡಿಸಿಕೊಂಡು ಬಿಟ್ಟ!

ಅದಕ್ಕಿಂತ ತಮಾಷೆಯ ಸಂಗತಿ ಯಾವುದೆಂದರೆ ಸ್ಥಳೀಯ ಶಾಸಕನಾದ ಚರಂತಿಮಠನೇ ತನ್ನ ಸಂಸ್ಥೆಯಲ್ಲಿ ತಾನೇ ಏರ್ಪಡಿಸಿದ್ದ ಕಾರ್ಯಕ್ರಮದಿಂದ ತಲೆತಪ್ಪಿಸಿಕೊಂಡು ತಿರುಗಾಡಿದ್ದು! ತಾನೇ ಆ ಸಭೆಗೆ ಬಾರದಿದ್ದದ್ದು!!

ಬಾಗಲಕೋಟೆ: ಚರಂತಿಮಠನ ಜಂಗೀಕುಸ್ತಿ!



ಚರಂತಿಮಠ

ಬಾಗಲಕೋಟೆಯಲ್ಲಿ ಬಿಜೆಪಿಯ ಚಡ್ಡಿ ಶಾಸಕ ವೀರಣ್ಣಾ ಚರಂತಿಮಠ್ ಮತ್ತು ಆತನ ಪಕ್ಷದ ಇನ್ನಿತರ ಘಟಾನುಘಟಿಗಳ ನಡುವೆ ಜಂಗೀಕುಸ್ತಿ ಶುರುವಾಗಿದೆ. ಚರಂತಿಮಠನನ್ನು ಗೆಲ್ಲಿಸಿದ್ದಕ್ಕೆ ಕ್ಷೇತ್ರದ ಜನರಿಗೆ ಏನೂ ಸಿಗಲಿಲ್ಲವಾದರೂ ಕೊನೆಗೆ ಈ ಜಂಗೀಕುಸ್ತಿ ನೋಡುತ್ತಾ ಮಜಾ ತೆಗೆದುಕೊಳ್ಳುವ ಭಾಗ್ಯವಂತೂ ಸಿಕ್ಕಂತಾಗಿದೆ.

ಅಸಲಿಗೆ ಚರಂತಿಮಠನಲ್ಲಿ ಬಾಗಲಕೋಟೆಯ ಜನ ಅದೇನು ಕಂಡರೋ ಗೊತ್ತಿಲ್ಲ. ಪ್ರಾಯಶಃ ಈತ ಲಿಂಗಾಯತ ಜಂಗಮ ಅನ್ನೋ ಕಾರಣಕ್ಕೆ ಅವನನ್ನು ಮತ್ತೊಮ್ಮೆ ಗೆಲ್ಲಿಸಿದ್ದಾರೆ. ಕಳೆದ ಬಾರಿ ಈತನನ್ನು ಆರಿಸಿ ಕಳುಹಿಸಿದ ತಪ್ಪಿಗೆ ಜನ ಪಡಬಾರದ ಕಷ್ಟ ಪಟ್ಟಿದ್ದರು. ಈಗ ಮತ್ತೊಮ್ಮೆ ಅವನನ್ನು ಗೆಲ್ಲಿಸುವ ಮೂಲಕ ತಮ್ಮ ಗುಂಡಿಯನ್ನು ತಾವೇ ತೋಡಿಕೊಂಡಿದ್ದಾರೆ. ಯಾಕೆಂದರೆ ಇದುವರೆಗೆ ಚರಂತಿಮಠನ ದರ್ಬಾರ್ ಮಾತ್ರ ನಡೀತಿತ್ತು, ಈಗ ಅದರ ಜೊತೆಗೆ ಅವನ ತಮ್ಮ ಮಲ್ಲನ ಕಾರ್‌ಬಾರ್ ಕೂಡ ಸೇರಿಕೊಂಡಿದೆ. ಬಾಗಲಕೋಟೆ ಬರ್ಬಾದ್ ಆಗೋದಕ್ಕೆ ಇನ್ನೇನು ಬೇಕು ಹೇಳಿ?

ಈ ಅಣ್ಣ-ತಮ್ಮರ ನಾಲಿಗೆಗೆ ಫಿಲ್ಟರ್ ಇಲ್ಲ. ಅದೆಷ್ಟು ಬೈಗುಳಗಳ ಕಲೆಕ್ಷನ್ ಇಟ್ಟುಕೊಂಡಿದ್ದಾರೋ ಏನೋ, ಬಾಯಿ ತೆರೆದರೆ ಸಾಕು ಒಂದಾದ ಮೇಲೊಂದರಂತೆ ಉದುರಿಸುತ್ತಾ ಹೋಗುತ್ತಾರೆ. ಪ್ರಾಯಶಃ ಈ ಕೆಟ್ಟ ಬೈಗುಳಗಳನ್ನೇ ಬಸವಣ್ಣನ ವಚನ ಎಂದು ತಿಳಿದುಕೊಂಡಿರುವಂತೆ ಕಾಣುತ್ತೆ ಈ ಇಬ್ಬರು ಲಿಂಗಾಯತ ಜಂಗಮರು! ಇವರ ಕೈಗೆ ಸಿಕ್ಕಿರುವ ಸರ್ಕಾರಿ ಅಧಿಕಾರಿಗಳ ಪಾಡಂತೂ ಹೇಳುವ ಹಾಗಿಲ್ಲ.

ಈ ಬಾರಿ ಸಚಿವ ಸಂಪುಟ ರಚನೆಯಾದಾಗ ಬಾಗಲಕೋಟೆಯಿಂದ ನಾಲ್ವರು ಮಂತ್ರಿಗಳಾಗಿದ್ದನ್ನು ಕಂಡು ಇಲ್ಲಿನ ಜನ ಸಹಜವಾಗಿಯೇ ಸಂತೋಷಪಟ್ಟಿದ್ದರು, ಜಿಲ್ಲೆ ಅಭಿವೃದ್ಧಿಯಾಗುತ್ತೆ ಎಂದು ಭಾವಿಸಿದ್ದರು. ಆದರೆ ಈಗ ನೋಡಿದರೆ ಅವರೆಲ್ಲ ಜಿಲ್ಲೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಪೈಪೋಟಿ ನಡೆಸುವ ಬದಲು ಕಮೀಷನ್ ಮೇಯುವ ವಿಚಾರದಲ್ಲಿ ಬಹಿರಂಗವಾಗಿ ಕಚ್ಚಾಡುತ್ತಿದ್ದಾರೆ!


ಪೂಜಾರ್

ಚರಂತಿಮಠ ತನಗೆ ಮಂತ್ರಿಪದವಿ ಸಿಕ್ಕಿರುವುದೇ ಕಾಸು ಮಾಡೋದಕ್ಕೆ ಎಂಬಂತೆ ಕಮೀಷನ್ ಮೇಯುವುದರಲ್ಲಿ ಬ್ಯೂಸಿಯಾಗಿಬಿಟ್ಟಿದ್ದಾನೆ. ಅರಣ್ಯ ಪ್ರದೇಶದ ಭೂಮಿಯನ್ನೆಲ್ಲಾ ಒತ್ತುವರಿ ಮಾಡಿಕೊಂಡು ಜೋರಾಗಿ ಗ್ರಾನೈಟ್ ದಂಧೆಯನ್ನು ನಡೆಸುತ್ತಾ ಭರ್ಜರಿಯಾಗಿ ದುಡ್ಡು ಮಾಡುತ್ತಿದ್ದಾನೆ. ಅವನ ಲೂಟಿ ಎಷ್ಟರಮಟ್ಟಿಗೆ ಸಾಗಿದೆಯೆಂದರೆ, ಬೇರೆ ಪಕ್ಷದವರನ್ನು ಬಿಡಿ, ಆತ ಬಿಜೆಪಿ ಪಕ್ಷದ ಲೀಡರ್‌ಗಳ, ಮಂತ್ರಿಗಳ ಕಣ್ಣೂ ಕುಕ್ಕಿಸುವಂತಿದೆ. ಈಗ ಒಳಗೊಳಗೇ ಅವರೆಲ್ಲಾ ಒಟ್ಟಾಗಿ ಚರಂತಿಮಠನಿಗೆ ಒಂದು ಗತಿಕಾಣಿಸಲು ನಿರ್ಧರಿಬಿಟ್ಟಿದ್ದಾರೆ.

ಉದಾಹರಣೆಗೆ, ಟಿ.ಎಂ.ಹುಂಡೇಕಾರ್ ಎಂಬ ಇಳಿ ವಯಸ್ಸಿನ ಮುದುಕನನ್ನೇ ತೆಗೆದುಕೊಳ್ಳಿ. ಈತ ಚರಂತಿಮಠನನ್ನು ಜೈಲಿಗೆ ಕಳಿಸುವವರೆಗೆ ಬಿಡುವುದಿಲ್ಲ ಎಂದು ಹಠಕ್ಕೆ ಬಿದ್ದಿದ್ದಾರೆ. ಚರಂತಿಮಠ ಲೋಕಾಯುಕ್ತರಿಗೆ ಒಂದು ರೀತಿಯ ಆಸ್ತಿವಿವರಗಳನ್ನು ನೀಡಿದ್ದರೆ, ಚುನಾವಣಾ ಅಧಿಕಾರಿಗಳಿಗೆ ಇನ್ನೊಂದು ರೀತಿಯ ಆಸ್ತಿವಿವರಗಳನ್ನು ನೀಡಿದ್ದಾನೆ. ಎರಡೂ ವಿವರಗಳಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಇದನ್ನೇ ನೆಪ ಮಾಡಿಕೊಂಡಿರುವ ಹುಂಡೇಕಾರ್ ಲೋಕಾಯುಕ್ತರಿಗೆ ಕಂಪ್ಲೇಂಟ್ ಕೊಟ್ಟಿದ್ದಾನೆ. ಲೋಕಾಯುಕ್ತರೂ ಇದನ್ನೇ ಕಾಯುತ್ತಿದ್ದರು ಅಂತ ಕಾಣುತ್ತೆ ಚರಂತಿಮಠನ ವಿರುದ್ಧ ಜಾಮೀನು ರಹಿತ ವಾರೆಂಟ್ ಹೊರಡಿಸಿದ್ದಾರೆ. ಇದರಿಂದ ಮತ್ತಷ್ಟು ಕೆರಳಿರುವ ಚರಂತಿಮಠ ಅಂಡು ಸುಟ್ಟ ಬೆಕ್ಕಿನಂತಾಡುತ್ತಿದ್ದಾನೆ.

ಒಂದೆಡೆ ಹುಂಡೇಕಾರ್ ಕಾಟವಾದರೆ, ಇನ್ನೊಂದೆಡೆ ಚರಂತಿಮಠನನ್ನು ಮುರುಗೇಶ್ ನಿರಾಣಿ ಬೇತಾಳದಂತೆ ಕಾಡುತ್ತಿದ್ದಾನೆ. ಚುನಾವಣಾ ಸಮಯದಲ್ಲಿ ತನ್ನ ವಿರುದ್ಧ ಬಸವೇಶ್ವರ ಬ್ಯಾಂಕ್‌ನ ಛೇರ್ಮನ್ ಪ್ರಕಾಶ್ ತಪಶೆಟ್ಟಿಯನ್ನು ನಿಲ್ಲಿಸಿದ್ದು ಇದೇ ನಿರಾಣಿ ಎಂಬುದು ಚರಂತಿಮಠನಿಗೆ ಗೊತ್ತು. ಹಾಗಾಗಿ ಚುನಾವಣೆಯಲ್ಲಿ ಗೆದ್ದು ಶಾಸಕನಾದಾಗಿನಿಂದಲೂ ನಿರಾಣಿಯೊಂದಿಗೆ ಕಾದಾಡುತ್ತಲೇ ಇದ್ದಾನೆ.

ಮತ್ತೊಂದೆಡೆ, ಚರಂತಿಮಠನಿಗೆ ಗೋವಿಂದ ಕಾರಜೋಳ್ ಎಂಬಾತ ಕೂಡ ಕಾಡುತ್ತಿದ್ದಾನೆ. ಈ ಹಿಂದೆ ಉಸ್ತುವಾರಿ ಸಚಿವನಾಗಿದ್ದ ಸಮಯದಲ್ಲಿ ತನಗೆ ಸೇರಬೇಕಾಗಿದ್ದ ಕಮಾಯಿಯನ್ನೆಲ್ಲಾ ಕಾರಜೋಳನೇ ಮುಕ್ಕಿದ್ದಾನೆಂಬುದು ಚರಂತಿಮಠನಿಗಿರುವ ತಕರಾರು. ಅದರಲ್ಲೂ ತಾನೊಬ್ಬ ಜಂಗಮಸ್ವಾಮಿ, ಯಕಶ್ಚಿತ್ ಆ ಮಾದಿಗ ತನಗೆ ಗುಟುರು ಹಾಕುತ್ತಿದ್ದಾನೆ ಎಂಬ ಜಾತಿವಾದಿ ಅಹಮ್ಮು ಕೂಡ ಚರಂತಿಮಠನಲ್ಲಿದೆ.

ಮಗದೊಂದೆಡೆ, ಈಗಿನ ಉಸ್ತುವಾರಿ ಸಚಿವ ಅರವಿಂದ ಲಿಂಬಾವಳಿಯೊಂದಿಗೂ ವಿರಸ ಕಟ್ಟಿಕೊಂಡಿದ್ದಾನೆ. ಲಿಂಬಾವಳಿ ಕೂಡ ದಲಿತನಾಗಿರುವುದು ಈ ಜಂಗಮ

ಕೇಂದ್ರ ಪುರಾತತ್ವ ಇಲಾಖೆಯ ವಯಸ್ಸಾದ ...ದಿನಗೂಲಿ ನೌಕರನೊಬ್ಬ ಇಲ್ಲಿಯೇ ಕಳೆ ತೆಗೆಯುವ ...ಸಣ್ಣಪುಟ್ಟ ಕೆಲಸ ಮಾಡುತ್ತಿರುತ್ತಾನೆ. ಆ ಅಜ್ಜನ ಜೊತೆ ...ಇದ್ದ ಅಹ್ಮದ್ ಅಂದು ತುಂತುರು ಮಳೆ ಬಂದಾಗ ...ಇಬ್ಬರೂ ಇದೇ ಸರಸ್ವತಿ ಮಂದಿರದೊಳಗೆ ಹೋಗಿ ...ಮಲಗಿದ್ದಾರೆ. ಅವರು ಮಲಗಿದ್ದ ಸ್ಥಳದ ಕಲ್ಲು ಕಂಬದಲ್ಲಿ ...ಕೆತ್ತಿರುವ ಯೋನಿ ಅಗಲ ಮಾಡಿ ತೆರೆದ ಉಬ್ಬು ...ಶಿಲ್ಪ ಅಹ್ಮದ್‌ನನ್ನು ಆಕರ್ಷಿಸಿದೆ. ಆಗ ಅಜ್ಜನ ಬಳಿ ಇದ್ದ ...ಸುತ್ತಿಗೆಗೋಲನ್ನು ತೆಗೆದುಕೊಂಡ ಅಹ್ಮದ್ ಅದನ್ನು ...ಮತ್ತೊಂದು ಕಲಾಕೃತಿ ಮಾಡಲು ಹೊರಟಿದ್ದಾನೆ. ...ಅಷ್ಟರಲ್ಲಿಯೇ 'ಹಂಪಿ ಉಳಿಸಿ ಆಂದೋಲನ ...ಸಮಿತಿ'ಯವರು ಬಂದಿದ್ದಾರೆ. ಇವರಿಗೆ ಯಾರು ಮಾಹಿತಿ ...ಕೊಟ್ಟರೋ ಆ ವಿರೂಪಾಕ್ಷನೇ ಬಲ್ಲ!

...ರೆಡ್‌ಹ್ಯಾಂಡ್ ಆಗಿ ವಿಗ್ರಹ ...ಭಂಜಕನನ್ನು ಹಿಡಿದಿದ್ದೇವೆ ಎಂದು ...ಆತನನ್ನು ಹಂಪಿ ಪೊಲೀಸ್ ಠಾಣೆಗೆ ...ಎಳೆದುಕೊಂಡು ಹೋಗಿದ್ದಾರೆ. ಅಲ್ಲಿ ...ಅಹ್ಮದ್‌ನನ್ನು ಪೊಲೀಸರು ಬಟ್ಟೆ ಬಿಚ್ಚಿಸಿ ...ಚೆನ್ನಾಗಿ ಬಾರಿಸಿದ್ದಾರೆ. ಇದರ ಹಿಂದೆ ...ಇನ್ನೂ ಯಾರಿದ್ದಾರೆಂದು ಅಹ್ಮದ್‌ನನ್ನು ...ಪೀಡಿಸಿದ್ದಾರೆ. ಇನ್ನೂ ಪೀಡಿಸುತ್ತಲೇ ...ಇದ್ದಾರೆ.



ಇಂದೇ ನಡೆಯಿತು ಎಂದು ಹೇಳುವ ಈ ಆಂಜನೇಯ ಉಬ್ಬು ಶಿಲ್ಪ ವಿರೂಪಗೊಂಡು ಯಾವ ಕಾಲವಾಗಿದೆ ಯಾರು ಬಲ್ಲರು?

ಈ ಘಟನೆಗೆ ಕೆಲವು ದಿನಗಳ ಹಿಂದೆ ...ಇಂತಹದ್ದೆ ಉಬ್ಬು ಶಿಲ್ಪಗಳನ್ನು ಯಾರೋ ...ವಿರೂಪಗೊಳಿಸಿದ್ದರ ಬಗ್ಗೆ ರಾಜ್ಯಾದ್ಯಂತ ...ದೊಡ್ಡ ಗುಲ್ಲೆಬ್ಬಿಸಲಾಗಿತ್ತು. ಈ ಬಗ್ಗೆ ...ಎಲ್ಲಾ ಪತ್ರಿಕೆಗಳಲ್ಲಿ ವರದಿ ಬಂದನಂತರ ಹಂಪಿ ...ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ...ಮುಂದುವರೆಸಿದ್ದರು. ಆದರೆ ಆ ತನಿಖೆ ಎಂದೂ ...ಫಲವಾಗುತ್ತಿರಲಿಲ್ಲ ಎಂಬುದು ಅವರಿಗೆ ಗೊತ್ತಿತ್ತು. ...ಇದ್ದರಿಂದ ಹೇಗಾದರೂ ಮಾಡಿ ಆ ಕೇಸ್‌ಗೆ ಅವರು ...ಮುಕ್ತಿ ಕಾಣಿಸಬೇಕಿತ್ತು. ಇತ್ತ 'ಹಂಪಿ ಉಳಿಸಿ ಹೋರಾಟ ...ಸಮಿತಿ'ಯವರಿಗೂ ಒಂದು ಪಶು ಬೇಕಿತ್ತು. ...ಇವರಿಬ್ಬರಿಗೂ ಈಗ ಅಹ್ಮದ್ ಎಂಬ ಹುಚ್ಚ ಸಿಕ್ಕಿದ್ದಾನೆ. ...ಆತ ಮುಸಲ್ಮಾನ್ ಕೂಡ ಆಗಿರುವುದು ಚೆಡ್ಡಿಗಳ ಮತ್ತು ...ಪೊಲೀಸರ ಹುಚ್ಚಾಟಕ್ಕೆ ಹೇಳಿ ಮಾಡಿಸಿದಂತಿದೆ.

"ಈ ಹಿಂದೆ ವಿಗ್ರಹಗಳನ್ನು ನಾಶ ಮಾಡಿದ್ದು ಸಹ ...ನಾನೇ ಎಂದು ಅಹ್ಮದ್ ಬಾಯಿ ಬಿಟ್ಟಿದ್ದಾನೆ" ಎಂದು ...ಪೊಲೀಸರು ಮತ್ತು ಚೆಡ್ಡಿಗಳು ಈಗ ಬಂಬಡಾ ...ಬಜಾಯಿಸುತ್ತಿದ್ದಾರೆ. ಅದಕ್ಕೆ ಸರಿಯಾಗಿ ಕೇಂದ್ರ ಪುರಾತತ್ವ ಇಲಾಖೆ ಹಾಗೂ ರಾಜ್ಯ ಪುರಾತತ್ವ ಇಲಾಖೆಗಳಿಗೂ ತಮ್ಮ ಸಂರಕ್ಷಣೆ ಕೆಲಸದ ಹಿನ್ನೆಡೆಯಿಂದ ತಪ್ಪಿಸಿಕೊಳ್ಳಲು ಈ ಪ್ರಕರಣವನ್ನು ಬಳಸಿಕೊಳ್ಳುತ್ತಿದ್ದಾರೆ. "ನಾವೆಲ್ಲಾ ಎಷ್ಟು ಕೆಲಸ ಮಾಡಿದ್ದೇವೆ. ದುಷ್ಕರ್ಮಿಗಳಿಂದ ನಮ್ಮ ಎಲ್ಲಾ ಕೆಲಸಗಳು ಹಾಳಾಗಿ ಹೋಗಿವೆ" ಎಂದೇ ಅವರು ಸುಳ್ಳರಾಗ ಎಳೆಯುತ್ತಿದ್ದಾರೆ. ಜಿಲ್ಲಾಡಳಿತಕ್ಕೆ ಕಾನೂನು ಸುವ್ಯವಸ್ಥೆ ಕಾಪಾಡಲು ಕೂಡಾ ಈಗ ಅಹ್ಮದ್ ನೆರವಾಗುತ್ತಿದ್ದಾನೆ. ಎಲ್ಲರೂ ದುಷ್ಕರ್ಮಿಗಳನ್ನು 'ಪತ್ತೆ' ಹಚ್ಚಿದ ಸಂತೋಷದಲ್ಲಿದ್ದಾರೆ.

ಆದರೆ ಕಮಲಾಪುರ ಎಂಬ ಇಡೀ ಊರೇ ಈ ಅಹ್ಮದ್‌ನ ತಲೆ ಸರಿ ಇಲ್ಲ ಎಂದು ಹೇಳುತ್ತಿದೆ. ಅಹ್ಮದ್‌ನ ಮನೆಯಲ್ಲಿ ಇನ್ನೂ ಒಬ್ಬ ಮಾನಸಿಕ ಅಸ್ವಸ್ಥ ಇದ್ದಾರೆಂದು ಹೇಳುತ್ತಿದ್ದಾರೆ. ಆದರೆ ಇದ್ಯಾವುದನ್ನೂ ಪೊಲೀಸರಾಗಲಿ, ಚೆಡ್ಡಿಗಳಾಗಲಿ ಕಿವಿಗೆ ಹಾಕಿಕೊಳ್ಳುತ್ತಿಲ್ಲ, ಅವರೆಲ್ಲಾ ಹಾಳಾಗಿ ಹೋಗಲಿ, ಮಾಧ್ಯಮಗಳೂ ಈ ವಿಷಯದಲ್ಲಿ ಕಿವಿ ಮತ್ತು ಕಣ್ಣು ಮುಚ್ಚಿಕೊಂಡು ಕೂತಿರುವುದು ವಿಪರ್ಯಾಸವೇ ಸರಿ.

ಇಲ್ಲಿರುವ ಪ್ರತಿಯೊಂದು ಕಲ್ಲು ಎಂದೋ ಪ್ರಕೃತಿಯಿಂದಾಗಿಯೋ, ಕಾಲದ ಕ್ರಿಯೆಯಿಂದಾಗಿಯೋ ವಿರೂಪಗೊಂಡಿದ್ದರೂ ಅವುಗಳನ್ನು ತಮ್ಮ ಕೋಮುವಾದಿ ಅಜೆಂಡಾವನ್ನು ಜೀವಂತವಾಗಿಡಲು ಇವತ್ತು ಹಿಂದೂತ್ವವಾದಿಗಳು ಉಪಯೋಗಿಸಿಕೊಳ್ಳುತ್ತಿದ್ದಾರೆ. ಅವರಿಗೆ ಜಿಲ್ಲಾಡಳಿತಕ್ಕೆ ಎಲ್ಲ ರೀತಿಯ ನೆರವನ್ನು ನೀಡುತ್ತಿದೆ.

ಇದು ಹೀಗೆ ಮುಂದುವರೆದರೆ, ಮಾನಸಿಕ ಅಸ್ವಸ್ಥನಾಗಿರುವ ಅಹ್ಮದ್ ನಾಳೆ ಇವರ ಬಾಯಲ್ಲಿ ಅಲ್ ಖೈದಾದ ಸದಸ್ಯನಾದರೂ, ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾಗಿದ್ದ ವ್ಯಕ್ತಿಯಾದರೂ ಅಚ್ಚರಿ ಇಲ್ಲ.

ಆದರೆ ಒಂದಂತೂ ಸ್ಪಷ್ಟ ಮತ್ತು ಸತ್ಯ: ಇವತ್ತು ಹಂಪಿಯಲ್ಲಿ ನಿಜಕ್ಕೂ ಯಾರಾದರೂ ಭಯೋತ್ಪಾದಕರು ಇದ್ದರೆ ಅವರು ಚಿಮೂ, ಕಾಮತ್ ಮತ್ತು ಸಂಘ ಪರಿವಾರದ ಚೆಡ್ಡಿಗಳು ಎಂಬುದರ ಬಗ್ಗೆ ಯಾವ ಅನುಮಾನವೂ ಉಳಿದಿಲ್ಲ. ■

...ಯ ಪಿತ್ತ ನೆತ್ತಿಗೇರಲು ಕಾರಣವಾಗಿದೆ. ...ಅದೂಅಲ್ಲದೇ, ಅರವಿಂದ ಲಿಂಬಾವಳಿಯ ತಮ್ಮ ...ಲೋಕ ನಿಂಬಾವಳಿ ಚರಂತಿಮಠನ ಪ್ರತೀ ...ಹಂತಕ್ಕೂ ಅಡ್ಡಗಾಲು ಹಾಕುತ್ತಿದ್ದಾನೆ ಎಂಬ ...ದೂರು ಕೂಡ ಇದೆ.

...ಚರಂತಿಮಠ ತನ್ನ ಚೆಡ್ಡಿ ಪಾಳೆಯದಲ್ಲಿಯೇ ...ರೀತಿ ಎಲ್ಲರ ವಿರೋಧ ಕಟ್ಟಿಕೊಂಡು ...ಒಂಟಿಯಾಗಿಬಿಟ್ಟಿದ್ದಾನೆ. ಇವನನ್ನು ಮಟ್ಟ ...ಹಾಕುವುದಕ್ಕೆ ಪಿ.ಎಚ್.ಪೂಜಾರ್‌ನೇ ಸರಿಯಾದ ...ವ್ಯಕ್ತಿ ಎಂದು ಜಿಲ್ಲೆಯ ಸಂಘಪರಿವಾರಿಗಳೂ ಭಾವಿಸಿ ...ಅವನನ್ನು ಚರಂತಿಮಠನ ವಿರುದ್ಧ ಎತ್ತಿಕಟ್ಟುತ್ತಿದ್ದಾರೆ. ...ಪೂಜಾರ್ ಇದೇ ಬಾಗಲಕೋಟೆಯಲ್ಲಿ ಎರಡು ...ಬಾರಿ ಬಿಜೆಪಿಯಿಂದ ಶಾಸಕನಾದವನು. ಪೇಜಾವರ ...ರಿಗೆ ಬ್ಲಾಂಕ್ ಚೆಕ್ ಧಾರೆಯೆರೆದು ಟಿಕೆಟ್ ...ಪಡೆದ ಚರಂತಿಮಠನ ಮೇಲೆ ಪೂಜಾರ್‌ಗೆ ...ಇದೆ. ಅದನ್ನು ತೀರಿಸಿಕೊಳ್ಳುವುದಕ್ಕೆ ಆತ ...ಕಾಯುತ್ತಿರುವಾಗಲೇ ಸಂಘಪರಿವಾರಿಗಳು ...ಚರಂತಿಮಠನ ವಿರುದ್ಧ ತನ್ನನ್ನು ಎತ್ತಿಕಟ್ಟುತ್ತಿರುವುದು ...ಪೂಜಾರ್‌ಗೆ ವರದಾನವಾಗಿ ಪರಿಣಮಿಸಿದೆ.

...ಅದೂಅಲ್ಲದೇ, ಮೂಲತಃ ಗಣಿ ಉದ್ಯಮಿ ...ಯಾಗಿರುವ ಪೂಜಾರ್‌ನನ್ನು ಬಿಜೆಪಿಗೆ ಕರೆತರಲು ...ರೆಡ್ಡಿ ಗಣಿರೆಡ್ಡಿಗಳೂ ಉತ್ಸುಕರಾಗಿದ್ದಾರೆ. ಪ್ರಸ್ತುತ ...ಕಾಂಗ್ರೆಸ್‌ನಲ್ಲಿರುವ ಪೂಜಾರ್ ಬಿಜೆಪಿಗೆ ಬಂದರೆ ...ಮಂತ್ರಿ ಸ್ಥಾನ ಅಲ್ಲಾಡುವುದು ಗ್ಯಾರಂಟಿ ...ಯೆಂದು ತಿಳಿದುಕೊಂಡಿರುವ ಚರಂತಿಮಠ "ಪೂಜಾರ್ ...ಬಿಜೆಪಿಗೆ ಬಂದರೆ ನಾನು ರಾಜೀನಾಮೆ ನೀಡುತ್ತೇನೆ" ...ಎಂದು ಅವಾಜ್ ಹಾಕಿದ್ದಾನೆ. ಹಾಗಾಗಲೀ ಅಂತ ...ಜಿಲ್ಲೆಯ ಜನರೆಲ್ಲಾ ಕಾಯುತ್ತಿದ್ದಾರೋ?

...ಒಟ್ಟಿನಲ್ಲಿ ಈ ಹಾವು-ಏಣಿ ಆಟದಲ್ಲಿ ಚರಂತಿ ...ಮಠ ... ...

■ ಮೇಘರಾಜ್


ಅಲೆಮಾರಿಯೊಬ್ಬ ಮಂತ್ರಿಯಾದ!

ಚರಂತಿಮಠ ಮೂಲತಃ ಹುನಗುಂದದವನು. ಬಾಗಲಕೋಟೆಗೆ ಅಲೆಮಾರಿಯಂತೆ ಬಂದ ಈತನಿಗೆ ಮೊದಮೊದಲು ಮನೆ ಬಾಡಿಗೆ ಕಟ್ಟುವುದಕ್ಕೂ ಜೇಬಿನಲ್ಲಿ ದುಡ್ಡಿರಲಿಲ್ಲ. ವಸ್ತ್ರದ್ ಅವರು ತಮ್ಮ ಕುಲಬಾಂಧವ ಅನ್ನೋ ಕಾರಣಕ್ಕೆ ಇವನಿಗೆ ಒಂದಿಷ್ಟು ಹಣ ಕೊಟ್ಟು ಒಂದು ಅಂಗಡಿ ಇಟ್ಟು ಕೊಟ್ಟಿದ್ದರು. 23 ವರ್ಷದ ಹಿಂದೆ ಈತನಿಗಿದ್ದ ಆಸ್ತಿ ಇಷ್ಟೆ. ಆದರೆ ಇವತ್ತು? ಈತ ಮುನ್ನೂರು ಕೋಟಿಗೂ ಹೆಚ್ಚು ಆಸ್ತಿ ಮಾಡಿಕೊಂಡಿದ್ದಾನೆ. ಸಂಘಪರಿವಾರದಲ್ಲಿ ಸಕ್ರಿಯನಾಗಿ ಚೆನ್ನಾಗಿ ಲಾಠಿ ತಿರುಗಿಸುವುದನ್ನು ಕಲಿತುಕೊಂಡು ರಾಜಕೀಯ ಪ್ರವೇಶಿಸಿದ್ದಾನೆ ಅದೇ ವೇಳೆಯಲ್ಲಿ ಬಸವೇಶ್ವರ ವಿದ್ಯಾವರ್ಧಕ ಸಂಘದ ಸದಸ್ಯನಾಗಿ, ನಂತರ ಅದರ ಛೇರ್ಮನ್ ಆಗಿ ಹತ್ತಾರು ವರ್ಷಗಳಿಂದ ಕಂಡ ಕಂಡಲ್ಲಿ ದುಡ್ಡು ಗೆಬರಿಕೊಂಡಿದ್ದಾನೆ.

ಇವತ್ತು ಈತ ಸಮಸ್ತ ಬಾಗಲಕೋಟೆಗೆ ಕುಬೇರನಾಗಿ ಬೆಳೆದಿದ್ದಾನೆಂದರೆ ಈತ ಜಿಲ್ಲೆಯನ್ನು ಅದೆಷ್ಟರಮಟ್ಟಿಗೆ ಕೊಳ್ಳೆ ಹೊಡೆದಿದ್ದಾನೆಂಬುದು ಅರ್ಥವಾಗುತ್ತದೆ. ಇವನ ತಮ್ಮನ ಹೆಸರಿನಲ್ಲಿ ಕುಷ್ಟಗಿ ತಾಲ್ಲೂಕಿನ ಕಡೂರು, ಪುರ್ತಗೇರಿ ಎಂಬ ಗ್ರಾಮಗಳಲ್ಲಿ 93 ಎಕರೆಗೂ ಹೆಚ್ಚು ಜಮೀನಿದೆ. ತನ್ನ ಹೆಂಡತಿಯ ಹೆಸರಿನಲ್ಲಿ 90 ಕೋಟಿ ಮೌಲ್ಯದ ಎಥಿನಾಲ್ ಫ್ಯಾಕ್ಟರಿಯನ್ನು ತೆರೆಯುವ ಪ್ರಾಜೆಕ್ಟ್ ಬೇರೆ ಹಾಕಿಕೊಂಡಿದ್ದಾನೆ. ತನ್ನದೇ ಹೆಸರಿನ ಕುಮಾರೇಶ್ವರ ಸಂಶೋಧನಾ ಕೇಂದ್ರ ಮತ್ತು ಆಸ್ಪತ್ರೆಯ ಎದುರಿಗೆ ನವನಗರದಲ್ಲಿ ಎರಡೂವರೆ ಕೋಟಿ ಆಸ್ತಿ ಕೊಂಡುಕೊಂಡಿದ್ದಾನೆ. ಅಲ್ಪಸಂಖ್ಯಾತರ ಪತ್ತಿನ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷನಾಗಿರುವ ಇವನ ಚೇಲಾ ಸೈದುಸಾಬ್ ದೊಡಮನಿಗೆ ಇವನ ಅಧೀನದಲ್ಲಿರುವ ಬೀಳೂರ ಬಸವೇಶ್ವರ ಬ್ಯಾಂಕ್‌ನಿಂದ ಒಂದು ಕೋಟಿ ಎತ್ತಿ ಕೊಟ್ಟಿದ್ದಾನೆ. ಅಲ್ಲದೇ ಅವನ ಹೆಸರಿನಲ್ಲೂ ಬೇನಾಮಿ ಆಸ್ತಿ ಮಾಡಿರುವ ಬಗ್ಗೆಯೂ ಗುಲ್ ಇದೆ.

ಚರಂತಿಮಠ ಅದೆಂಥ ಮುಖಗೇಡಿ ಎಂದರೆ ಚುನಾವಣೆಯಲ್ಲಿ ದುಡ್ಡು ಖರ್ಚು ಮಾಡುವುದಕ್ಕೆ ತನ್ನ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಸುಮಾರು ಮೂರುವರೆ ಸಾವಿರ ನೌಕರರ ಒಂದು ತಿಂಗಳ ಸಂಬಳ ಇಟ್ಟುಕೊಂಡಿದ್ದ ಇವನ ತೋಳ್ಬಲಕ್ಕೆ ಹೆದರಿದ ಆ ನೌಕರರೆಲ್ಲರೂ ... ಕುಳಿತಿದ್ದಾರಷ್ಟೆ. ■

ಜಮಖಂಡಿ: ಮಹಿಳಾ ಕಾಲೇಜಿನ ಪ್ರಿನ್ಸಿಯ ಭಾನಗಡಿಗಳು



ವಿಶೇಷವಾಗಿ ಮಹಿಳೆಯರ ಸರ್ವತೋಮುಖ ಏಳ್ಗೆಗಾಗಿ ಆರಂಭಿಸಲಾದ ಜಮಖಂಡಿಯ ಪ್ರಥಮ ದರ್ಜೆ ಮಹಿಳಾ ಕಾಲೇಜು ಈಗ ಕರ್ಮಕಾಂಡಗಳ ಗೂಡಾಗಿದೆ. ಇಲ್ಲಿನ ದಗಲ್ಬಾಜಿ ಪ್ರಿನ್ಸಿ ದೇಗೌಡ ಹಾಗೂ ಸೂಪರಿಂಟೆಂಡೆಂಟ್ ಚಂದ್ರ ಕಾಂತನ ಭಾನಗಡಿಗಳಿಂದಾಗಿ ಪಾಲಕರು ತಮ್ಮ ಹೆಣ್ಣು ಮಕ್ಕಳನ್ನು ಈ ಕಾಲೇಜಿಗೆ ಕಳಿಸಲು ನೂರು ಬಾರಿ ಯೋಚಿಸುವಂತಾಗಿದೆ.

ಈ ಇಬ್ಬರೂ ಕಳ್ಳ-ಖದೀಮರ ಜೋಡಿ ಇಲ್ಲಿ ನಡೆಸುತ್ತಿರುವ ಅಕ್ರಮಗಳು ಒಂದೆರಡಲ್ಲ. ಇವರಿಬ್ಬರು ಇಂದೋ ನಾಳೆಯೋ ಸುಧಾರಿಸಿಕೊಳ್ಳಬಹುದೆಂದು ಸಹಿಸಿಕೊಂಡು ಬಂದಿದ್ದ ಜನರ ಸಹನೆ ಈಗ ಕಟ್ಟೆಯೊಡೆದು ಬೀದಿಗಿಳಿಯುವ ಸಂದರ್ಭ ಬಂದೊದಗಿದೆ.

ಇಲ್ಲಿ ಪ್ರಿನ್ಸಿಪಾಲನಾಗಿ ವಕ್ಕರಿಸಿಕೊಂಡಿರುವ ಎಸ್.ಬಿ.ದೇಗೌಡನೆಂಬ ಆಸಾಮಿ ಮೂಲತಃ ಕಾಲೇಜಿನಲ್ಲಿ ಪಾಠ ಮಾಡಿದ್ದಕ್ಕಿಂತ ಟ್ಯೂಶನ್ ಹೇಳಿ ಸಖತ್ತಾಗಿ ಮೇಯ್ದಿರುವ ಕುಳ. ಕೆಲ ವರ್ಷಗಳ ಹಿಂದೆ ಇಲ್ಲಿ ಪ್ರಾಚಾರ್ಯ ಹುದ್ದೆ ಸಿಕ್ಕಕ್ಷಣ ಹುಲ್ಲುಗಾವಲೇ ಸಿಕ್ಕಷ್ಟು ಸಂತಸದಿಂದ ಹುದ್ದೆ ಅಲಂಕರಿಸಿ ಸಿಕ್ಕಸಿಕ್ಕಲ್ಲೆಲ್ಲ ನಾಲಿಗೆ ಚಾಚಲು ಶುರುಮಾಡಿದ್ದಾನೆ.



ವಿದ್ಯಾರ್ಥಿನಿಯರು ಹೆಚ್ಚಾದಷ್ಟು ಹೆಚ್ಚು ಹೆಚ್ಚು ಪೀಕಬಹುದೆಂಬ ಲೆಕ್ಕಾಚಾರದಲ್ಲಿ ಈತ ಕೇವಲ ನಾಲ್ಕೈದು ಕ್ಲಾಸ್ ರೂಮುಗಳಿರುವ ಈ ಕಾಲೇಜಿನಲ್ಲಿ ಒಟ್ಟು ಆರು ಪದವಿ ಕೋರ್ಸುಗಳನ್ನಾರಂಭಿಸಿದ್ದಾನೆ. ಆದರೆ ಈ ಕೋರ್ಸುಗಳಿಗೆ ಇಂದಿಗೂ ಸರಿಯಾದ ಬೋಧಕ ಸಿಬ್ಬಂದಿ ಇಲ್ಲ. ಈ ಆರೂ ಕೋರ್ಸುಗಳನ್ನೊಳಗೊಂಡಂತೆ ಇಲ್ಲಿರುವುದು ಕೇವಲ ಹತ್ತು ಜನ ಪರ್ಮನೆಂಟ್ ಉಪನ್ಯಾಸಕರು ಮಾತ್ರ. ಇನ್ನುಳಿದವರೆಲ್ಲ ಅತಿಥಿ ಉಪನ್ಯಾಸಕರು. ಆದರೆ ಕಸದಲ್ಲೂ ರಸ ತೆಗೆಯುವ ಕಲೆಯನ್ನು ಕರಗತಮಾಡಿಕೊಂಡಿರುವ ದೇಗೌಡ ಕಳೆದ ಸಾಲಿಗೆ ಒಟ್ಟು 40ಕ್ಕೂ ಹೆಚ್ಚು ಜನ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಂಡಿರುವುದಾಗಿ ಹೇಳಿ ಅಷ್ಟೂ ಜನರ ಗೌರವಧನ ನುಂಗಿದ್ದಾನೆ. ವಾಸ್ತವವಾಗಿ ಅಲ್ಲಿರುವ ಅತಿಥಿ ಉಪನ್ಯಾಸಕರು 20 ಜನ ಮಾತ್ರ. ಅದರಲ್ಲೂ ಸರಿಯಾಗಿ ಪಾಠ ಮಾಡಿದವರು 10 ಜನ. ಇನ್ನುಳಿದ ಹತ್ತು ಜನ ಸಂಬಳಕ್ಕಾಗಿ ಬಂದು ಸಹಿ ಮಾಡಿಹೋಗಿದ್ದು ಬಿಟ್ಟರೆ ಅವರ ಮುಖ ಕೂಡ ವಿದ್ಯಾರ್ಥಿನಿಯರಿಗೆ ಅಪರಿಚಿತ. ಹೀಗೆ 20 ಜನ ಅನಾಮಿಕ ಅತಿಥಿ ಉಪನ್ಯಾಸಕರ ಸಂಬಳವನ್ನು ಸಾರಾಸಗಟಾಗಿ ನುಂಗಿ ಹಾಕಿರುವುದಲ್ಲದೆ, ಬರೀ ಹಾಜರಾತಿಗಾಗಿ ಮಾತ್ರ ಹಾಜರಾದ 10 ಜನರಿಂದಲೂ ಪ್ರಸಾದ ಸ್ವೀಕರಿಸಿದ್ದಾನೆ ದೇಗೌಡ.



ಹೇಳಿಕೇಳಿ ಮಹಿಳಾ ಕಾಲೇಜಿನ ಮುಖ್ಯಸ್ಥನಾಗಿರುವ ಕಾರಣಕ್ಕಾದರೂ ತನ್ನ ಕೈಬಾಯಿ, ಮೈಮನಸುಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕಿತ್ತು. ಆದರೆ 54 ವರ್ಷಗಳಾದರೂ ಇನ್ನೂ ತನಗೆ ಮದುವೆ ಆಗಿಲ್ಲವೆಂಬುದನ್ನೇ ತನ್ನ ದೊಡ್ಡ ಸಾಧನೆ ಎಂದು ತೋರಿಸಿಕೊಳ್ಳುತ್ತ ಕಾಲೇಜಿಗೆ ಬರುವ ವಿದ್ಯಾರ್ಥಿನಿಯರೊಂದಿಗೆ ಅನುಚಿತವಾಗಿ ವರ್ತಿಸುತ್ತಾನೆ.

ಶಾಸಕರೇ ಶಾಲಾ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿರುವ ಈ ಕಾಲೇಜಿನಲ್ಲಿ ಮೊದಮೊದಲು ಆಗೊಮ್ಮೆ ಈಗೊಮ್ಮೆ ಸಭೆಗಳಾದರೂ ನಡೆಯುತ್ತಿದ್ದವು. ಯಾವಾಗ ಈ ಕ್ಷೇತ್ರಕ್ಕೆ ಸಿದ್ದು ಸವದಿ ಶಾಸಕನಾಗಿದ್ದನೋ ಈ ಕಾಲೇಜಿನ ವಾತಾವರಣವೇ ಹಳ್ಳ ಹಿಡಿಯಿತು. ತನ್ನ ಅಧಿಕಾರಾವಧಿಯಲ್ಲಿ ಸವದಿ ಇಲ್ಲಿ ನಡೆಸಿದ ಒಂದೇ ಒಂದು ನಾಮಕಾವಸ್ಥೆ ಸಭೆಯನ್ನು ಬಿಟ್ಟರೆ ಈ ಕಡೆಗೆ ಗಮನವನ್ನೇ ಹರಿಸಲಿಲ್ಲ.

ದೇಗೌಡನೊಂದಿಗೆ ಸೂಪರಿಂಟೆಂಡೆಂಟ್ ಚಂದ್ರಕಾಂತ್ ಎಂಬುವವನಿದ್ದಾನೆ. ಗಂಗಾವತಿ ಕಾಲೇಜಿನಲ್ಲಿ ಮಾಡಿದ ಅವ್ಯವಹಾರಗಳಿಂದಾಗಿ ಪನಿಶ್‌ಮೆಂಟ್ ಟ್ರಾನ್ಸ್‌ಫರ್ ಮೇಲೆ ಇಲ್ಲಿಗೆ ವಕ್ಕರಿಸಿದ ಚಂದ್ರಕಾಂತ ಒಬ್ಬ ಕ್ಲರಿಕಲ್ ಸಿಬ್ಬಂದಿಯಾದರೂ ತಾನು ಪಾಠ ಮಾಡಿದ್ದೇನೆಂದು ಅತಿಥಿ ಉಪನ್ಯಾಸಕರು ಪಡೆಯುತ್ತಿರುವ ಗೌರವಧನವನ್ನು ಪಡೆದಿದ್ದಾನೆ.

ಈ ದೇಗೌಡ-ಚಂದ್ರಕಾಂತನ ಜೋಡಿ ಅಡ್ಮಿಶನ್ ಸಮಯದಲ್ಲಿ ಫೀಜಿನ ಜೊತೆಗೆ 125 ರೂ.ಗಳನ್ನು ಶಾಲಾ ಅಭಿವೃದ್ಧಿಯ ಹೆಸರಿನಲ್ಲಿ ಹೆಚ್ಚುವರಿಯಾಗಿ ವಸೂಲಿ ಮಾಡುತ್ತಿದ್ದಾರೆ. ಆದರೆ ಅದಕ್ಕೆ ರಸೀದಿಯನ್ನು ಮಾತ್ರ ಯಾರಿಗೂ ನೀಡಿಲ್ಲ. ಈ ವಸೂಲಿಯ ಬಗ್ಗೆ ಕೇಳುವವರಿಗೆ ಸಿಗುವುದು ಅನುಚಿತವಾದ ವರ್ತನೆಯಷ್ಟೇ.

ಕಾಲೇಜನ್ನು ತಮ್ಮ ಸ್ವಂತ ಪಿತ್ರಾರ್ಜಿತ ಆಸ್ತಿಯೆಂದೇ ಭಾವಿಸಿರುವ ಈ ಜೋಡಿ ಇಲ್ಲಿನ ಅಗತ್ಯ ಸಾಮಗ್ರಿಗಳ ಖರೀದಿಯನ್ನು ತರಕಾರಿ ಖರೀದಿಸಿದಷ್ಟೇ ಸಲೀಸಾಗಿ ಮಾಡಿ ಮುಗಿಸಿದ್ದಾರೆ. ವಿಜ್ಞಾನ ಪ್ರಯೋಗಾಲಯಕ್ಕೆ ಬೇಕಾದ ಸಾಮಗ್ರಿಗಳ ಖರೀದಿಯಲ್ಲಿ ಸಾಕಷ್ಟು ತಿಂದು ತೇಗಿದ್ದಾರೆ. ಯು.ಜಿ.ಸಿ. ಡೆವಲಪ್‌ಮೆಂಟ್ ಫಂಡ್‌ನಿಂದ ಸುಮಾರು 70000 ರೂ.ಗಳಷ್ಟು ಉಪಯೋಗಕ್ಕೆ ಬಾರದ ಪುಸ್ತಕಗಳನ್ನು ಖರೀದಿಸಿದ್ದಾರೆ. ಸಂಬಂಧಪಟ್ಟ ಉಪನ್ಯಾಸಕರನ್ನು ಸಂಪರ್ಕಿಸದೇ ನಡೆದಿರುವ ಈ ಪುಸ್ತಕ ಖರೀದಿಯಲ್ಲಿ ಈ ಕಳ್ಳ ಮಳ್ಳ ಜೋಡಿ ಪುಷ್ಕಳವಾಗಿ ಮೇಯ್ದಿದ್ದಾರೆ.

ಈ ಸಲದ ಅತಿಥಿ ಉಪನ್ಯಾಸಕರ ನೇಮಕದಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ. ಎಲ್ಲ ಅರ್ಹತೆಯನ್ನು ಹೊಂದಿರುವ ಸುಮಾರು ಮೂರು ವರ್ಷಗಳ ಅನುಭವ ಇರುವ ಪ್ರಾಮಾಣಿಕ ಪ್ರತಿಭಾವಂತ ಬಿ.ಆರ್. ಹಿರೇಮಠ ಎಂಬ ಉಪನ್ಯಾಸಕ ಅಂಧ ಎನ್ನುವ ಏಕೈಕ ಕಾರಣಕ್ಕಾಗಿ ಅನರ್ಹಗೊಳಿಸಲಾಗಿದೆ. ಈ ಅನ್ಯಾಯವನ್ನು ವಿರೋಧಿಸಿ ರಾಜ್ಯ ಅಂಧ ಹಾಗೂ ಅಂಗವಿಕಲ ಸಂಘಟನೆಯವರು ಹಿರೇಮಠರ ಬೆಂಬಲಕ್ಕೆ ನಿಂತು ಇವರಿಬ್ಬರ ಬಣ್ಣ ಬಯಲು ಮಾಡಲು ಸಜ್ಜಾಗಿದ್ದಾರೆ.

ಇವರ ಕರ್ಮಕಾಂಡ ಇಷ್ಟಕ್ಕೆ ಮುಗಿಯುವುದಿಲ್ಲ. ಪರೀಕ್ಷೆಯಲ್ಲಿ ಸ್ವತಃ ದೇಗೌಡನೇ ಗೈಡುಗಳನ್ನು ಹಿಡಿದು ಓಡಾಡಿ ಕಾಪಿ ಮಾಡಿಸುತ್ತಾನೆ. ತನ್ನ ಅಂಕೆಯಲ್ಲಿಲ್ಲದ ವಿದ್ಯಾರ್ಥಿನಿಯರಿಗೆ "ಇಂಟರ್‌ನಲ್ ಮಾರ್ಕ್ಸ್‌ನಲ್ಲಿ ನಿಮ್ಮನ್ನು ನೋಡಿಕೊಳ್ಳುತ್ತೇನೆ" ಎಂದು ಬೆದರಿಸುತ್ತಾನೆ.

ಈತನ ವಿರುದ್ಧ ಮಹಿಳಾ ವಿ.ವಿ.ಯಲ್ಲಿ, ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಸಾಕಷ್ಟು ಕಂಪ್ಲೆಂಟ್‌ಗಳಿವೆ. ಆದರೆ ಅದ್ಯಾವ ಕಾರಣಕ್ಕೋ ಗೊತ್ತಿಲ್ಲ ಈತನ ವಿರುದ್ಧ ಯಾರೂ ಕ್ರಮ ಜರುಗಿಸುತ್ತಿಲ್ಲ. ಸದ್ಯಕ್ಕೆ ಇಲ್ಲಿನ ಶಾಸಕನಾಗಿರುವ ಶ್ರೀಕಾಂತ ಕುಲಕರ್ಣಿ ಇತ್ತ ಕಡೆ ಅದಷ್ಟು ಬೇಗ ಗಮನ ಹರಿಸಿ ಇವನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಿದೆ.

...



■ ಮಹಾಲಿಂಗಪ್ಪ ಆಲಬಾಳ್

KOCCA

ಖಾಕಿ ಭಯೋತ್ಪಾದನೆಯ ಕರಾಳ ಮುಖ

■ ಕುಮಾರ್ ಬುರಡಿಕಟ್ಟಿ

ರಾಜ್ಯದಲ್ಲಿ ಬಿಜೆಪಿ ಎಂಬ ಫ್ಯಾಸಿಸ್ಟ್ ಪಕ್ಷ ಅಧಿಕಾರಕ್ಕೆ ಬರುತ್ತಿದ್ದಂತೆಯೇ ನಾಡಿನ ಪ್ರಜಾತಂತ್ರ ಜನರಿಗೆ, ಶಾಂತಿಪ್ರಿಯರಿಗೆ, ಕೋಮು ಸೌಹಾರ್ದ ಆಶಿಸುವವರಿಗೆ ಮುಂಬರುವ ಕರಾಳ ದಿನಗಳ ಬಗ್ಗೆ ಆತಂಕ ಇದ್ದೇ ಇತ್ತು. ಅದೀಗ ಒಂದೊಂದಾಗಿ ನಿಜವಾಗುತ್ತಾ ಹೋಗುತ್ತಿದೆ.

ಮುಖ್ಯಮಂತ್ರಿ ಬಿ.ಎಸ್.ಎಡಿಯೂರಪ್ಪ ಮತ್ತಾತನ ಸಚಿವ ಸಂಪುಟ ಎಂಬ ಪುಂಡರ ಗುಂಪಿನಿಂದಾಗಿ ಕಳೆದ ಎರಡು ತಿಂಗಳಲ್ಲಿ ಸಂಭವಿಸಿರುವ ಅವಾಂತರಗಳನ್ನೇ ನೋಡಿ. ಒಂದೆಡೆ ರಸಗೊಬ್ಬರ ಕೇಳಿದ್ದಕ್ಕೆ ಪೊಲೀಸರಿಂದ ಗುಂಡೇಟು ತಿಂದ ಇಬ್ಬರು ರೈತರು ತಮ್ಮ ಪ್ರಾಣವನ್ನೇ ಕಳೆದುಕೊಂಡರು, ಇನ್ನೂ ಅದೆಷ್ಟೋ ಕೃಷಿಕರು ಆತ್ಮಹತ್ಯೆಗೆ ಶರಣಾದರು. ಇನ್ನೊಂದೆಡೆ ಅದೇ ಹೊತ್ತು ಯಡ್ಡಿಯ ಸಚಿವ ಪಟಾಲಂ ವಾಸ್ತು ದೋಷ ನಿವಾರಣೆಯಂತಹ ಮೂಢ ನಂಬಿಕೆಗೆ ರಾಜ್ಯ ಬೊಕ್ಕಸದಿಂದ ಕೋಟ್ಯಂತರ ರೂಪಾಯಿಗಳ ದುಂದುವೆಚ್ಚ ಮಾಡಿತು. ಮತ್ತೊಂದೆಡೆ ಸೂರ್ಯ ಗ್ರಹಣವು ರಾಜ್ಯದ ಮೇಲೆ ದುಷ್ಪರಿಣಾಮ ಬೀರಿದೆ ಎಂದು ನಂಬಿದ ತಲೆ ಇಲ್ಲದ ಯಡ್ಡಿ ಅದಕ್ಕೊಂದು ಕೊಲ್ಲೂರು ದೇವಸ್ಥಾನದಲ್ಲಿ ಚಂಡಿಕಾ ಹೋಮ ಮಾಡಿಸಿದರಲ್ಲದೆ, ಆ ದೇಗುಲಕ್ಕೆ ಬರೋಬ್ಬರಿ ಮೂವತ್ತು ಕೋಟಿ ರೂಪಾಯಿಗಳನ್ನು ಮಂಜೂರು ಮಾಡುವುದಾಗಿ ಭರವಸೆ ನೀಡಿದರು.



ಎ.ಎಸ್. ಆಚಾರ್ಯ

ಇದು ಐಲುಪೈಲುಗಳ ಸರ್ಕಾರವೋ ಅಥವಾ ಹುಚ್ಚರ ಸಂತೆಯೋ ಗೊತ್ತಾಗದಂತಾಗಿದೆ. ಯಾಕೆಂದರೆ ಇವರ ಆಡಳಿತದಡಿ, ಇವತ್ತಿಗೂ ಅಸ್ಪೃಶ್ಯತೆಯ ಸಂಕೇತವಾದ ಪ್ರತ್ಯೇಕ ಪಂಕ್ತಿ ಭೋಜನ ವ್ಯವಸ್ಥೆಯನ್ನು ಅನುಸರಿಸುವ ರಾಘವೇಶ್ವರ ಎಂಬ ಢೋಂಗಿ ಸ್ವಾಮಿಗೆ, ರಾಜ್ಯ ಬೊಕ್ಕಸದಿಂದ ಪುಕ್ಕಟೆಯಾಗಿ ಕೋಟ್ಯಂತರ ರೂಪಾಯಿಗಳು ಹರಿದುಹೋಗುತ್ತದಲ್ಲದೆ, ಆತನಿಗೆ ಐತಿಹಾಸಿಕ ಅಮೃತ ಮಹಲ್ ತಳಿಯ ಅಭಿವೃದ್ಧಿ ಕೇಂದ್ರವೂ ದಕ್ಕುತ್ತದೆ. ಅದೂ ಸಾಲದೆಂಬಂತೆ ಆತನಿಗೆ ಈಗ ಗೋಕರ್ಣದಲ್ಲಿ ಮತ್ತೊಂದು ದೇಗುಲದ ಜವಾಬ್ದಾರಿಯನ್ನೂ ನೀಡಲಾಗಿದೆ ಎಂಬ ಸುದ್ದಿ ಕೇಳಿಬರುತ್ತಿದೆ.

ತಾನು ಜಾತ್ಯತೀತ ದೇಶವೊಂದರ ರಾಜ್ಯದ ಮುಖ್ಯಮಂತ್ರಿ, ಮೂಢನಂಬಿಕೆ ಹೆಚ್ಚಾಗುವಂತೆ ವರ್ತಿಸುವುದು ಸಂವಿಧಾನ ವಿರೋಧಿ ಕೃತ್ಯವಾಗುತ್ತದೆ ಎಂಬ ಮೂಲಭೂತ ವಿಷಯಗಳನ್ನೇ ಮರೆತು ಯಾವುದೋ ಒಂದು ಧರ್ಮದ ಅರ್ಚಕನಂತೆ ಯಡ್ಡಿ ವರ್ತಿಸುತ್ತಿದ್ದಾರೆ.



ಯಡ್ಡಿ

ಸಹಜವಾಗಿಯೇ ಇದೆಲ್ಲ ರಾಜ್ಯದ ಪ್ರಜ್ಞಾವಂತ ಮತ್ತು ಜಾತ್ಯತೀತ ಮನಸ್ಸುಗಳನ್ನು ಕೆರಳಿಸುತ್ತಿದೆ. ಅವರ ಟೀಕೆ, ವಿಮರ್ಶೆಗಳು ಯಡ್ಡಿಗೆ ಸಹಿಸಲಸಾಧ್ಯವಾಗುತ್ತಿದೆ. ತನ್ನ ಸುಳ್ಳುಗಳನ್ನು, ಮೌಢ್ಯವನ್ನು, ಬೇಜವಾಬ್ದಾರಿತನವನ್ನು ಅವರೆಲ್ಲ "ಥೂ" ಎಂದು ಸರಿಯಾಗಿಯೇ ಉಗಿಯುವುದು ಯಡ್ಡಿಯ ಸರ್ವಾಧಿಕಾರಿ ಮನಸ್ಸಿಗೆ ಬೇಡವಾಗಿದೆ. ಆದರೆ ಇಂತಹ ಪ್ರಜಾತಾಂತ್ರಿಕ ದನಿಯನ್ನು ಲಾಠಿ-ಬೂಟುಗಳಿಂದ, ಬಂದೂಕಿನ ಗುಂಡುಗಳಿಂದ ಅಡಗಿಸುವುದು ಯಡಿಯೂರಪ್ಪನಿಗೆ ತುಸು ಕಷ್ಟವಾಗುತ್ತದೆ. ಹಾಗಾಗಿ ತಮ್ಮ ವಿರುದ್ಧ ದನಿ ಎತ್ತುವವರೆಲ್ಲರಿಗೂ ಭಯೋತ್ಪಾದಕ ಶಕ್ತಿಗಳ ಬೆಂಬಲಿಗರೆಂದು ಹಣೆಪಟ್ಟಿ ಹಚ್ಚಿ ಕಾನೂನಿನ ಮೂಲಕವೇ ಅವರನ್ನೆಲ್ಲಾ ಸದೆಬಡಿಯುವ ಕುತಂತ್ರವನ್ನು ಯಡ್ಡಿ ಸರ್ಕಾರ ಅನುಸರಿಸಲು ಮುಂದಾಗಿದೆ.

ಈ ಹಿನ್ನೆಲೆಯಲ್ಲಿಯೇ ಈ ಹಿಂದೆ 2000ರಲ್ಲಿ ಎಸ್.ಎಂ.ಕೃಷ್ಣ ಸರ್ಕಾರ ಜಾರಿಗೆ ತಂದಿದ್ದ ಕರ್ನಾಟಕ ಸಂಘಟಿತ ಅಪರಾಧಗಳ ನಿಯಂತ್ರಣಾ ಕಾಯಿದೆ **(Karnataka Organised Crime Control Act - KOCCA)** ಎಂಬ ಕರಾಳ ಕಾನೂನನ್ನು ಬಳಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಚಿಕ್ಕಪುಟ್ಟ ಬಾಂಬ್ ಸ್ಫೋಟ ಪ್ರಕರಣಗಳು ಕೋಕಾ ಎಂಬ ಕರಾಳ ಕಾನೂನನ್ನು ಜಾರಿಗೆ ತರುವುದಕ್ಕೆ ಒಳ್ಳೆಯ ನೆಪವಾಗಿ ಸಿಕ್ಕಿಬಿಟ್ಟಿದೆ. ಸ್ಫೋಟಗಳ ಬಿಸಿ ಆರುವ ಮುನ್ನವೇ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಗೃಹ ಸಚಿವ ವಿ.ಎಸ್.ಆಚಾರ್ಯ ಭಯೋತ್ಪಾದನೆಯನ್ನು ನಿಗ್ರಹಿಸುವುದಕ್ಕೆ ಕೋಕಾ ಕಾನೂನನ್ನು ಬಳಸುವುದಾಗಿ ಘೋಷಿಸಿದ್ದಾರೆ. ವಾಸ್ತವದಲ್ಲಿ ಇದು ಭಯೋತ್ಪಾದನೆಯನ್ನು ನಿಗ್ರಹಿಸುವುದಕ್ಕಿಂತ ತಮ್ಮ ಆಧಿಪತ್ಯಕ್ಕಿರುವ ಪ್ರತಿರೋಧವನ್ನು ಶಮನ ಮಾಡುವುದಕ್ಕೇ ಹೆಚ್ಚು ಬಳಕೆಯಾಗುತ್ತದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ಪ್ರಜಾತಂತ್ರ ವಿರೋಧಿ ಕಾಯಿದೆ

ಕೋಕಾ ಕಾಯಿದೆ ಮೂಲಭೂತವಾಗಿ ಒಂದು ಜನವಿರೋಧಿ, ಪ್ರಜಾತಂತ್ರ ವಿರೋಧಿ ಕಾನೂನು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವಿದ್ದಾಗ ಜನಪ್ರತಿರೋಧವನ್ನು ವ್ಯವಸ್ಥಿತವಾಗಿ ಹತ್ತಿಕ್ಕುವ ಉದ್ದೇಶದಿಂದ ಪೋಟಾ ಕಾಯಿದೆಯನ್ನು ಜಾರಿಗೆ ತಂದಿತ್ತು. ಅದೇ ವೇಳೆಯಲ್ಲಿ ಅನೇಕ ರಾಜ್ಯಗಳಲ್ಲಿ ಪೋಟಾದಷ್ಟೇ ಭೀಕರವಾದ ಅನೇಕ ಕಪ್ಪು ಕಾಯಿದೆಗಳು ಜಾರಿಗೆ ಬಂದವು. ಈ ಪ್ರಕ್ರಿಯೆಯ ಭಾಗವಾಗಿಯೇ ಕರ್ನಾಟಕದಲ್ಲಿ ಎಸ್.ಎಂ.ಕೃಷ್ಣ ಸರ್ಕಾರ ಈ ಕೋಕಾ ಕಾಯಿದೆಯನ್ನು ಜಾರಿಗೆ ತಂದಿತ್ತು.

ಕೋಕಾ ಕಾಯಿದೆಯಲ್ಲಿರುವ ಕೆಲವು ಪ್ರಾವಿಷನ್‌ಗಳನ್ನು ನೋಡಿದರೆ ಇದು ಎಷ್ಟು ಜನವಿರೋಧಿ, ಸಂವಿಧಾನ ವಿರೋಧಿ ಕಾಯಿದೆ ಎಂಬುದು ಅರ್ಥವಾಗುತ್ತದೆ.

ವಿಚಾರಣೆಯಿಲ್ಲದೇ ಆರು ತಿಂಗಳು ಬಂಧನ!

ಸಾಮಾನ್ಯ ಅಪರಾಧ ಕಾನೂನುಗಳಡಿಯಲ್ಲಿ ಪೊಲೀಸರು ಒಬ್ಬ ವ್ಯಕ್ತಿಯನ್ನು ಬಂಧಿಸಿದ 24 ತಾಸುಗಳ ಒಳಗೆ ಆತನನ್ನು ಕೋರ್ಟಿನಲ್ಲಿ ಹಾಜರುಪಡಿಸಬೇಕು. ಬಂಧನವಾದ ಹದಿನೈದು ದಿನಗಳ ಒಳಗೆ ಎಫ್‌ಐಆರ್ ಸಲ್ಲಿಸಬೇಕು. ಎರಡು ತಿಂಗಳ ಒಳಗೆ ಚಾರ್ಜ್ ಶೀಟ್ ಸಲ್ಲಿಸಬೇಕು. ಕಾನೂನಿನಲ್ಲಿನ ಇಂತಹ ಚಿಕ್ಕಪುಟ್ಟ ಅವಕಾಶಗಳನ್ನೇ ಬಳಸಿಕೊಂಡು ಪೊಲೀಸರು ಅದೆಷ್ಟೋ ಆರೋಪಿಗಳಿಗೆ ವಿಚಾರಣೆಯ ನೆಪದಲ್ಲಿ ಚಿತ್ರಹಿಂಸೆ ನೀಡುವುದು ಈಗ ಜಗಜ್ಜಾಹೀರವಾಗಿದೆ.

ಅಂತಹದ್ದರಲ್ಲಿ ಕೋಕಾ ಕಾಯಿದೆಯಲ್ಲಿ ಪೊಲೀಸರಿಗೆ ಇಂತಹ ಅಟ್ರಾಸಿಟಿಗಳನ್ನು ಇನ್ನೂ ಹೆಚ್ಚಾಗಿ ಉಪಯೋಗಿಸಲು ಪರ್ಮಿಷನ್ ನೀಡಲಾಗಿದೆಯಷ್ಟೇ.

ಉದಾಹರಣೆಗೆ, ಕೋಕಾದಡಿ ಬಂಧನವಾದ ಹದಿನೈದು ದಿನಗಳ ಬದಲಿಗೆ 30 ದಿನಗಳಲ್ಲಿ ಎಫ್‌ಐಆರ್ ಸಲ್ಲಿಸಬಹುದು. ಅಂತೆಯೇ ಬಂಧನವಾದ ಅರವತ್ತು ದಿನಗಳ ಬದಲಿಗೆ ತೊಂಭತ್ತು ದಿನಗಳ-ಒಳಗೆ ಹಾಗೂ ವಿಶೇಷ ಅನುಮತಿ ಪಡೆದರೆ 180 ದಿನಗಳ ಒಳಗೆ (ಆರು ತಿಂಗಳು) ಚಾರ್ಜ್‌ಶೀಟ್ ಸಲ್ಲಿಸಬಹುದು. ಈ ಅವಧಿಯಲ್ಲಿ ವಿಚಾರಣೆಗಾಗಿ ಪೊಲೀಸರು ಆರೋಪಿಯನ್ನು ಯಾವಾಗ ಬೇಕಾದರೂ ತಮ್ಮ ಕಸ್ಟಡಿಗೆ ತೆಗೆದುಕೊಳ್ಳಬಹುದು. ಈ ಕಾನೂನು ಭಾರತದ ಸಂವಿಧಾನ ನಾಗರಿಕರಿಗೆ ಕೊಟ್ಟಿರುವ ಹಕ್ಕುಗಳಿಗೆ ಮಾತ್ರವಲ್ಲ, ಭಾರತವು ಸಹಿ ಹಾಕಿರುವ ಅನೇಕ ಅಂತರರಾಷ್ಟ್ರೀಯ ನೀತಿ-ಸೂತ್ರಗಳಿಗೂ ವಿರುದ್ಧವಾಗಿದೆ. ಅದರಲ್ಲೂ ವಿಶೇಷವಾಗಿ, ಇದು ಅಂತರರಾಷ್ಟ್ರೀಯ ನಾಗರಿಕ ಹಕ್ಕು ನೀತಿ ಸೂತ್ರ (ಐಸಿಸಿಪಿಆರ್)ಗಳಿಗೆ ವಿರುದ್ಧವಾಗಿದೆ. ಇದು ವಾಸ್ತವದಲ್ಲಿ ಆರೋಪಿಗಳಿಗೆ ವಿಚಾರಣೆಯ ಹೆಸರಿನಲ್ಲಿ ಚಿತ್ರಹಿಂಸೆ ಕೊಡುವುದಕ್ಕೆ ಪೊಲೀಸರಿಗೆ ಕೊಟ್ಟಿರುವ ಪರ್ಮಿಷನ್ ಎಂದರೆ ತಪ್ಪಲ್ಲ.

ವ್ಯವಸ್ಥಿತ ಅಪರಾಧ ಎಂದರೇನು?

ಈ ಕಾನೂನಿನ ಪ್ರಕಾರ, "ವ್ಯವಸ್ಥಿತ ಅಪರಾಧವೆಂದರೆ, ವ್ಯವಸ್ಥಿತ ಅಪರಾಧಿಗಳ ಕೂಟದ ಸದಸ್ಯನಾಗಿರಲಿ ಅಥವಾ ಅಂತಹ ಕೂಟದ ಪರವಾಗಿಯಾಗಲೀ ಒಬ್ಬನೇ ಅಥವಾ ಜಂಟಿಯಾಗಿ ತನಗಾಗಿ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಅಥವಾ ದಂಗೆಯನ್ನು ಉತ್ತೇಜಿಸುವುದಕ್ಕಾಗಿ ಆರ್ಥಿಕ ಪ್ರಯೋಜನವನ್ನು ಪಡೆಯುವ ಅಥವಾ ಅನುಚಿತ ಹಣಕಾಸಿನ ಅಥವಾ ಇತರೆ ಅನುಕೂಲಗಳನ್ನು ಪಡೆಯುವ ಉದ್ದೇಶದಿಂದ ಹಿಂಸೆಯ ಬಳಕೆಯ ಮೂಲಕ ಅಥವಾ ಹಿಂಸೆಯ ಬೆದರಿಕೆ ಮೂಲಕ ಅಥವಾ ಭಯೋತ್ಪಾದನೆ ಅಥವಾ ಬಲಾತ್ಕಾರ ಅಥವಾ ಇತರೆ ಕಾನೂನುಬಾಹಿರ ವಿಧಾನಗಳ ಮೂಲಕ ಕೈಗೊಳ್ಳುವ, ಮುಂದುವರೆಯುತ್ತಿರುವ ಕಾನೂನುಬಾಹಿರ ಚಟುವಟಿಕೆ".


ಇಲ್ಲಿ 'ದಂಗೆಯ ಉತ್ತೇಜನ' ಎಂಬ ಪದವನ್ನು ಬಳಸಿ ಪೊಲೀಸರು ಯಾರ ಮೇಲೆ ಬೇಕಾದರೂ ಈ ಕಾನೂನನ್ನು ಪ್ರಯೋಗಿಸಬಹುದು. ಉದಾಹರಣೆಗೆ ನಾಳೆ ಯಾವುದೋ ಒಬ್ಬ ವ್ಯಕ್ತಿ 'ನಕ್ಸಲೀಯ ಸಮಸ್ಯೆ ಕಾನೂನು ಸುವ್ಯವಸ್ಥೆಯ ಸಮಸ್ಯೆಯಲ್ಲ, ಅದೊಂದು ಸಾಮಾಜಿಕಾರ್ಥಿಕ ಸಮಸ್ಯೆ' ಎಂದು ಹೇಳಿದರೂ ಸಾಕು, ಈ ರೀತಿಯ ಅರ್ಥಬರುವಂತೆ ಯಾವುದೋ ಪತ್ರಕರ್ತ ಒಂದು ಲೇಖನ ಬರೆದರೂ ಸಾಕು, ಅಥವಾ ಒಂದು ಭಾಷಣ ಮಾಡಿದರೂ ಸಾಕು, ಅದನ್ನೇ ನಕ್ಸಲೀಯ ದಂಗೆಯ ಉತ್ತೇಜನ ಎಂದು ವ್ಯಾಖ್ಯಾನಿಸಿ ಅಂಥವರ ಮೇಲೆ ಈ ಕಾನೂನನ್ನು ಪ್ರಯೋಗಿಸುವ ಅಧಿಕಾರ ಪೊಲೀಸರಿಗಿರುತ್ತದೆ.

ದುಷ್ಪ್ರೇರಣೆ ಎಂದರೇನು?


ಈ ಕಾನೂನಿನ ಪ್ರಕಾರ ಜನಪರ ಕಾಳಜಿ ಹೊಂದುವುದೂ ದುಷ್ಪ್ರೇರಣೆ ಎಂದಾಗುತ್ತದೆ. ಅಂದರೆ ಜನಪರ ಚಳವಳಿಯೊಂದರಲ್ಲಿ ಭಾಗವಹಿಸುವುದು ಅಥವಾ ಅಂತ[illegible] ಚಳವಳಿಯೊಂದಕ್ಕೆ ಬೆಂಬಲ ಸೂಚಿಸುವುದೂ ಕೂ[illegible] ದುಷ್ಪ್ರೇರಣೆಯಾಗುತ್ತದೆ. ಈ ಚಳವಳಿ ನಕ್ಸಲೀಯ ಚಳವಳಿಯೇ ಆಗಿರಬೇಕೆಂದೇನೂ ಇಲ್ಲ, ತಮ[illegible] ಮೂಲಭೂತ ಅಗತ್ಯಗಳಿಗಾಗಿ ಜನಸಾಮಾನ್ಯರು ನಡೆಸು[illegible] ಸ್ವಯಂಪ್ರೇರಿತ ಚಳವಳಿ ಆದರೂ ಸಾಕು. ಈ ಕೆಳ[illegible] ಪ್ರಾವಿಷನ್‌ಗಳನ್ನೇ ಗಮನಿಸಿ:

"ಯಾವುದೇ ಒಬ್ಬ ವ್ಯಕ್ತಿ ಒಂದು ವ್ಯವಸ್ಥಿತ ಅಪರಾ[illegible] ವನ್ನು ಅಥವಾ ವ್ಯವಸ್ಥಿತ ಅಪರಾಧಕ್ಕೆ ಪೂರ್ವಸಿದ[illegible] ಮಾಡಿಕೊಡುವ ಕೃತ್ಯವನ್ನು ನಡೆಸುವ ಸಂಚು ಮಾಡಿದ[illegible] ಅಥವಾ ನಡೆಸಲು ಯತ್ನಿಸಿದರೆ ಅಥವಾ ಪ್ರತಿಪಾದಿಸಿದ[illegible] ದುಷ್ಪ್ರೇರಿಸಿದರೆ ಅಥವಾ ಗೊತ್ತಿದ್ದೂ ಅನುಕೂ[illegible] ಮಾಡಿಕೊಟ್ಟರೆ ಐದು ವರ್ಷಗಳ ಅವಧಿಗೆ ಕಡಿ[illegible] ಯಿಲ್ಲದಂತೆ ಆದರೆ, ಅಜೀವಾವಧಿಗೆ ವಿಸ್ತರಿಸಬಹುದಾ[illegible] ಕಾರಾಗೃಹವಾಸ ಶಿಕ್ಷೆಗೆ ಮತ್ತು ಐದು ಲಕ್ಷ ರೂ.ಗಳ[illegible] ಕಡಿಮೆಯಿಲ್ಲದಂತೆ ಜುಲ್ಮಾನೆಗೆ ಗುರಿಯಾಗತಕ್ಕದ್ದು".

* "ಯಾವುದೇ ಒಬ್ಬ ವ್ಯಕ್ತಿಯು ಒಂದು ವ್ಯವ[illegible]



ಈ ಕಾನೂನು ಭಾರತದ ಸಂವಿಧಾನ ನಾಗರಿಕರಿಗೆ ಕೊಟ್ಟಿರುವ ಹಕ್ಕುಗಳಿಗೆ ಮಾತ್ರವಲ್ಲ, ಭಾರತವು ಸಹಿ ಹಾಕಿರುವ ಅನೇಕ ಅಂತರರಾಷ್ಟ್ರೀಯ ನೀತಿ- ಸೂತ್ರಗಳಿಗೂ ವಿರುದ್ಧವಾಗಿದೆ. ಅದರಲ್ಲೂ ವಿಶೇಷವಾಗಿ, ಇದು ಅಂತರರಾಷ್ಟ್ರೀಯ ನಾಗರಿಕ ಹಕ್ಕು ನೀತಿ ಸೂತ್ರ (ಐಸಿಸಿಪಿಆರ್)ಗಳಿಗೆ ವಿರುದ್ಧವಾಗಿದೆ. ಇದು ವಾಸ್ತವದಲ್ಲಿ ಆರೋಪಿಗಳಿಗೆ ವಿಚಾರಣೆಯ ಹೆಸರಿನಲ್ಲಿ ಚಿತ್ರಹಿಂಸೆ ಕೊಡುವುದಕ್ಕೆ ಪೊಲೀಸರಿಗೆ ಕೊಟ್ಟಿರುವ ಪರ್ಮಿಷನ್ ಎಂದರೆ ತಪ್ಪಲ್ಲ.





ಅಪರಾಧಗಳ ಕೂಟಕ್ಕೆ ಯಾವುದೇ ರೀತಿಯಲ್ಲಿ ನೆರವು ನೀಡುತ್ತಿದ್ದಾನೆಂಬ ಬಗ್ಗೆ ತಿಳಿವಳಿಕೆಯಿದ್ದರೆ ಅಥವಾ ಅದನ್ನು ನಂಬುವುದಕ್ಕೆ ಕಾರಣವಿದ್ದರೆ ಅಥವಾ ಅಂತಹ ವ್ಯಕ್ತಿಯೊಡನೆ ಸಂಪರ್ಕವಿರುವುದು"

* "... ವ್ಯವಸ್ಥಿತ ಅಪರಾಧಿಗಳ ಕೂಟದಿಂದ ಯಾವುದೇ ದಾಖಲೆಯನ್ನು ಅಥವಾ ವಿಷಯವನ್ನು ಪಡೆಯುವುದು, ಪ್ರಕಟಿಸುವುದು ಅಥವಾ ಹಂಚುವುದು"....

ಎಲ್ಲವೂ ಈ ಕಾಯ್ದೆಯಡಿ ಅಪರಾಧವಾಗುತ್ತದೆ.

ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಇಲ್ಲಿ ಜನಸಾಮಾನ್ಯರು ತಮ್ಮ ನ್ಯಾಯಸಮ್ಮತ ಬೇಡಿಕೆಗಳ ಈಡೇರಿಕೆಗಾಗಿ ಸಂಘಟನೆ ಕಟ್ಟಿಕೊಂಡು ಹೋರಾಡುವುದನ್ನೂ 'ವ್ಯವಸ್ಥಿತ ಅಪರಾಧ', 'ಸಂಘಟಿತ ಅಪರಾಧ' ಎಂದು ವ್ಯಾಖ್ಯಾನಿಸಿ ಅವರನ್ನು ಬಂಧಿಸಬಹುದು. ಅಲ್ಲದೇ, ಅಂತಹ ಚಟುವಟಿಕೆಗಳಲ್ಲಿ ಭಾಗವಹಿಸದಿದ್ದರೂ ಅಂಥವರ ಪರವಾಗಿ ಒಂದು ಮಾತನ್ನಾಡಿದರೂ ಅದನ್ನೇ 'ಸಂಘಟಿತ ಅಪರಾಧಕ್ಕೆ ದುಷ್ಪ್ರೇರಣೆ' ಎಂದು ವ್ಯಾಖ್ಯಾನಿಸಿ ಅಂಥವರನ್ನು ಬಂಧಿಸುವ ಅಧಿಕಾರ ಪೊಲೀಸರಿಗಿರುತ್ತದೆ.

ಎರಡನೆಯದಾಗಿ, ಇಲ್ಲಿ ಯಾವುದೇ ಒಬ್ಬ ವ್ಯಕ್ತಿಯ ಮೇಲೆ ಈ ಕಾನೂನು ಪ್ರಯೋಗಿಸುವುದಕ್ಕೆ ಆ ವ್ಯಕ್ತಿ "ಸಂಘಟಿತ ಅಪರಾಧದಲ್ಲಿ ಭಾಗವಹಿಸಿದ್ದಾನೆ ಎಂಬುದಕ್ಕಾಗಲೀ ಅಥವಾ ಅಂತಹ ಚಟುವಟಿಕೆಯಲ್ಲಿ ಭಾಗವಹಿಸುವವರಿಗೆ ಬೆಂಬಲಿಸುತ್ತಿದ್ದಾನೆ ಎಂಬುದಕ್ಕಾಗಲೀ ನಿಖರವಾದ ಮಾಹಿತಿ ಇರಲೇಬೇಕೆಂದೇನೂ ಇಲ್ಲ, ಅವನು ಹಾಗೆ ಮಾಡುತ್ತಿದ್ದಾನೆ ಎಂಬುದನ್ನು 'ನಂಬಲು ಕಾರಣವಿದ್ದರೆ' ಸಾಕು, ಅವರ ಮೇಲೆ ಈ ಕಾನೂನನ್ನು ಪ್ರಯೋಗಿಸಬಹುದು.

ಅಂದರೆ, ಸಂಘಟಿತ ಅಪರಾಧ ಚಟುವಟಿಕೆಗಳಿಗೆ ಬೆಂಬಲಿಸುತ್ತಿದ್ದಾನೆಂಬುದನ್ನು 'ನಂಬಲು ಕಾರಣವಿದೆ' ಎಂದು ಹೇಳಿ ಯಾವುದೇ ವ್ಯಕ್ತಿಯ ಮೇಲೆ ಪೊಲೀಸರು ಕೇಸು ದಾಖಲಿಸಬಹುದು! 'ನಂಬಲು ಕಾರಣ' ಏನಿದೆ ಎಂಬುದು ಗೊತ್ತಾಗುವುದು ಪೊಲೀಸರು ಆ ವ್ಯಕ್ತಿಯನ್ನು ಬಂಧಿಸಿದ ಎರಡು ವರ್ಷಗಳ ನಂತರ ವಿಶೇಷ ಕೋರ್ಟು ನಡೆಸುವ ವಿಚಾರಣೆಯ ನಂತರ ಮಾತ್ರವೆ!

ಮೂರನೆಯದಾಗಿ, ಈ ಕಾನೂನಿನ ಪ್ರಕಾರ ವ್ಯವಸ್ಥಿತ ಅಪರಾಧ ಕೂಟ ಎಂದು ಪೊಲೀಸರು ಯಾರನ್ನು ಭಾವಿಸಿದ್ದಾರೋ ಆ ಸಂಘಟನೆಗಳ ದಾಖಲೆಗಳನ್ನು (ಕರಪತ್ರಗಳು, ಪತ್ರಿಕಾ ಹೇಳಿಕೆಗಳು ಇತ್ಯಾದಿ) ಹೊಂದುವುದು, ಅವುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದು, ಹಂಚುವುದು – ಎಲ್ಲವೂ ಅಪರಾಧವಾಗುತ್ತದೆ. ಅಂದರೆ, ಇತ್ತೀಚೆಗೆ ನಕ್ಸಲೀಯ ಸಂಘಟನೆಗಳು ಹಲವಾರು ಸಾಮಾಜಿಕಾರ್ಥಿಕ ವಿಷಯಗಳ ಬಗ್ಗೆ ತಮ್ಮದೇ ಆದ ನಿಲುವುಗಳನ್ನು ಈ-ಮೇಲ್ ಮೂಲಕ, ಕರಪತ್ರಗಳ ಮೂಲಕ, ಪತ್ರಿಕಾ ಹೇಳಿಕೆಗಳ ಮೂಲಕ ಪ್ರಚಾರ ಮಾಡುತ್ತಿವೆ. ಹಲವಾರು ಸಂದರ್ಭಗಳಲ್ಲಿ ನಿಮಗಿಷ್ಟವಿಲ್ಲದಿದ್ದರೂ ಅಂತಹ ಕರಪತ್ರಗಳು, ಈ-ಮೇಲ್‌ಗಳು ನಿಮಗೆ ಬಂದು ತಲುಪಬಹುದು. ಅದನ್ನೇ 'ಸಂಘಟಿತ ಅಪರಾಧಕ್ಕೆ ದುಷ್ಪ್ರೇರಣೆ' ಎಂದು ಹೇಳಿ ನಿಮ್ಮ ಮೇಲೆ ಈ ಕಾನೂನನ್ನು ಪ್ರಯೋಗಿಸುವ ಅಧಿಕಾರ ಪೊಲೀಸರಿಗಿರುತ್ತದೆ!

ಇನ್ನೊಂದು ವಿಚಿತ್ರ ಎಂದರೆ, ಈ ಕಾನೂನನ್ನು ಜಾರಿಗೆ ತಂದಿರುವುದು ಮಾಫಿಯಾ, ಮಾದಕ ವಸ್ತು ಸ್ಮಗ್ಲಿಂಗ್ ಮತ್ತು ಕಳ್ಳ ಸಾಗಾಣಿಕಾ ಕೂಟಗಳನ್ನು ಮಟ್ಟಹಾಕುವುದಕ್ಕೆ ಎಂದು ಸರ್ಕಾರ ಹೇಳುತ್ತಿದೆ. ಆದರೆ [illegible] ಕಳ್ಳಸಾಗಾಣಿಕಾ ಕೂಟಗಳು, ಸ್ಮಗ್ಲರ್‌ಗಳು [illegible]ಗಳನ್ನು, ಪ್ರಚಾರ ಸಾಹಿತ್ಯಗಳನ್ನು ಇಟ್ಟುಕೊಂಡಿರುತ್ತಾರೆಯೇ? ಪ್ರಚಾರ, ಪ್ರದರ್ಶನ, ದಾಖಲೆಗಳ ಹಂಚಿಕೆ [illegible] ಚಟುವಟಿಕೆಗಳನ್ನು ನಡೆಸುವುದು ಸಾಮಾಜಿಕ ಸಂಘಟನೆಗಳೇ ಹೊರತು ಸ್ಮಗ್ಲರ್‌ಗಳಲ್ಲ.

ಹೀಗಾಗಿ ಸ್ಮಗ್ಲರ್‌ಗಳನ್ನು ಮಟ್ಟಹಾಕುವುದಕ್ಕೆ ಈ ಕಾನೂನನ್ನು ರಚಿಸಲಾಗಿದೆ ಎಂದು ಸರ್ಕಾರ ಹೇಳುತ್ತಿದ್ದರೂ ವಾಸ್ತವದಲ್ಲಿ ಅದು ರಚಿತವಾಗಿರುವುದೇ ಸಂಘಟಿತ ಜನಪ್ರತಿರೋಧವನ್ನು ಮಟ್ಟಹಾಕುವುದಕ್ಕೆ!

ತಪ್ಪೊಪ್ಪಿಗೆಯೇ ಸಾಕ್ಷಿ!

ಇದು ಅಪ್ರಜಾತಾಂತ್ರಿಕ ವಿಧಾನದ ಪರಾಕಾಷ್ಠೆ. ಪೊಲೀಸರ ಕಸ್ಟಡಿಯಲ್ಲಿರುವಾಗ ಪೊಲೀಸರು ಕೊಡುವ ಚಿತ್ರಹಿಂಸೆಗಳನ್ನು ತಾಳಲಾರದೇ ಆರೋಪಿಯು ಅನೇಕ ಬಾರಿ ತಾನು ಅಪರಾಧವೆಸಗದಿದ್ದರೂ ಅದನ್ನು ತಾನೇ ಮಾಡಿದ್ದು ಎಂದು ಒಪ್ಪಿಕೊಳ್ಳುತ್ತಾನೆ. ಅದನ್ನು ಪೊಲೀಸರು ನ್ಯಾಯಾಲಯದಲ್ಲಿ ಹಾಜರುಪಡಿಸಬಹುದಾದರೂ ಅದನ್ನೇ ಸಾಕ್ಷಿ ಎಂದು ಪರಿಗಣಿಸಲು ಸಾಧ್ಯವಿಲ್ಲ, ತಾನು ಪೊಲೀಸರ ಬಲವಂತಕ್ಕೆ ಹಾಗೆ ಒಪ್ಪಿಕೊಂಡಿದ್ದೇನೆಂದು ಹೇಳುವ ಅವಕಾಶ ಆರೋಪಿಗೆ ಇರುತ್ತದೆ. ಇದು ಸಾಮಾನ್ಯವಾಗಿ ಇನ್ನಿತರ ಕಾನೂನುಗಳಲ್ಲಿರುವ ಅವಕಾಶ.


ಆದರೆ ಕೋಕಾ ಕಾನೂನಿನಲ್ಲಿರುವುದು ಇದಕ್ಕೆ ತೀರಾ ವಿರುದ್ಧವಾದದ್ದು, ಕೋಕಾ ಕಾನೂನಿನ 19ನೇ ನಿಯಮದ ಪ್ರಕಾರ "ಒಬ್ಬ ಪೊಲೀಸ್ ಸೂಪರಿಂಟೆಂಡೆಂಟ್ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಯೆದುರು ಆರೋಪಿಯು ಲಿಖಿತ, ಕ್ಯಾಸೆಟ್‌ಗಳಂತಹ ತಾಂತ್ರಿಕ ಸಾಧನಗಳ ಮೇಲೆ ಅಭಿಲೇಖಿಸಿರುವ ತಪ್ಪೊಪ್ಪಿಗೆಯನ್ನು" ನ್ಯಾಯಾಲಯ ಸಾಕ್ಷಿ ಎಂದೇ ಪರಿಗಣಿಸುತ್ತದೆ! ಆರೋಪಿಯನ್ನು ಆರು ತಿಂಗಳ ಕಾಲ ವಿಚಾರಣೆಯಿಲ್ಲದೇ ಪೊಲೀಸರ ವಶದಲ್ಲಿರಿಸಿಕೊಳ್ಳುವ ಅವಕಾಶವಿರುವುದರಿಂದ ಈ ಸುದೀರ್ಘ ಅವಧಿಯಲ್ಲಿ ಬೇಕಾದಷ್ಟು ಚಿತ್ರಹಿಂಸೆ ಕೊಟ್ಟು ತಮಗೆ ಬೇಕಾದಂತೆ ತಪ್ಪೊಪ್ಪಿಗೆಗಳನ್ನು ಬರೆಸಿಕೊಳ್ಳುವುದಕ್ಕೆ ಪೊಲೀಸರಿಗೆ ನೀಡಿರುವ ಪರವಾನಗಿಯಲ್ಲದೇ ಮತ್ತೇನೂ ಅಲ್ಲ.

ಈ ಕಾನೂನಿನ 14 ಮತ್ತು 15ನೇ ಅಂಶಗಳೂ ಕೂಡ ಅಷ್ಟೇ ಅಪ್ರಜಾತಾಂತ್ರಿಕವಾಗಿವೆ. ವ್ಯಕ್ತಿಯೊಬ್ಬನ ವೈಯಕ್ತಿಕ ಖಾಸಗೀ ಜೀವನಕ್ಕೆ ಧಕ್ಕೆ ತಾರದಿರುವುದು ಈ ಸಂವಿಧಾನ ಸರ್ಕಾರಗಳಿಗೆ ಮಾಡಿರುವ ತಾಕೀತು. ಆದರೆ ಇದನ್ನೆಲ್ಲಾ ಕೋಕಾ ಕಾಯಿದೆ ಗಾಳಿಗೆ ತೂರುತ್ತದೆ. ಈ ಕಾನೂನಿನ 14 ಮತ್ತು 15ನೇ ಅಂಶಗಳ ಪ್ರಕಾರ ಆರೋಪಿ ಎಂದು ಪೊಲೀಸರು ಭಾವಿಸುವ ವ್ಯಕ್ತಿಯ ವೈರ್‌ಲೆಸ್, ಮೊಬೈಲ್, ಎಲೆಕ್ಟ್ರಾನಿಕ್ ದೂರಸಂಪರ್ಕ ಸಾಧನ ಮುಂತಾದವುಗಳನ್ನು ಕದ್ದು ಆಲಿಸಲು ಪೊಲೀಸರಿಗೆ ಅನುವು ಮಾಡಿಕೊಡುತ್ತದೆ.

ಆಸ್ತಿ-ಪಾಸ್ತಿ ಮುಟ್ಟುಗೋಲು!

ಪ್ರಾಯಶಃ ಬ್ರಿಟಿಷರೂ ಇಷ್ಟೊಂದು ಕ್ರೂರಿಗಳಾಗಿರಲಿಲ್ಲವೇನೋ? ಈ ಕಾನೂನಿನ 21ನೇ ಅಂಶದ ಪ್ರಕಾರ "ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ದೋಷ ಸಿದ್ಧಿಯಾಗಿರುವಲ್ಲಿ... ಯಾವುದೇ ಚರ ಅಥವಾ ಸ್ಥಿರ ಆಸ್ತಿಯನ್ನು ಮುಕ್ತವಾಗಿ ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲಾಗತಕ್ಕದ್ದು" ಎಂದು ಘೋಷಿಸಬಹುದಾಗಿದೆ! ಅಷ್ಟೇ ಏಕೆ, ಯಾವುದೇ ವ್ಯಕ್ತಿಯನ್ನು ಈ ಅಧಿನಿಯಮದಡಿಯಲ್ಲಿ ತಲೆಮರೆಸಿಕೊಂಡಿದ್ದಾನೆಂದು ನ್ಯಾಯಾಲಯ ಉದ್ಘೋಷಿಸಿದಲ್ಲಿ ಅಂಥ ವ್ಯಕ್ತಿಯ ಆಸ್ತಿಪಾಸ್ತಿಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಬಹುದು!

ಈ ಕಾನೂನಿನಡಿಯಲ್ಲಿ ಅಪರಾಧ ಎಂದರೇನು, ಅಪರಾಧಿ ಎಂದರೆ ಯಾರು, ಅವನ ವಿಚಾರಣೆ ಹೇಗೆ ನಡೆಯುತ್ತದೆ ಎಂಬುದನ್ನು ಈಗಾಗಲೇ ನಾವು ಮೇಲೆ ಚರ್ಚಿಸಿದ್ದೇವೆ. ಇದರಲ್ಲಿ ನಿರಪರಾಧಿಗಳನ್ನೂ ಕೂಡ ಅಪರಾಧಿಗಳನ್ನಾಗಿ ಮಾಡಬಹುದಾದ ಅವಕಾಶಗಳೇ ಜಾಸ್ತಿಯಾಗಿರುವುದರಿಂದ ನಿರಪರಾಧಿಗಳಿಗೆ ಶಿಕ್ಷೆಯ ಜೊತೆಗೆ ಅವರ ಆಸ್ತಿಪಾಸ್ತಿಗಳನ್ನೂ ಕಿತ್ತುಕೊಂಡು ಅವರನ್ನು ನಿರ್ಗತಿಕರನ್ನಾಗಿ ಮಾಡುವ ಅಪಾಯವಿರುತ್ತದೆ.



ಪೊಲೀಸ್ ಅತ್ಯಾಚಾರಿಗಳಿಗೆ ರಕ್ಷಣೆ

ಆರೋಪಿಯ ವಿಚಾರಣೆಯನ್ನು ಗೌಪ್ಯವಾಗಿ ರಹಸ್ಯ ಸ್ಥಳದಲ್ಲಿ ನಡೆಸುವ ಅಧಿಕಾರವನ್ನು ಈ ಕಾನೂನು ಪೊಲೀಸರಿಗೆ ನೀಡುತ್ತದೆ. ಅಂದರೆ, ಈ ಅವಧಿಯಲ್ಲಿ ಆರೋಪಿಯು ತನ್ನ ವಕೀಲರನ್ನು, ಸಂಬಂಧಿಗಳನ್ನು ಭೇಟಿ ಮಾಡುವ ಹಕ್ಕನ್ನೂ ನಿರಾಕರಿಸುತ್ತದೆ. ಇದು ಪೊಲೀಸರ ಮಿತಿಮೀರಿದ ದೌರ್ಜನ್ಯಗಳಿಗೆ ಕಾರಣವಾಗುತ್ತದೆಯಲ್ಲದೇ ಆರೋಪಿಯ ನ್ಯಾಯಬದ್ಧ ಹಕ್ಕನ್ನೂ ಕಿತ್ತುಕೊಂಡಂತಾಗುತ್ತದೆ.

ಈಗಾಗಲೇ ವಿವರಿಸಿರುವಂತೆ ಪೊಲೀಸರು ತಮಗೆ ಬೇಕಾದ ತಪ್ಪೊಪ್ಪಿಗೆಯನ್ನು ಪಡೆಯುವುದಕ್ಕೆ ಆರೋಪಿಗಳನ್ನು ಎಂಥ ಚಿತ್ರಹಿಂಸೆಗೂ ಗುರಿಪಡಿಸುವ ಸಾಧ್ಯತೆಯಿರುತ್ತದೆ. ಆದರೆ ಅಂತಹ ಅತ್ಯಾಚಾರಿಗಳಿಗೆ ಈ ಕಾನೂನು ರಕ್ಷಣೆಯೊದಗಿಸುತ್ತದೆ. ಇದರ 27ನೇ ಅಂಶದ ಪ್ರಕಾರ, "ಈ ಅಧಿನಿಯಮದಡಿಯಲ್ಲಿ ಅಥವಾ ಅದರಡಿಯಲ್ಲಿ ರಚಿತವಾದ ಯಾವುದೇ ನಿಯಮದಡಿಯಲ್ಲಿ ಹೊರಡಿಸಿದ ಯಾವುದೇ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕೆ ರಾಜ್ಯ ಸರ್ಕಾರದ ವಿರುದ್ಧ ಅಥವಾ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ, ಪ್ರಾಧಿಕಾರಿಯ ವಿರುದ್ಧ ದಾವೆ ಅಥವಾ ಕಾನೂನು ವ್ಯವಹಾರ ನಡೆಸತಕ್ಕದ್ದಲ್ಲ" ಎಂದು ಹೇಳಲಾಗಿದೆ. ಇದರ ಅರ್ಥ ಏನು? ಪೊಲೀಸರು ನಿಮಗೆ ಚಿತ್ರಹಿಂಸೆ ಕೊಟ್ಟಿದ್ದರೂ ಅವರ ವಿರುದ್ಧ ನೀವು ನ್ಯಾಯಾಲಯದಲ್ಲಿ ದಾವೆ ಹೂಡುವಂತಿಲ್ಲ, ಇದು ಪೊಲೀಸರು ನಡೆಸುವ ಅತ್ಯಾಚಾರಗಳಿಗೆ ಒತ್ತಿದ ಇನ್ನೊಂದು ಪರವಾನಗಿಯ ಮುದ್ರೆಯಲ್ಲದೇ ಮತ್ತೇನೂ ಅಲ್ಲ.

ಅಂತಿಮವಾಗಿ ಈ ಕಾನೂನಿನಡಿಯಲ್ಲಿ ಬರುವ ಪ್ರಕರಣಗಳನ್ನು ವಿಶೇಷ ಕೋರ್ಟುಗಳೇ ಇತ್ಯರ್ಥ ಮಾಡಬೇಕು. ಈಗಿರುವ ಕೋರ್ಟುಗಳಲ್ಲಿರುವ ಸಾಮಾನ್ಯ ಪ್ರಕರಣಗಳೇ ಹತ್ತಾರು ವರ್ಷಗಳಿಂದ ಇತ್ಯರ್ಥವಾಗದೇ ಬಾಕಿ ಉಳಿದಿವೆ. ಈಗ ಈ ಪ್ರಕರಣಗಳನ್ನು ಬಗೆಹರಿಸಲು ವಿಶೇಷ ಕೋರ್ಟುಗಳು ಬೇಕೆಂದರೆ ಅವುಗಳ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಮತ್ತು ಹೈಕೋರ್ಟ್ ಮುಂದಾಗಬೇಕು. ಅಲ್ಲಿಯತನಕ ಆರೋಪಿಗಳು ಯಾವುದೇ ವಿಚಾರಣೆಯಿಲ್ಲದೇ ಜೈಲಿನಲ್ಲಿ ಅಥವಾ ಪೊಲೀಸ್ ಕಸ್ಟಡಿಯಲ್ಲಿ ಚಿತ್ರಹಿಂಸೆ ಅನುಭವಿಸುತ್ತಿರಬೇಕು. ಇದು ನ್ಯಾಯನಿರಾಕರಣೆಯ ಒಂದು ತಂತ್ರವಲ್ಲದೇ ಮತ್ತೇನು?

ಸಾರಾಂಶೀಕರಿಸಿ ಹೇಳುವುದಾದರೆ, ಈ ಕಾಯಿದೆಯನ್ನು ತಂದಿರುವುದು ಸಮಾಜದಲ್ಲಿರುವ ಯಾವುದೇ ರೀತಿಯ ವ್ಯವಸ್ಥಿತ ಅಥವಾ ಸಂಘಟಿತ ಪ್ರತಿರೋಧವನ್ನು ಹತ್ತಿಕ್ಕುವುದಕ್ಕಾಗಿಯೇ ವಿನಃ ಭಯೋತ್ಪಾದನೆ ನಿಗ್ರಹಿಸಲು ಅಲ್ಲ ಎಂಬುದು ಮೇಲ್ನೋಟಕ್ಕೇ ಅರ್ಥವಾಗುತ್ತದೆ. ಮುಂದೊಂದು ದಿನ ಸಾಮಾನ್ಯ ನಾಗರಿಕರು, ಪ್ರಜಾತಂತ್ರ ಪ್ರೇಮಿಗಳು ತಮ್ಮ ನ್ಯಾಯಬದ್ಧ ಹಕ್ಕುಗಳಿಗಾಗಿ ಸಂಘಟಿತಗೊಂಡರೆ ಅದನ್ನೇ 'ಸಂಘಟಿತ ಅಪರಾಧ' ಎಂದು ಕರೆಯುವ ಅಪಾಯ ಇದ್ದೇ ಇದೆ. ಇದು ಈತನಕ ನಾಗರಿಕರು ಹೋರಾಟ ಮಾಡಿ ಗೆದ್ದುಕೊಂಡಿರುವ ಕನಿಷ್ಠ ಹಕ್ಕುಗಳನ್ನೂ ಕಿತ್ತುಕೊಂಡು ಇಡೀ ವ್ಯವಸ್ಥೆಯನ್ನು ಪೊಲೀಸ್ ರಾಜ್ಯವನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಇಟ್ಟಿರುವ ಒಂದು ಸ್ಪಷ್ಟ ಹೆಜ್ಜೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಹಾಗಾಗಿ, ಎಲ್ಲಾ ನಾಗರಿಕರು, ಪ್ರಜಾತಂತ್ರವಾದಿಗಳು ಸಂಘಟಿತರಾಗಿ ಹೋರಾಡುವ ಮೂಲಕವೇ ಈ ಸಂಘಟಿತ ಅಪರಾಧ ನಿಯಂತ್ರಣಾ ಕಾಯಿದೆಯನ್ನು ರದ್ದುಗೊಳಿಸುವುದಕ್ಕೆ ಒತ್ತಡ ಹೇರಬೇಕು. ಕೇಂದ್ರ ಸರ್ಕಾರ ಈ ಹಿಂದೆ ಟಾಡಾ ಮತ್ತು ಪೋಟಾ ಕಾಯಿದೆಗಳನ್ನು ಜಾರಿಗೆ ತಂದಾಗ ಇಡೀ ದೇಶದ ಜನ ಅಭೂತಪೂರ್ವವಾಗಿ ಅದನ್ನು ಪ್ರತಿಭಟಿಸಿದ್ದರು. ಅದರ ಪರಿಣಾಮವಾಗಿಯೇ ಆ ಕಾಯಿದೆಗಳನ್ನು ರದ್ದುಮಾಡಬೇಕಾಯಿತು. ಈಗ ಕರ್ನಾಟಕದ ಜನರಿಗೆ ಉಳಿದಿರುವುದೂ ಅದೊಂದೇ ದಾರಿ. ■

ಚಿಕುನ್‌ಗುನ್ಯಾ ಚರಿತ್ರೆ

ಚಿಕುನ್‌ಗುನ್ಯಾ ಉಡುಪಿ-ದಕ್ಷಿಣ ಕನ್ನಡದಿಂದ ಸಾವಕಾಶವಾಗಿ ಉತ್ತರ ಕನ್ನಡ ಜಿಲ್ಲೆಯತ್ತ ತನ್ನ ಬಾಹುಗಳನ್ನು ಚಾಚಿದೆ. ಚಿಕುನ್‌ಗುನ್ಯಾವೂ ಮತ್ತೊಂದು 'ಹದ್ದುಮೀರು ಕೇಸ್' ತರವೇ ಆಗಿ ಸರ್ಕಾರ-ಮಾಧ್ಯಮಗಳು ಮರೆತು ಹೋದಂತೆ ಕಾಣುತ್ತಿದೆ. ನಾವಿರುವ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಹಳ್ಳಿ ಕವಲಕ್ಕಿಯಲ್ಲಿ ನಿತ್ಯ ನೂರಾರು ರೋಗಿಗಳನ್ನು ನೋಡುತ್ತಲಿದ್ದೇವೆ. ಸಪ್ತ ಕೈಲಾದ ಮಟ್ಟಿಗೆ ಸುತ್ತಮುತ್ತಲ ಶೌಚಶಾಲೆಗಳಿಗೆ ಹೋಗಿ ಕಾಯಿಲೆ-ಪರಿಹಾರ-ತಡೆಗಟ್ಟುವಿಕೆ ಬಗ್ಗೆ ಮಾತನಾಡಿ ಬರುತ್ತಿದ್ದೇವೆ. ಗುನ್ಯಾ ಬಗ್ಗೆ ಪುಟಗಟ್ಟಲೆ ಬರೆಯಬಹುದಾದಷ್ಟು ನೋವು ಜನರ ಬಳಿ, ಸರಕು ನನ್ನ ಬಳಿ ಇದೆ. ಅದನ್ನೆಲ್ಲ ಸೂಚ್ಯವಾಗಿ ಕವನದಲ್ಲಿ ಬರೆದಿದ್ದೇನೆ.

ಚಿಕುನ್‌ಗುನ್ಯಾಕ್ಕೆ ತುತ್ತಾಗಿ....

ಹಾರುವ ಬಣ್ಣದ ಚಿಟ್ಟೆ
ಹರಿವ ಕರಿ ಹುಳವಾಗಿದೆ
ಚುರುಕಿನ ಸಹಸ್ರಪದಿ
ನೋವಿನ ಪಾದಗಳನೆಣಿಸುತ್ತ
ಎಣ್ಣೆ ನೀವುತ್ತಲಿದೆ.
ಚಿಮ್ಮಿ ಹಾರದ ಕಪ್ಪೆ
ಶಿಲೆಯಾಗಿ ಕುಳಿತು
ಹಸಿವೆ ಬಾಯ್ತೆರೆದಂತಿದೆ.
ಗೊತ್ತು ಕುಳಿತ ಹಕ್ಕಿ
ನೋವಿನ ರಾಗ ಹಾಡುತ್ತಲೆ
ವಲಸೆ ದಾರಿ ಮರೆತಿದೆ.
ತೆವಳುವ ಹದಿನಾರರ ಪೋರಿಗೆ
ಸೈಕಲ್ ಸವಾರಿ, ಈಜು,
ಬೆಚ್ಚಿಸುವ ಕನಸಾಗಿದೆ.
* * * * * *



ಈ ಗುನ್ಯಾ ಗುನ್ನೆ
ನಮ್ಮ ತವರು
ಅಪ್ಪಿಕಾದ್ದೇ.....

ದೇವಲೋಕದಿಂದ
ಬಂದೆರಗಿದ ಶಾಪವಲ್ಲ
ಬೆಂಬಿಡದೆ ಅಂಟಿದ
ಜನ್ಮಾಂತರದ ಕರ್ಮವಲ್ಲ
ಹೆಮ್ಮರದಲಿ ಹೊಂಚಿ ಕುಳಿತ
ಬೇತಾಳವೂ ಅಲ್ಲ.
ಇದು
ಬೀಸುವ ಗಾಳಿಗೆ ಕಾದಿದ್ದ
ಬಗಲ ಬೇಕಿ
ನೆಲೆ ಸುಡುತಲೆ ಹರಡುತಿಹ
ಮಹಾ ಪಾತಕಿ.

■ ಡಾ. ಎಚ್.ಎಸ್. ಅನುಪಮಾ

ಸ್ವತಂತ್ರ ದಿನಾಚರಣೆಗೆ ಊರಜನ ಬರದಿಲ್ಲ ಯಾಕೆ?

ಊರಿನ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಂದ ಜುಮ್ಮಿ, ಬತುದೊಡ್ಡ ಜವಾಬ್ದಾರಿ ನಿರ್ವಹಿಸಿದ ರಾದಕಾರಣಿಯು ಮುಖಭಾವದಲ್ಲಿ ಕೂರುತ್ತಾ,

"ಅಲ್ಲಾ ಕಣ ಮಾವ, ಸ್ವತಂತ್ರ ದಿನಾಚರಣೆ ಮಾಡಕ್ಕೆ ಊರೋರು ಯಾರು ಬರದಿಲವಲ್ಲಾ, ಇವುರಿಗೇನು ಬಂದದೆ ಅಂತ?" ಎಂದಳು.

"ಯಾವತ್ತೂ ಹೋಗದೋರು ಇವತ್ಯಾಕೆ ಬಂದರ್ಲ?" ಎಂದ ಕಾಳಮಾವ.

ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ಪಂಚಾತಿ ಮೆಂಬ್ರಾಗದಕ್ಕಿಂತ ಮದ್ಲು ನೀನೆಲ್ಲೋಯಿದ್ದೆ? ಹೋಗ್ಲಿ ಸ್ವತಂತ್ರ ದಿನಾಚರಣೆ ಅನ್ನದೇನಾರ ನಿನಿಗೆ ಗೊತ್ತಿತ್ತೇ?" ಎಂದ ಉಗ್ರಿ. ಇದರಿಂದ ಸಿಟ್ಟುಗೊಂಡ ಜುಮ್ಮಿ,

"ನನಿಗೇನೂ ಗೊತ್ತಿರಲಿಲ್ಲ, ಗೊತ್ತಾಗಿರೋ ನಿಮ್ಮಂತ ಏಟು ಜನ ಬಂದುರ್ಲ?" ಇಸುಗೂಲಲ್ಲಿ ಓದಿರೋ ಯಾರಾರ ಬಂದು ನಾಕು ಮಾತಾಡಿದ್ರ?"

"ಬಂದು ಮಾತಾಡತಿದ್ರು ಕಣೆ, ಸ್ವತಂತ್ರ ದಿನಾಚರಣೆ ಅಂತ ನೀವೇನಾರ ಬಾಡು-ವಡೆಗಿಡೆ ಮಾಡಿಸಿದ್ರ? ಬರೀ ಕಾಫಿ ಬಿಸ್ಕತ್ತ ಕೊಟ್ರವ್ವ. ಆ ಬಿಸ್ಕತ್ತು ಹಲ್ಲಿಗೆ ವರಕಂಡವೇ ವರತು ವಟ್ಟವಳಿಕೋಗಲಿಲ್ಲ" ಎಂದು ಉಗ್ರಿ ನಕ್ಕ.

"ನೀವ್ಯಲ್ಲ ಬರ್ತೀರಿ ಅಂತ ಗೊತ್ತಿದ್ರೆ ಮಾಡಸೋರು ಕಂಡ್ರ."

"ಎಲ್ಲಿಂದ ತಂದು ಮಾಡ್ತೀರಿ? ಒಂದೊಂದು ಇಸುಗೂಲಿಗೂ ಪಂಚಾತಿಯಿಂದ ನೂರ್ರೂಪಾಯಿ ಕೊಟ್ಟವ್ರಂತೆ. ನೂರ್ರೂಪಾಯಿಲೇನಾದತೆ? ಇವತ್ತಿನ ಲೆಕ್ಕದಲ್ಲಿ ನೂರ್ರೂಪಾಯಿಗೆ ಇಪ್ಪತ್ತೈದು ಕಾಫಿ ಬತ್ತವೆ. ಅದನೆ ಬೈಟು ಮಾಡಿದ್ರೆ ಐವತ್ತು ಜನ ಕುಡಿಬೌದು. ಅರ್ಧ ಕಾಫಿ ಕುಡಿಯಕ್ಕೆ ಅಲ್ಲಿಗಂಟ ಬರಕ್ಕೆ ಮರಿಯಾದಿ ಬ್ಯಾಡವೇನೆ?"

"ಊರ್‍ಯಲ್ಲ ಸೇರಿ ಖರ್ಚಾಕಿ ಮಾಡಬೇಕು ಕಂಡ್ರ."

"ಊರ್‍ಯಲ್ಲ ಸೇರಿ ಮಾಡಕ್ಕೆ ಅದೇನು ಈರಭದ್ರ ಸ್ವಾಮಿ ಹಬ್ಬವೇನೆ ಜುಮ್ಮಿ?" ಎಂದ ಸೀರ.

"ಅಂಗೆ ನೋಡಿದ್ರೆ ಊರ್‍ಯಲ್ಲ ಸೇರಿ ಮಾಡೋ ಅಂತ ಹಬ್ಬ ಕಣ ಮಾವ ಇದು. ಮನುಷ್ಯನಿಗೆ ಸ್ವಾತಂತ್ರ ಮುಖ್ಯ. ಅಂತ ಸ್ವಾತಂತ್ರವೇ ಇಲ್ಲದೆ ನಮ್ಮ ದೇಸದ ಜನ ನಳ್ಳಾಡ್ತಾಯಿದ್ರು. ಮಾತ್ಮ ಗಾಂಧಿನೇ ಇಲ್ದೆಯಿದ್ರೆ ಇನ್ನೂ ನಳ್ಳಬೇಕಾಗಿತ್ತು. ಇಂಗ್ರಿಸ್‌ನೋರು ಇನ್ನು ಇಲ್ಲೆ ಇದ್ರೆ ಏನೇನು ಕತೆ ಆಗದು ಗೊತ್ತೇ?" ಎಂದ ಉಗ್ರಿ. ತುಸು ಯೋಚಿಸಿದ ಕಾಳಮಾವ,

"ಏನೇ ಆಗ್ಲಿ ಅವುರೇ ಸರಿಕಂಡ್ರ. ಇಲ್ಲಿ ರಸ್ತೆ ಹೋಗಬೇಕು ಅಂದ್ರೆ ಹೋಗಲೇ ಬೇಕು, ಅದೇಟ ಗಲಾರ ಆಗ್ಲಿ, ಅದೇ ಇವತ್ತಂಗೆ ಮಾಡಕಾದತೇ?"

"ಆಗದಿಲ್ಲ ಬುಡು."

"ಅವುರ ಕಾಲ್ದಲ್ಲಿ ಕಟ್ಟಿರೊ ಕಟ್ಟಡ, ಸೇತುವೆ ಅಳ್ಳಾಡದಂಗವೆ, ಅದೆ ಈ ನನ ಮಕ್ಕಳು ಕಟ್ಟಿರೋ ಕಟ್ಟಡ ಕಸಗಂಡು ಬೀಳ್ತ ಅವೆ" ಎಂದ ಕಾಳಮಾವ.

"ನಾನು ನೀಲಿಗಿರಿಗೋಗಿದ್ದಾಗ ಬೈಳಿಕಾರ್‍ರ ನೋಡಿದ್ದೆ ಕಂಡ್ರ ಉಗ್ರಿ. ಆರಡಿ ಏಳಡಿ ಕಡಮೆ ಯಾರೂ ಇರಲಿಲ್ಲ, ಅವುರಂಗಿರದ್ಕೆ ನಮ್ಮವ್ಯಲ್ಲ ಹೆದ್ರಿಕಂಡು, ನಡಬಗ್ಗಿಸಿಗಂಡು, ಬಾಲ ಅಲ್ಲಾಡಿಸಿಗಂಡು, ವದ್ದಾಡವು ಅಂಗೆಯ" ಎಂದ ಸೀರ.

"ಇಂಗ್ಲಿಸ್‌ನೋರು ನ್ಯನಸಿಕೊಂಡು ನೀವೇನೊ ಹೊಗಳತಿರಿ ಕಣಮಾವ. ಆ ಸೂಳೆಮಕ್ಳು ಮಾಡಿರೊ ಕ್ಯಲಸ ನ್ಯನಿಸಿಗಂಡ್ರೆ ಇವತ್ತೂ ನನ್ನ ರಗತ ಕುದಿತದೆ. ಇವತ್ತೇನಾರ ಅವುರು ಇಲ್ಲಿದ್ರೆ ಬಾಂಬಾಕಿಬುಡತಿದ್ದೆ" ಎಂದ ಉಗ್ರಿ.

"ಯವ್ವೆ ಎವ್ವೆ, ಕಣ್ಣನೆ ಮಳ್ಳುಸ್ತಿಯಲ್ಲ ಅವುರೇನು ಮಾಡಿದ್ರು ನಿಂಗೇ?" ಎಂದಳು ಜುಮ್ಮಿ.

"ನನಿಗೆ ಏನ್ನಾರ ಮಾಡಬೇಕೇನೆ. ನಿನಿಗೇನ್ನಾರ ಮಾಡಿದ್ರೆ ನನಿಗೆ ಸಿಟ್ಟು ಬರದಿಲ್ವೆ, ಹೋಗಲಿ ನಮ್ಮೂರೋರಿಗೇನಾರ ಮಾಡಿದ್ರೆ ಸಿಟ್ಟು ಬರದಿಲ್ವೆ? ಬಗತ್ ಸಿಂಗಂತ ಒಂದುಡುಗ ಇದ್ದಕಣೆ. ಯಂಗಿದ್ದಾ ಅಂತೀ, ನಮ್ಮ ನಾಗಣ್ಣನ ಮಗ ಲೋಕೇಶ್ ಇರಲಿಲ್ವೇ ಅಂಗಿದ್ದ. ಅವುನ್ನ ತಗಂಡೋಗಿ ನ್ಯಾಣಾಕಿದ್ರು. ಕಿತ್ತೂರು ಚನ್ನಮ್ಮನನ್ನ ಸಾಯಗಂಟ ಜೈಲಲ್ಲಿ ಮಡಗಿದ್ರು. ಸಂಗೊಳ್ಳಿ ರಾಯಣ್ಣನ್ನ ಯಡೆಮುರಿ ಕಟ್ಟಿತಂದು ಆಲ್ದಮರಕೆ ನ್ಯಾತಾಕಿದ್ರು. ಒಂದೂವರದಿನ ನ್ಯಾತಾಡ್ತು ಅವುನ ಸರೀರ. ಇಂತ ಕ್ಯಲಸ ಮಾಡಿದ ಸೂಳೆ ಮಕ್ಕಳ ಹೊಗಳತ ಕುಂತಿದ್ದಿರಿ" ಎಂದ ಉಗ್ರಿ.

"ನಮಿಗೇನು ಗೊತ್ಲ? ಇವತ್ತು ಯಲ್ಲಾ ಗೊತ್ತಾಯ್ತ ಅದೆ. ಅವತ್ತು ಏನು ಗೊತ್ತಾಯ್ತಿತ್ತೂ? ಸಂತಿಗೋದ್ರು ಮಾತ್ರ ಏನಾರ ತಿಳಿಯದು. ಇಲ್ದಿದ್ರೆ ಅದೂ ಇಲ್ಲ" ಎಂದ ಕಾಳಮಾವ.



"ಏನು ತಿಳಿಬೇಕಾಗಿತ್ತು, ದ್ವಡಪ್ಪ ನಿಂಗೆ? ಯಾವ ಮ್ಯಾಟ್ರು ಹೇಳು, ಕಮಾನ್ ಟೆಲ್ ಮಿ" ಎಂದ ವಾಟಿಸ್ಸೆ.

"ಆಗೊ ಇವುನೊಬ್ಬ ಇಲ್ದೆಯಿದ್ರೆ ಇನ್ನ ಇದಾಗದು."

"ಇವುನು ಬುಡು. ಟಿವಿ ನೈನಿದ್ದಂಗೆ. ವತ್ತೆರೆ ಏನಾರ ಸಿಕ್ತು ಅಂದ್ರೆ ಸಂಜೆಗಂಟ ಅದ್ನೆ ಹೇಳಿಕಂಡು ತಿರುಗ್ತನೆ. ಹೋಗಿ ಬಂದು ಮೂಗಿ ಮಾಡಿದ ಅಂತವ" ಎಂದ ಉಗ್ರಿ ನಕ್ಕ.

"ಮಿಸ್ಟರ್ ಉಗ್ರಿ, ನನ್ನನ್ನು ಟಿವಿ ನೈನ್‌ಗೆ ಓಲಿಕೆ ಮಾಡಬ್ಯಾಡ. ಯಾವ ನ್ಯೂಸಿನಿಂದ ನನಿಗೇನೂ ಆಗಬೇಕಾಗಿಲ್ಲ, ನ್ಯೂಸು ನನಿಗೆ ಹೂಸಿಗೆ ಸಮಾನ. ಅದೇ ಟಿವಿ ನೈನಿಗೆ ನ್ಯೂಸು ಹೊಟ್ಟೆಪಾಡು. ಇವತ್ತು ಮನುಸ್ರು ವಟ್ಟೆಪಾಡಿಗೆ ಏನ್ನಾರ ಮಾಡಕ್ಕೆ ತಯಾರಾಗ್ಯವುರೇ. ಅದರಲ್ಲು ಜವಾಬ್ದಾರಿ ಇರೋ ಜನಗಳೇ ಅಂಗಾದ್ರೆ ಇನ್ನ ಅಪಾಪೋಲಿಗಳು ಸುಮ್ಮನಿರತರ ಹೇಳು?"

"ಇಲ್ಲ ಬುಡು."

"ಯಾವ ಸುದ್ದಿಯಿಂದ ಏನು ಪರಿಣಾಮ ಆಗತ್ತೆ ಅನ್ನದ ಥಿಂಕ್ ಮಾಡಬೇಕು. ಸುಮ್ಮಸುಮ್ಮನೆ ಗ್ಯಾಸ್ ಟ್ರಬಲ್ಲಿರೋರು ಬುಟ್ಟಂಗೆ ಬುಡದಲ್ಲ" ಎಂದ ವಾಟಿಸ್ಸೆ.

"ಅದಿರ್ಲಿ, ನಮ್ಮ ಜುಮ್ಮಿ ಎತ್ತಿರೋ ಮಾತಿಗೆ ಉತ್ತರ ಕೊಡೊ."

"ಏನಕ್ಕ ನಿನ್ನ ಪ್ರಾಬ್ಲಮ್ಮು, ಇನ್ನು ಸಾಲು ಆಗಿಲ್ವ?"

"ಅವುಳು ಪ್ರಾಬ್ಲಮ್ಮಲ್ಲ ಕಣೋ, ಸ್ವಾತಂತ್ರ್ಯ ದಿನಾಚರಣೆ ದಿನ ಇಸುಗೂಲುಡುಗ್ರು ಬುಟ್ರು ಇನ್ಯಾರು ಬರದಿಲವಲ್ಲಾ ಅಂತ ಬೇಜಾರಾಗ್ಯವುಳೆ."

"ಇಟೀಸ್ ವೆರಿ ಸಿಂಪಲ್ ಕಣಕ್ಕ. ಇಸುಗೂಲುಡ್ರಿಗೆ ಸ್ವಾತಂತ್ರ ಬೇಕು. ಅದ್ಕೆ ಅವು ಸ್ವಾತಂತ್ರ ದಿನಾಚರಣೆಲಿ ಭಾಗವಯಿಸ್ತವೆ. ಆದ್ರೆ ನಮಿಗೆ ಅದರ ಅಗತ್ಯಯಿಲ್ಲ."


"ಏನೇನೂ ಹೇಳಬ್ಯಾಡ ಅವುಳಿಗೆ, ಸರಿಯಾಗೇಳೋ."

"ನೋಡಕ್ಕ, ಸ್ವಾತಂತ್ರ ದಿನಾಚರಣೆಗೂ ನಮ್ಮೂರಿಗೂ ಸಮಂಧವೇಯಿಲ್ಲ. ನಮ್ಮೂರೆ ಬ್ಯಾರೆ. ಅಂಗೆ ನೋಡಿದ್ರೆ ನಮ್ಮೂರಂಗೆ ಈ ದೇಸದಲ್ಲಿ ಸಾವುರಾರು ಹಳ್ಳಿಗಳಿದ್ದೋ. ಅವಕ್ಕೂ ಸ್ವಾತಂತ್ರ ದಿನಾಚರಣೆಗೂ ಯಾವ ಸಮಂಧವೂ ಇಲ್ಲ."

"ಇದೇನ್ಲಾ ಹಿಂಗತೀ"

"ನಿಜವಾಗ್ಲು ಕಣಕ್ಕ. ಇಂಡಿಯಾ ದೇಸದಲ್ಲಿ ಮೇಲ ಜಾತಿಗಳು ಕೆಳಜಾತಿಗಳ ಆಳತಾಯಿದ್ದೊ ಕಣಕ್ಕ. ಬ್ರಾಂಬಿಗೆ, ಒಕ್ಕಲಿಗರು ಭಯಭಕ್ತಿಯಿಂದ ನ್ಯಡಕಳೋರು, ಅವುರಿಗೆ ಇನ್ನಲ್ಲ ಕಿರು ಜಾತಿಗಳು ನ್ಯಡಕಳವು. ಇವುರ್‍ಯಲ್ಲಾರ ಸೇವೆನೂ ಹರಿಜನ್ರು ಮಾಡೋರು. ಅವುರಿಗಿಂತ್ಲೂ ಅತ್ಲಾಗಿ ಮಾದಿಗರಿದ್ರು. ಈ ತುದಿ ಬ್ರಾಹ್ಮಣ, ಆ ತುದಿ ಹರಿಜನ, ಹಿಂಗೆ ವಬ್ಬರಿಗ್ವಬ್ಬರು ಅಡಿಯಾಳಾಗಿ ಬದುಕಿರುವಾಗ, ಸ್ವಾತಂತ್ರ ಎಲ್ಲಿತ್ತು? ಅದ್ಯಾರಿಗಿತ್ತೂ ಅನ್ನದೆ ಮುಖ್ಯ. ನಮ್ಮೂರು ಪಟೇಲ ನಮ್ಮನ್ಯಲ್ಲ ಹೆದರುಸ್ತಿದ್ದ, ದಂಡ ಹಾಕತಿದ್ದ ಅವುನ್ನ ಇಂಗ್ರೀಸ್‌ನೋರು ಹೆದರಿಸ್ತಿದ್ರು. ದೇಸಕ್ಕೆ ಸ್ವಾತಂತ್ರ ಸಿಕ್ಕಿದ್ದಾಗ ಪಟೇಲನಿಗೆ

ಸುಭಾಶ್‌ಚಂದ್ರ ಬೋಸ್ ಜೊತೆಗಾರ ಕನ್ನಡಿಗ ಅತ್ತಾವರ ಎಲ್ಲಪ್ಪ



ಎಲ್ಲಪ್ಪ ಹಾಗೂ ಪತ್ನಿ ಸೀತಮ್ಮ

ನಮ್ಮ ದೇಶದ ಸ್ವಾತಂತ್ರ್ಯ ಚಳವಳಿ ಎಂದ ಕೂಡಲೇ ನಮಗೆ ಪಕ್ಕನೆ ನೆನಪಿಗೆ ಬರುವುದು ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ನೇತಾಜಿ ಸುಭಾಶ್ ಚಂದ್ರ ಬೋಸ್, ಬಾಬು ರಾಜೇಂದ್ರ ಪ್ರಸಾದ್, ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್, ಮೌಲಾನಾ ಅಬ್ದುಲ್ ಕಲಾಂ ಆಜಾದ್ ಮತ್ತು ರಾಸ್ ಬಿಹಾರಿ ಬೋಸ್ ಇವೇ ಮುಂತಾದ ಹೆಸರುಗಳು. ಈ ಮಹನೀಯರುಗಳಿಗೆ ಸಮಕಾಲೀನರಾಗಿ ಹುತಾತ್ಮರಾದ ಭಗತ್ ಸಿಂಗ್, ಚಂದ್ರಶೇಖರ್ ಆಜಾದ್‌ರವರ ಗುಣಗಳನ್ನು ಮೈಗೂಡಿಸಿಕೊಂಡ ಒಬ್ಬ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಮತ್ತು ಅಪ್ರತಿಮ ದೇಶಭಕ್ತ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರೇ ಆಗಿದ್ದರು ಎಂಬ ವಿಚಾರ ಪ್ರಾಯಶಃ ಹೆಚ್ಚಿನವರಿಗೆ ಗೊತ್ತಿಲ್ಲ, ಅವರೇ ಅತ್ತಾವರ ಎಲ್ಲಪ್ಪನವರು.

ಯಾರೀ ಎಲ್ಲಪ್ಪ?.

ಅತ್ತಾವರ ಬಾಲಣ್ಣ ಮತ್ತು ವೆಂಕಮ್ಮನವರ ಐದು ಮಂದಿ ಮಕ್ಕಳಲ್ಲಿ ಎಲ್ಲಪ್ಪನವರು ಮೊದಲಿಗರು. 1912 ರಲ್ಲಿ ಉಳ್ಳಾಲದ ಉಪ್ಪುಗುಡ್ಡೆಯಲ್ಲಿ ಮಧ್ಯಮ ವರ್ಗದ ಗಾಣಿಗ ಕುಟುಂಬದಲ್ಲಿ ಜನಿಸಿದ ಎಲ್ಲಪ್ಪನವರ ಪ್ರಾಥಮಿಕ ವಿದ್ಯಾಭ್ಯಾಸವು ಅತ್ತಾವರದ ಮುನಿಸಿಪಲ್ ಶಾಲೆಯಲ್ಲಿ ನಡೆದಿದ್ದು ಅವರು ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮಂಗಳೂರಿನ ಹೃದಯಭಾಗದಲ್ಲಿರುವ ಮಿಲಾಗ್ರಿಸ್ ಹೈಸ್ಕೂಲಿನಲ್ಲಿ ಪೂರ್ಣಗೊಳಿಸಿದರು. ಎಲ್ಲಪ್ಪನವರು ಬಿ.ಎ. ಆನರ್ಸ್ ಪರೀಕ್ಷೆಯಲ್ಲಿ ಚಿನ್ನದ ಪದಕದೊಂದಿಗೆ ಉತ್ತೀರ್ಣರಾದ ಕೂಡಲೇ ಆಗಿನ ಬ್ರಿಟಿಷ್ ಸರ್ಕಾರ ಅವರಿಗೆ ಸಹಾಯಕ ಕಲೆಕ್ಟರ್ ಹುದ್ದೆಯನ್ನು ಕೊಡ ಮಾಡಿತ್ತು, ಆದರೆ ಎಲ್ಲಪ್ಪನವರು ಜಿಲ್ಲಾ ಕಲೆಕ್ಟರ್ ಹುದ್ದೆಯನ್ನು ನೀಡಿದರೆ ಮಾತ್ರ ತಾನು ಆ ಹುದ್ದೆಯನ್ನು ನಿರ್ವಹಿಸುತ್ತೇನೆಂದು ಹೇಳಿ ಬ್ರಿಟಿಷರ ಸಹಾಯಕ ಕಲೆಕ್ಟರ್ ಹುದ್ದೆಯನ್ನು ನಯವಾಗಿ ನಿರಾಕರಿಸಿಬಿಟ್ಟರು. ಈ ಮಧ್ಯೆ 1937 ರಲ್ಲಿ ಅವರು ಊರಿಗೆ ಬಂದಾಗ ಹತ್ತಿರದ ಸಂಬಂಧಿ ಸೀತಮ್ಮ ಎಂಬವರೊಂದಿಗೆ ಅವರ ವಿವಾಹ ನಡೆಯಿತು. ವಿವಾಹದ ನಂತರ 17 ದಿನಗಳು ಮಾತ್ರ ಹೆಂಡತಿಯ ಜೊತೆ ಸಂಸಾರ ಮಾಡಿದ್ದರು. ಆಮೇಲೆ ಅವರು ನೇರವಾಗಿ ಇಂಗ್ಲೆಂಡಿಗೆ ಹೋಗಿ ತನ್ನ ಅಪಾರ ಬುದ್ಧಿಶಕ್ತಿ ಮತ್ತು ಶೈಕ್ಷಣಿಕ ಮೇಧಾವಿತನದಿಂದ 1939 ನೇ ಇಸವಿಯಲ್ಲಿ ಬಾರ್-ಎಟ್-ಲಾ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದ ಕೆಲವೇ ಭಾರತೀಯರ ಪೈಕಿ ಎಲ್ಲಪ್ಪ ಮೊದಲಿಗರು.

ಎಲ್ಲಪ್ಪನವರು ಬಾರ್- ಎಟ್-ಲಾ ಮುಗಿಸಿ ಊರಿಗೆ ಬಂದರಾದರೂ ಇಲ್ಲಿ ಕೇವಲ ಕೆಲವೇ ದಿನಗಳಿದ್ದು ಇಲ್ಲಿಂದ ಸಿಂಗಾಪುರಕ್ಕೆ ತೆರಳಿ ಅಲ್ಲಿ ತಮ್ಮ ವೃತ್ತಿ ಜೀವನ (ಬ್ಯಾರಿಸ್ಟರ್)ವನ್ನು ಪ್ರಾರಂಭಿಸಿದರು. ತಮ್ಮ ಉತ್ಕೃಷ್ಟ ಮಟ್ಟದ ಕಾನೂನು ಜ್ಞಾನ ಮತ್ತು ಜನರೊಂದಿಗಿನ ಒಡನಾಟದಿಂದಾಗಿ ಕೆಲವೇ ಸಮಯದಲ್ಲಿ ಸಿಂಗಾಪುರದ ಗಣ್ಯ ವ್ಯಕ್ತಿಯೆನಿಸಿಕೊಂಡರು. ಅಪಾರ ಆಸ್ತಿಪಾಸ್ತಿಗಳ ಒಡೆಯರೂ ಆಗಿದ್ದು ಇಂಡಿಯನ್ ನ್ಯಾಷನಲ್ ಆರ್ಮಿಯ ಚರಿತ್ರೆಯಲ್ಲಿ ಎಲ್ಲಪ್ಪನವರ ಪ್ರಸ್ತಾಪ ಬಂದಾಗ "ಕುಬೇರ ಎಲ್ಲಪ್ಪ ಸಾಹೇಬರು" ಎಂದೇ ಪ್ರಸ್ತಾಪಿಸಲಾಗಿದೆ. ಈ ಸಮಯದಲ್ಲಿ ಅಚಾನಕ್ ನೇತಾಜಿ ಸುಭಾಶ್‌ಚಂದ್ರ ಬೋಸ್ ಮತ್ತು ಕ್ರಾಂತಿಕಾರಿ ರಾಸ್ ಬಿಹಾರಿ ಬೋಸ್‌ರವರ ಸಂಪರ್ಕಕ್ಕೆ ಬಂದ ಎಲ್ಲಪ್ಪನವರು ನಂತರ ಹಿಂದಿರುಗಿ ನೋಡಲಿಲ್ಲ, ನೇತಾಜಿ ಸುಭಾಶ್ ಚಂದ್ರ ಬೋಸರ ಕ್ರಾಂತಿಕಾರಿ ಸಿದ್ಧಾಂತಗಳಿಗೆ ಮಾರುಹೋಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನ್ನನ್ನು ಸಂಪೂರ್ಣ ತೊಡಗಿಸಿಕೊಂಡರು. ನೇತಾಜಿ ಸುಭಾಶ್ ಚಂದ್ರ ಬೋಸರು ಇಂಡಿಯನ್ ನ್ಯಾಷನಲ್ ಆರ್ಮಿಯ ಮುಖ್ಯಸ್ಥರಾದಾಗ ಅವರಿಗೆ ಅತ್ತಾವರ ಎಲ್ಲಪ್ಪನವರು ಬಲಗೈ ಬಂಟರಾಗಿದ್ದರು. ಅಷ್ಟೇ ಅಲ್ಲ, ಇಂಡಿಯನ್ ಇಂಡಿಪೆಂಡೆನ್ಸ್ ಲೀಗಿನ ಅತ್ಯಂತ ಪ್ರಭಾವಿ ಮತ್ತು ಬಲಿಷ್ಠವಾದ ಸಿಂಗಾಪುರ ಘಟಕದ ಅಧ್ಯಕ್ಷರೂ ಆಗಿದ್ದರು. ಸಿಂಗಾಪುರದಲ್ಲಿಯೇ 1943 ರ ಅಕ್ಟೋಬರ್ 21 ರಂದು ನೇತಾಜಿ ಸುಭಾಸ್‌ಚಂದ್ರ ಬೋಸರು ಸ್ವತಂತ್ರ್ಯ ಭಾರತ ಪ್ರಾಂತೀಯ ಸರ್ಕಾರ (ಆಜಾದ್ ಹಿಂದ್ ಸರ್ಕಾರ)ವನ್ನು ರಚಿಸುವಾಗ ನೇತಾಜಿಯವರು ಪ್ರಧಾನಮಂತ್ರಿಯಾಗಿ ಉಳಿದಂತೆ ಇತರ ಮಂತ್ರಿಗಳಾಗಿ ಎ.ಸಿ. ಚಟರ್ಜಿ, ಎಸ್.ಎ. ಅಯ್ಯರ್, ಅಜೀಜ್ ಅಹಮ್ಮದ್, ಕ್ಯಾಪ್ಟನ್ ಲಕ್ಷ್ಮಿ, ಶಾನ್ ನವಾಜ್, ಗುಲ್ಜಾರ್‌ಸಿಂಗ್, ಬೋಸ್ಲೆ ಸೇರಿದಂತೆ 20 ಮಂದಿಯ ಕೇಂದ್ರ ಸಚಿವ ಸಂಪುಟದಲ್ಲಿ ಅತ್ತಾವರ ಎಲ್ಲಪ್ಪನವರು ಪ್ರಮುಖರಾಗಿದ್ದರು. ಇಂಡಿಯನ್ ನ್ಯಾಷನಲ್ ಆರ್ಮಿಯ ಮೇಲುಸ್ತುವಾರಿಯನ್ನು ಎಲ್ಲಪ್ಪನವರಿಗೆ ನೀಡಲಾಗಿತ್ತು, ಐ.ಎನ್.ಎ. ಸೈನ್ಯದ ಖರ್ಚು ವೆಚ್ಚಗಳನ್ನು ನಿಭಾಯಿಸಲಿಕ್ಕಾಗಿ ಮಲಯ, ಸಿಂಗಾಪುರ, ಬರ್ಮಾ ಮುಂತಾದ ಹಲವು ದೇಶಗಳಲ್ಲಿರುವ ಭಾರತೀಯರಿಂದ ಧನ ಮತ್ತು ಒಡವೆಗಳನ್ನು ಸಂಗ್ರಹಿಸಿ "ಆಜಾದ್ ಹಿಂದ್ ನ್ಯಾಷನಲ್ ಬ್ಯಾಂಕ್"ನ್ನು ಸ್ಥಾಪಿಸಿದವರೇ ಅತ್ತಾವರ ಎಲ್ಲಪ್ಪನವರು.

ಸ್ವಾತಂತ್ರ್ಯ ಒಂದು ನೆನಪು

ಐ.ಎನ್.ಎ. ಕೇಂದ್ರ ಕಚೇರಿಯನ್ನು ಸಿಂಗಾಪುರದಿಂದ ರಂಗೂನಿಗೆ ಸ್ಥಳಾಂತರ ಮಾಡಿದ ನಂತರ ಎಲ್ಲಪ್ಪನವರ ಮೇಲಿನ ಹೊರೆ ಇನ್ನಷ್ಟು ಹೆಚ್ಚಿತು. ಆರ್ಥಿಕ ವಹಿವಾಟು, ಶಸ್ತ್ರಾಸ್ತ್ರ ಖರೀದಿ ವ್ಯವಹಾರಗಳನ್ನು ನೋಡಿಕೊಳ್ಳುವ ಜತೆಗೆ ಸಾರಿಗೆ ಮತ್ತು ಸರಬರಾಜು ಜವಾಬ್ದಾರಿಯು ಅವರದಾಯಿತು. ಸಿಂಗಾಪುರದಲ್ಲಿ ಎಲ್ಲಪ್ಪನವರು ವಾಸವಿದ್ದಾಗ ಕೆಲವೊಮ್ಮೆ ನೇತಾಜಿಯವರೇ ವಿಶೇಷ ಸಂದರ್ಭಗಳಲ್ಲಿ ಎಲ್ಲಪ್ಪನವರ ಮನೆಗೆ ಭೇಟಿ ಕೊಡುತ್ತಿದ್ದರು.

ತ್ತೀ ವರತೂ. ನಡುಗೆಲ್ಲಿ ಸಿಕ್ಸ್ಕೊ? ಅದ್ಕೆ ನಾವಿನ್ನು ಸ್ವಾತಂತ್ರ ದಿನಾಚರಣೆಲಿ ಗವಯಿಸ್ತಾಯಿಲ್ಲ, ಗೊತ್ತಾಯ್ತ ದ್ವಡಪ್ಪಾ?" ಎಂದ ವಾಟಿಸ್ಕೆ ಭಾಷಣ ಬಗಿಸಿದ ಗತ್ತಿನಲ್ಲಿ ಮುಖ ವರೆಸಿಕೊಂಡ.

"ಅಂತ ತಲೆತರಟೆ ಮಾತಾಡು ಅನ್ನು" ಎಂದ ಕಾಳ ಮಾವ.

"ನೋಡಪ್ಪ ನಾನು ಸತ್ಯವಾದ ಮಾತಾಡಿದ್ರೆ ನಮ್ಮ ದೊಡಪ್ಪ ತಲತರಟೆ ಅನ್ನನೆ. ಅದೇ ಯೂನಿವರ್ಸಿಟಿ ಪ್ರೊಫೆಸರ್ ಬಂದೇಳಿದ್ರೆ ಒಪ್ಕಿಗತ್ತನೆ."

"ಯೂನಿವರ್ಸಿಟಿ ಪ್ರೊಫೆಸರ್ರೇಳದು ಪುಸ್ತಕದ ಬದನೆಕಾಯಿ ಕಣೋ. ದೇಸು ತಿನ್ನಕ್ಕೆ ಬಂದತೆ? ಅದಲ್ಲ, ಸ್ವಾತಂತ್ರ ದಿನಾಚರಣೆ ಅರಬ್ಬದಂಗಾಗಬೇಕಾದ್ರೆ ಏನು ಮಾಡಬೇಕು ಅಂತ?"

"ಮಿಸ್ಟರ್ ಉಗ್ರಿ, ಸ್ವತಂತ್ರ ದಿನಾಚರಣೆ ಬಿಜೆಪಿಗಳಿಗೂ ವಸದೂ ಕೋ. ಅದ್ಕೆ ಬಾವುಟ ಆರಿಸಿ ಏನೇನೋ ಮಾತಾಡ್ತವೆ".

"ಅದ್ಯಾಕೇನೇನೋ ಮಾತಾಡಿದ್ದವ್ರೂ?"

"ಅವು ಕಾಲಾದಿಂದ ವಿರೋಧಿಸಿಗಂಡು ಬಂದವು. ಭಾವುಟ ಆರಿಸಿ ದೇಸದ ಬಗ್ಗೆ ಇಂಗ್ಲಿಸ್‌ನೋರ ಬಗ್ಗೆ ಮಾತಾಡಿ ಗೊತ್ತಿಲ್ಲ, ಅದ್ಕೆ ಅಂಗೆ ಆಡ್ತವೆ."

"ದೇಸದ ಬಗ್ಗೆ ಭಾಳ ಮಾತಾಡ ಕಲಿದ್ರೋ ಅಲವೇ?"

"ಅವ್ರುರ ಮಾತೆ ಬ್ಯಾರೇ ಕಣೋ ಉಗ್ರಿ. ಈ ದೇಸದ ಸ್ವಾತಂತ್ರಕ್ಕಾಗಿ ಯಾರು ಹೋರಾಡಿದ್ರು ಅಂತ ಕೇಳು, ಗಾಂಧಿ, ನೆಹರು, ಶಾಸ್ತ್ರಿ ಅಂತ ಸತ್ಯ ಏಳದಿಲ್ಲ ಅವ್ರುರು."

"ಇನ್ನೇನೇಳ್ತವೇ?"

"ವೀರ ಸಾವರ್‌ಕರ್, ಚಂದ್ರಶೇಖರ್ ಆಜಾದ್, ಹಾರ್ನಳ್ಳಿ ರಾಮಸ್ವಾಮಿ, ಕೃಷ್ಣಭಟ್ಟ ಅಂತವೆ ಕಣ್ಲೊ."

"ಅಂಗಂದವೇ?"

"ಗಾಡ ಪ್ರಾಮಿಸ್. ಅವರೆ ಬರಕಂಡಿರೋ ಸ್ವಾತಂತ್ರ ಹೋರಾಟದ ಸ್ಟರಿಲಿ ಕಾಂಗ್ರೆಸ್ಸಿನೋರು ವಬ್ರೂ ಇಲ್ಲ, ಇದ್ರು ಗಾಂಧಿಮಾತ್ಮನ ಬಗ್ಗೆ ಇದು ಸಾಲು ಇರತದಷ್ಟೇ. ಅದ್ಕೆ ನಮ್ಮ ರಾಜ್ಯದಲ್ಲಿ ಅವ್ರುರು ಮೊದ್ಲು ಬಾವುಟ ಹಾರಸಬೇಕಾದ್ರೆ ಏನು ಮಾತಾಡಾಕ್ಲೂ ಆಗದೆ ಬರೀ ಎಡೂರಪ್ಪನ ಬಜೆಟ್ ಮ್ಯಾಲೆ ಮಾತಾಡಿಬುಟ್ರೊಗ್ಯವೆ."

"ಹೋಗ್ಲಿ ಎಡೂರಪ್ಪನ ಬಜೆಟ್ಟು ಯಫೆಕ್ಟಿಗೆ ಬಂತೇನೋ?"

"ಇನ್ನೂ ಬಂದಿಲ್ಲ, ಮಳೆ ಬಂದಿದ್ರಿಂದ ಅವುನ ಸಮಸ್ಯೆ ಬಗೆಹರದವೆ. ಪ್ರಿ ಬಿಜೆಪಿ ಕಂಟ್ರಾಕ್ಟರ್ ಭಾಗ್ಯದ ಬಾಗಲು ತೆರಕಂಡವೆ."

"ಅದ್ಯಂಗೊ?"

"ಮಳೆ ಹೊಡತಕ್ಕೆ ರಸ್ತೆಗಳ್ಯಲ್ಲ ಹಾಳಾದೋ. ಅದರಿಂದ ಎಡೂರಪ್ಪ ಬಡ್ಲೆ ರಸ್ತೆ ಕಾಮಗಾರಿ ಮಂಜೂರು ಮಾಡ್ತನೆ. ಆಗ ಹಳೆ ಕಂಟ್ರಾಕ್ಟರ್ ಜಾಗ್ಲಿಗೆ ಬಿಜೆಪಿ ಕಂಟ್ರಾಕ್ಟರ್ ಬತ್ತರೆ. ಆದ್ರಿಂದ ಅವುರ ಪಾಲಿಗೆ ಬಿಜೆಪಿ ಬಜೆಟ್ ತುಂಬಾ ಯಫೆಕ್ಟಿಗೆ ಬಂದಂಗಾಯ್ತದೆ."

"ಎಡೂರಪ್ಪ ಇಲ್ಲೆಲ್ಲೋ ಬಂದಿದ್ನಂತಲ್ಲಾ?" ಎಂದ ಕಾಳ ಮಾವ.

"ಸೋಬಕ್ಕನ ಜ್ವತೆ ಬಂದು ಕನ್ನಂಬಾಡಿಗೆ ಬಾಗಿನ ಹಾಕಿಬುಟ್ರೋದ."

"ಯಾಕೋ ಇತ್ಲಗೆ ಜಾಸ್ತಿ ಬತ್ತನಲ್ಲಾ?"

"ಮೈಸೂರು ಉಸ್ತುವಾರಿ ಮಂತ್ರಿ ಸೋಬಕ್ಕ ಆಗಿರದ್ರಿಂದ ಬತ್ತನೆ!"

ಎಲ್ಲಪ್ಪನವರು ನೇತಾಜಿಯವರ ಜೊತೆಯಲ್ಲಿಯೇ ವಿಮಾನ ಅಪಘಾತದಲ್ಲಿ ಬಲಿಗೀಡಾದರೆಂದು ಮಾಧ್ಯಮಗಳಲ್ಲಿ ವರದಿ ಬಂದಿವೆ. ಆದರೆ ಐಎನ್.ಎ.ಯ ಝಾನ್ಸಿ ರೆಜಿಮೆಂಟಿನ ಕಮಾಂಡರಾದ ಕ್ಯಾಪ್ಟನ್ ಲಕ್ಷ್ಮಿಯವರು ಎಲ್ಲಪ್ಪನವರ ಕೊನೆಯ ದಿನಗಳನ್ನು ಹೀಗೆ ವಿವರಿಸಿದ್ದಾರೆ: "ನೇತಾಜಿಯವರು ವಿಮಾನದಲ್ಲಿ ಸಿಂಗಾಪುರಕ್ಕೆ ಪ್ರಯಾಣಿಸುವಾಗ ಎಲ್ಲಪ್ಪನವರು ಸೈನ್ಯಕ್ಕೆ ಆಹಾರ ಸರಬರಾಜು ಮಾಡುವ ಹೊಣೆ ಹೊತ್ತು ಬರ್ಮಾದಲ್ಲಿಯೇ ಉಳಿದರು. ಅಲ್ಲಿ ಕಾಡಿನ ಮಧ್ಯದಲ್ಲಿ ತಾತ್ಕಾಲಿಕವಾಗಿ ಆಸ್ಪತ್ರೆ ಆರಂಭಿಸಿ ಗಾಯಾಳು ಸೇನಾನಿಗಳಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಆಸ್ಪತ್ರೆಯು ಬ್ರಿಟಿಷರ ಬಾಂಬ್ ದಾಳಿಗೀಡಾಗಿ ಎಲ್ಲಪ್ಪನವರಿಗೆ ಗುಂಡಿನ ಚೂರುಗಳಿಂದ ಗಾಯವಾಗಿತ್ತು. ಗಾಯ ಕೊಳೆತು ಹುಣ್ಣಾಗಿ ನಡೆಯಲಿಕ್ಕಾಗದ ಎಲ್ಲಪ್ಪನವರನ್ನು ಕೈಗಾಡಿಯಲ್ಲಿ ಸಾಗಿಸುತ್ತಿದ್ದಾಗ ಬ್ರಿಟಿಷರ ಕೈಗೆ ಸಿಕ್ಕಿಬಿದ್ದರು. ಬಾಂಬ್ ದಾಳಿಯಿಂದ ಜರ್ಝರಿತರಾದ ಎಲ್ಲಪ್ಪ ಮತ್ತು ಅವರ ಆಪ್ತ ಸಹಾಯಕ ಮುತ್ತು ಎಂಬ ಕ್ರಿಶ್ಚಿಯನ್ ಹುಡುಗನನ್ನು ಬ್ರಿಟಿಷರು ಔಷಧಿ ಕೊಡಿಸುವ ಭರವಸೆ ನೀಡಿ ಪಕ್ಕದ ಹಳ್ಳಿಯ ಗುಡಿಸಲಿನಲ್ಲಿಟ್ಟರು. ಇದು ಜಪಾನ್ ಸೈನಿಕರ ಬಿಡಾರವಿರಬೇಕೆಂದು ಭಾವಿಸಿದ ಬ್ರಿಟಿಷ್ ಸೈನಿಕರು ಮದ್ದುಗುಂಡು ಸಿಡಿಸಿ ಬಿಡಾರವನ್ನು ಸುಟ್ಟಾಗ ಅದರಲ್ಲಿದ್ದ ಎಲ್ಲಪ್ಪನವರು ಸಜೀವ ಸುಟ್ಟು ಹೋದರು. ಎಲ್ಲಪ್ಪನವರ ಮರಣದ ಸುದ್ದಿ ಕೇಳಿ ಅವರ ಪತ್ನಿ ಸೀತಮ್ಮನವರು ನಾಗಳೂರಿನ ಮಹಮ್ಮಾಯಿ ದೇವಸ್ಥಾನದ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡರು. ಅಂತಹ ವೀರನ ಕುಟುಂಬ ದಯನೀಯ ಸ್ಥಿತಿಗೆ ತಲುಪಿತು. ವೆಂಕಮ್ಮ ತಮ್ಮ ಮಗ ಇವತ್ತು ಬರುತ್ತಾನೆ, ನಾಳೆ ಬರುತ್ತಾನೆ ಎಂದು ಹಂಬಲಿಸಿ ಕೊನೆಗೂ ಮಗನ ವ್ಯಥೆಯಲ್ಲಿಯೇ ಪ್ರಾಣ ಬಿಟ್ಟರು.

ಆದರೆ ಎಲ್ಲಪ್ಪನವರ ಅಳಿಯ (ತಂಗಿಯ ಮಗ) ಪ್ರಭಾಕರದಾಸ್ ಛಲ ಬಿಡದ ತ್ರಿವಿಕ್ರಮನಂತೆ ಭಗೀರಥ ಪ್ರಯತ್ನದಿಂದ ತೊಕ್ಕೊಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ 17 ರ ಪಕ್ಕದಲ್ಲಿ ನೇತಾಜಿ ಎಲ್ಲಪ್ಪ ಆಸ್ಪತ್ರೆಯನ್ನು ಹುತಾತ್ಮರ ಹೆಸರಿನಲ್ಲಿ ಪ್ರಾರಂಭಿಸಿ, ಈ ಆಸ್ಪತ್ರೆಯು 1998 ಅಕ್ಟೋಬರ್ 21 ರಂದು ಜ ಕ್ಯಾಪ್ಟನ್ ಲಕ್ಷ್ಮಿಯವರಿಂದಲೇ ಉದ್ಘಾಟಿಸಲ್ಪಟ್ಟಿದೆ. ಈ ಉದ್ಘಾಟನಾ ಸಮಾರಂಭದಲ್ಲಿ ಐಎನ್‌ಎ ಯೋಧ ಸುಂದರ್‌ರಾವ್ ಮತ್ತು ನೇತಾಜಿ ಸುಭಾಷ್ ಚಂದ್ರ ಬೋಸರ ಕಾರಿನ ಚಾಲಕ ಸ್ವಾಮಿ ಕೃಷ್ಣದಾಸ್ ಆಗಮಿಸಿರುವುದು ಒಂದು ವೈಶಿಷ್ಟ್ಯ. ಈ ಆಸ್ಪತ್ರೆಯು ಪ್ರಾರಂಭದಿಂದಲೇ ಪುತ್ರಿ ಡಾ. ಸುಜಯ ಪ್ರಭಾಕರ್‌ರವರ ಸುಪರ್ದಿಯಲ್ಲಿ ನಡೆಯುತ್ತಿದ್ದು ಜನಸಾಮಾನ್ಯರಿಗೆ ಉತ್ತಮ ಸೇವೆಯನ್ನು ಸಲ್ಲಿಸುತ್ತಿದೆ.


■ ವಿಜಯ ಕುಮಾರ್ ಬಂಡಿಕೊಟ್ಟಿ

ಮರೆಯುವ ಮುನ್ನ



■ ಪಿ. ಲಂಕೇಶ್ ನವೆಂಬರ್ 18, 1990

ಪ್ರತಿಮೆಯ ಬಳಿ




ಸಹಬಾಳ್ವೆ ತಮಾಷೆಗಲ್ಲ, ಯಾರನ್ನೋ ಮೆಚ್ಚಿಸಿ ತಲೆದೂಗಿಸುವುದಕ್ಕಾಗಿ ಅಲ್ಲ, ಸಹಬಾಳ್ವೆಯಿಂದ ದೇಶದ ಒಗ್ಗಟ್ಟು ಹೆಚ್ಚಿ ಇಲ್ಲಿಯ ಯುವಜನಾಂಗ ಹೊಸಸ್ಫೂರ್ತಿ, ಆದರ್ಶ ಪಡೆಯುತ್ತದೆ ಎಂಬುದು ಗಾಂಧೀಜಿಯ ನಂಬಿಕೆಯಾಗಿತ್ತು. ಈ ನಂಬಿಕೆಗಾಗಿ ಅವರು ತಮ್ಮ ಜೀವನವನ್ನೇ ತೆತ್ತರು. ಕೊಂದವರು ಯಾರೆಂದು ಎಲ್ಲರಿಗೆ ಗೊತ್ತು.

ಈ ಗಾಂಧೀಜಿಯನ್ನು ಕೊನೇಗಳಿಗೆಯವರೆಗೆ ದ್ವೇಷಿಸಿ 1947 ರ ಕೋಮುದಳ್ಳುರಿಗೆ, ರಕ್ತಪಾತಕ್ಕೆ ಕಾರಣರಾದವರೇ ಇವತ್ತು ಗಾಂಧೀಜಿಯ ಪ್ರತಿಮೆಯ ಬಳಿ ಹುತಾತ್ಮರಂತೆ ವರ್ತಿಸುತ್ತಿರುವುದು ಆಶ್ಚರ್ಯ. ಮೊನ್ನೆ ಯಡಿಯೂರಪ್ಪ, ರಾಮಚಂದ್ರಗೌಡ, ಶಂಕರಮೂರ್ತಿ ಮುಂತಾದವರು ತಮ್ಮ ಗುಂಪನ್ನು ಕಟ್ಟಿಕೊಂಡು ಬೆಂಗಳೂರು ಗಾಂಧೀ ಪ್ರತಿಮೆಯ ಬಳಿ ಮಹಾತ್ಮರ ಮರಿಗಳಂತೆ ಮಿಂಚಲೆತ್ನಿಸಿದ್ದು ನಮ್ಮ ರಾಜಕೀಯ ಎಂಥ ರಸಾತಳಕ್ಕಿಳಿದಿದೆ ಎಂಬುದನ್ನು ತೋರುತ್ತದೆ.


ಈ ವಿಷಮಗಳಿಗೆಯಲ್ಲಿ ವಿವೇಕವನ್ನು ಪೂರ್ತಿ ಕಳೆದುಕೊಳ್ಳದ ಎಲ್ಲರೂ ಒಗ್ಗಟ್ಟಾಗಿ ಈ ಸೋಗಲಾಡಿಗಳನ್ನು ಧೂಳೀಪಟ ಮಾಡದಿದ್ದರೆ ಈ ದೇಶಕ್ಕೆ ದುರಂತ ಕಾದಿದೆ.

ಉಡುಪಿ ಕೃಷ್ಣ ಮತ್ತು ಅಮೀರ್ ಹಮ್ಜಾ

ಇಲ್ಲಿ ಮೊನ್ನೆ ಒಂದು ಪತ್ರಿಕೆಯಲ್ಲಿ ಬಂದ ಸಂಧ್ಯಾ ಕಾರ್ನಾಡ್ ಎಂಬಾಕೆ ಬರೆದ ಟಿಪ್ಪಣಿಯೊಂದನ್ನು ಕಾಣಿಸಬೇಕು.




ಇಮಾಂ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ? ಹಾಗೆ..... ಅಮೀರ್ ಹಮ್ಜಾಗೂ ಉಡುಪಿ ಮಠಕ್ಕೂ ಏನು ಸಂಬಂಧ? ಇಂಥ ಪ್ರಶ್ನೆಗಳು ಭಾರತೀಯರ ಬದುಕಿನಲ್ಲಿ ಮತ್ತೆ ಮತ್ತೆ ಏಳುತ್ತವೆ. ಹಿಂದೂ ಮನೆಗಳಿಗಾಗಿ ಕಲಾತ್ಮಕವಾಗಿ ಕಲ್ಲುಕೆತ್ತುವ ಮುಸ್ಲಿಮರು, ಮುಸ್ಲಿಂ ಮಸೀದಿಯನ್ನು ಸುಂದರವಾಗಿ ಕಟ್ಟಿದ ಹಿಂದೂಗಳು- ಇಷ್ಟೇ ಅಲ್ಲ, ನಮ್ಮ ದಿನನಿತ್ಯದ ಒಡವೆ, ಆಸನ, ಪಾತ್ರೆ, ಕುರ್ಚಿ ಮುಂತಾದ ಎಲ್ಲವನ್ನೂ ಎಲ್ಲ ಜಾತಿಯ ಕಲಾವಿದರು, ಕಸಬುದಾರರು ಸೃಷ್ಟಿಸುತ್ತಾರೆ.



ಇದಕ್ಕೆ ಸ್ಫೂರ್ತಿ ಇಲ್ಲಿಯ ಜೀವನ, ಇಲ್ಲಿಯ ಜನರು. ಉಡುಪಿ ಮಠದಂಥ ಕಂದಾಚಾರದ ಜನರಿಂದ ಶೇಖ್ ಅಮೀರ್ ಹಮ್ಜಾನ ಕತೆ ಈಚೆಗೆ ಹೊರಬಂದಿದೆ. ಈ ಹಮ್ಜಾ ಸರಳ ಮನುಷ್ಯ, ಶ್ರೇಷ್ಠ ಕಲಾವಿದ, ಎಲ್ಲ ದೇವರ ಚೈತನ್ಯವನ್ನೂ ತನ್ನ ವ್ಯಕ್ತಿತ್ವದಲ್ಲಿ ಇಟ್ಟುಕೊಂಡವನು. 55 ವರ್ಷ ವಯಸ್ಸಿನ ಹಮ್ಜಾ ಉಡುಪಿಯ ಮಠದ ಬಾಗಿಲು, ರಥ, ಪಲ್ಲಕ್ಕಿಯ ಎಲ್ಲ ಬೆಳ್ಳಿಯ ಚಿತ್ರ ಕೆತ್ತಿದವನು, ಉಡುಪಿ ಕೃಷ್ಣನ ಒಡವೆ, ಕಿರೀಟದ ಬೆಳ್ಳಿಯ ಚಿತ್ರ ಬಿಡಿಸಿದವನು. ಇದನ್ನು ಬರೀ ಕಸಬುದಾರನಾಗಿ ಮಾಡಿದವನಲ್ಲ, ದೇವರ ಹಿನ್ನೆಲೆ, ಪುರಾಣ, ಆಕಾರ, ಕತೆಗಳನ್ನು ಅಭ್ಯಸಿಸಿ ತಿಳಿದು ಏಕಾಗ್ರತೆಯಿಂದ ರೂಹುಗಳನ್ನು ಬಿಡಿಸುವ ಕಲಾವಿದ.

ಉಡುಪಿಯ ಜಗದ್ಗುರುಗಳು ಮತ್ತು ಭಕ್ತರಿಗೆ ಅಚ್ಚುಮೆಚ್ಚಿನವನಾದ ಅಮೀರ್ ಹಮ್ಜಾ ಬಡವ; ತನ್ನ ಕಲೆಯಲ್ಲಿ ನಂಬಿಕೆ ಇಟ್ಟುಕೊಂಡಿರುವವನು. ತನ್ನ ಚಿಕ್ಕ ಕತ್ತಲು ಕೋಣೆಯಲ್ಲಿ ಮಕ್ಕಳೊಂದಿಗೆ ಏಕಾಗ್ರವಾಗಿ ದೇವರ ಒಡವೆ, ಮಠದ ಅಲಂಕಾರ ಚಿತ್ರಗಳನ್ನು ಸೃಷ್ಟಿಸುವ ಈತನ ಬಗ್ಗೆ ಮುಸ್ಲಿಮರು ಆಕ್ಷೇಪಿಸಿದ್ದುಂಟು. ಆದರೆ ಹಮ್ಜಾ ಅದನ್ನೆಲ್ಲ ಲೆಕ್ಕಿಸುವುದಿಲ್ಲ. "ದೇವರು ಒಬ್ಬನೇ, ಜನ ಬೇರೆಬೇರೆ ಹೆಸರಿಂದ ಕರೆಯುತ್ತಾರೆ" ಎಂದು ಹೇಳುವ ಹಮ್ಜಾಗೆ ದೇಶವನ್ನು ತುಂಬಿರುವ ಜಾತೀಯತೆಯ ಪ್ರಕ್ಷುಬ್ಧತೆ ಕುರಿತು ಏನೆನ್ನಿಸುತ್ತದೆ? ಏನೂ ಅನ್ನಿಸುವುದಿಲ್ಲ, ನಿಜವಾದ ಮನುಷ್ಯರಿಗೆ ಅದೆಲ್ಲ ಅಪ್ಪಟ ತರಲೆ ಮಾತ್ರ.

ಮರ ಮತ್ತು ಮನುಷ್ಯರು



ಕೋಲಾರ ಮತ್ತು ಹಾಸನ ಜಿಲ್ಲೆಗಳಲ್ಲಿನ ಕೋಮು ಘರ್ಷಣೆಗಳ ಬಗ್ಗೆ ಓದಿದ್ದೀರಿ; ಜನ ಸತ್ತರು, ಬೆಂಕಿ ಹಚ್ಚಲಾಯಿತು, ಬಡವರು ತಮ್ಮ ಸಾಮಾನು, ಮಕ್ಕಳನ್ನು ಬೆನ್ನಿಗೆ ಹಾಕಿಕೊಂಡು ಓಡಿಹೋಗುತ್ತಿರುವ ದೃಶ್ಯ ಎದೆ ಒಡೆಯುತ್ತಿತ್ತು. ದೂರದಲ್ಲಿ ನಿಂತು ನೋಡುವವರಿಗೆ ಅಥವಾ ದೂರದಲ್ಲಿ ಇದ್ದು ಈ ಬಗ್ಗೆ ಓದುವವರಿಗೆ ಈ ಬಡಪಾಯಿಗಳ ನೋವು, ಅವಮಾನ ಗೊತ್ತಾಗುವುದಿಲ್ಲ. ಹಾಸನ, ಕೋಲಾರದ ಹಳ್ಳಿಗಳಲ್ಲಿ ಸುಮಾರು ಇನ್ನೂರೈವತ್ತು ಎಕರೆಯಲ್ಲಿ ಬೆಳೆದಿದ್ದ ಹತ್ತು ವರ್ಷದ, ಇಪ್ಪತ್ತು ವರ್ಷದ ಮಾವಿನ ಮರ ಕಡಿದಿದ್ದಾರೆ. ನೀವೇ ಈ ಮರ ಕಳೆದುಕೊಂಡವರ ಜಾಗದಲ್ಲಿ ನಿಮ್ಮನ್ನಿಟ್ಟುಕೊಂಡು ಯೋಚಿಸಿ. ಎಂಥ ದುರಂತ ಎಂಬುದು ಆಗ ಮಾತ್ರ ಗೊತ್ತಾಗುತ್ತದೆ. ಹತ್ತು, ಇಪ್ಪತ್ತು ವರ್ಷ ನೀವು ಪ್ರೀತಿಯಿಂದ, ಭವಿಷ್ಯದ ಬಗ್ಗೆ ಆಸೆಯಿಂದ ಬೆಳೆಸಿದ ಮರಗಳು..... ದುಷ್ಟಕೈಗಳು ಅವನ್ನು ಕತ್ತರಿಸಿಹಾಕುತ್ತಿವೆ. ನಿಮ್ಮ ಮರ ಇನ್ನಿಲ್ಲ, ಅದಕ್ಕಿಂತ ಹೆಚ್ಚಾಗಿ ಮರ ಕಡಿದ, ಜೀವನದ ಸೆಲೆಗಳನ್ನು ಕತ್ತರಿಸತೊಡಗಿದ ಕೈಯಲ್ಲಿನ ರಾಕ್ಷಸತ್ವ ನಿಮ್ಮನ್ನು ಬೆಚ್ಚಿ ಬೀಳಿಸುತ್ತದೆ. ಹೀಗೆ ಕತ್ತರಿಸಿದ ಕೈಗಳ ಹಿಂದಿನ ಮನಸ್ಸು ಮನುಷ್ಯರದಲ್ಲ, ನೀಚ ಶಕ್ತಿಗಳದು.

ಇಂಥ ಶಕ್ತಿಗಳನ್ನು ಎದುರಿಸಲು ನಮ್ಮಲ್ಲಿ ಪೊಲೀಸರು ಮಾತ್ರ ಇದ್ದಾರೆಯೆ? ಪ್ರತಿಯೊಂದು ಹಳ್ಳಿಯಲ್ಲಿ ತಮ್ಮ ಕಾರ್ಯಕರ್ತರು ಇರುವುದಾಗಿ ಹೇಳಿಕೊಳ್ಳುವ ಕಾಂಗ್ರೆಸಿಗಳು, ಜನತಾದವರು, ದಳದವರು ಏನು ಮಾಡುತ್ತಿದ್ದಾರೆ; ಅವರೆಲ್ಲ ಇರುವುದು ಓಟು ದೋಚಲು ಮಾತ್ರವೆ? ಅನ್ಯಾಯದ ಕೆಲಸ ಆಗದಂತೆ ತಡೆಯಲಾಗದಿದ್ದರೆ ಈ ಕಾರ್ಯಕರ್ತರು ಮತ್ತು ಪಕ್ಷಗಳ ಅಗತ್ಯವಿದೆಯೆ?

ಯಾವ ಪ್ರಶ್ನೆಗೆ ಇಲ್ಲಿ ಅರ್ಥವಿದೆ?

ಕಣ್ಣೆದುರಿಗೇ ಆದದ್ದು



ಚನ್ನರಾಯಪಟ್ಟಣದಲ್ಲಿ.... ಈ ಊರಿಗೆ ಬೆಂಗಳೂರಿನಿಂದ ಬಂದಿದ್ದ ಒಬ್ಬಳು ಹುಡುಗಿ ಬೀದಿಯಲ್ಲಿ ಸದ್ದಾಗುವುದನ್ನು ಕೇಳಿ ಮನೆಯಿಂದ ಹೊರಗೆ ಬಂದಳು. ನೋಡುತ್ತಾಳೆ, ಎರಡು ದೊಡ್ಡ ಅಂಗಡಿಗಳಿಗೆ ಬೆಂಕಿ ಹಚ್ಚುತ್ತಿದ್ದಾರೆ. ನಾಲ್ಕೈದು ಜನ ಆರೆಸ್ಸೆಸ್, ಬಿಜೆಪಿಗಳು; ಮಿಕ್ಕವರೆಲ್ಲ ಸ್ಥಳೀಯ ದುಷ್ಟರು. ಅವಳ ಕಣ್ಣೆದುರಿಗೇ ಜನರಲ್ ಸ್ಟೋರ್ಸ್‌ನಲ್ಲಿದ್ದ ಮಾರಾಟದ ಹುಡುಗರು ಹೊರಗೋಡುತ್ತಾರೆ. ಮುಸ್ಲಿಮರ ಅಂಗಡಿಗಳು, ಬೆಂಕಿ ಹತ್ತಿಕೊಳ್ಳುತ್ತವೆ. ಜನ ಕೂಗಾಡುತ್ತಿದ್ದಾರೆ. ಬೆಂಕಿ ದೊಡ್ಡದಾಗುತ್ತದೆ. ಉರಿಯುತ್ತದೆ. ಬೆಂಕಿಯನ್ನು ಆರಿಸುವ ಯತ್ನ ಕೂಡ ಇಲ್ಲ. ಉರಿದು ಅಂಗಡಿ ಭಸ್ಮವಾದ ಮೇಲೆ ಅಂಗಡಿಯ ಮಾಲೀಕರಿಬ್ಬರು ಆ ಎರಡು ಅಂಗಡಿಗಳ ಜಾಗದಲ್ಲಿ ಕೂತುಕೊಳ್ಳುತ್ತಾರೆ. ಎವೆ ಇಕ್ಕದೆ, ದಿಕ್ಕೆಟ್ಟ ಸ್ಥಿತಿಯಲ್ಲಿ.

ಹಾಗೆಯೇ ಚನ್ನರಾಯಪಟ್ಟಣದಿಂದ ಹೊರಗೆ ಹೋದರೆ.... ಬೆನ್ನಿಗೆ ಮಕ್ಕಳು, ಗಂಟು ಹಾಕಿಕೊಂಡ ಜನ ಸಾವನ್ನು ಕಂಡಂತೆ ಓಡುತ್ತಿದ್ದಾರೆ. ಇದು ಕೇವಲ ಪ್ಲೇಗು, ಕಾಲರಾ ತರಹ ಅಲ್ಲ; ದೈಹಿಕ ನೋವು ಮಾತ್ರವಲ್ಲ ಮನುಷ್ಯ ಮನುಷ್ಯನಿಗೆ ಎಸಗಿದ ಅನ್ಯಾಯ, ಅವಮಾನ. ಹುಡುಗಿ ಹೇಳುವುದನ್ನು ಕೇಳುತ್ತಾ ಅವರು ಅಂಗಡಿ ಎದುರು ಕೂತಂತೆ ಕೂರುತ್ತೇನೆ. ■

ಜ್ಯೋತಿಷ್ಯಕ್ಕೇ ಒಂದು ಶಾಪಿಂಗ್ ಮಾಲ್!

ಬೆಂಗಳೂರಿನಲ್ಲಿ ಈ ದಂಧೆಯವರು ಇರಲಿಲ್ಲ ಎಂದೇನೂ ಅಲ್ಲ, ಈಗಲೂ ಇದೀ ಸಿಟೀಲಿ ಹುಡುಕಿ ಲೆಕ್ಕ ಹಾಕುತ್ತಾ ಹೊರಟರೆ ಸ್ಕೂಲು, ಕ್ಲಿನಿಕ್ಕು, ವೈನ್‌ಸ್ಟೋರು, ತರಕಾರಿ ಅಂಗಡಿಗಳು ಎಷ್ಟಿವೆಯೋ ಹೆಚ್ಚುಕಡಿಮೆ ಅಷ್ಟೇ ಸಂಖ್ಯೆಯಲ್ಲಿ ವಾಸ್ತುತಜ್ಞರು, ಜ್ಯೋತಿಷಿಗಳು, ಹಸ್ತ ಸಾಮುದ್ರಿಕೆಯವರೂ ಸಿಗುತ್ತಾರೆ.

ಆದರೂ ಬೆಂಗಳೂರೆಂಬ ಅತ್ಯಾಧುನಿಕ ವಿಶ್ವಪ್ರಸಿದ್ಧ ನಗರದಲ್ಲಿ ಎಲ್ಲವೂ ವ್ಯವಸ್ಥಿತವಾಗಿರಬೇಕಲ್ಲ!

ಹಾಗಾಗಿ ಇನ್ನೊಂದು ತಿಂಗಳಲ್ಲಿ ಜೆ.ಪಿ. ನಗರದಲ್ಲೊಂದು ದೊಡ್ಡ ಕಾಂಪ್ಲೆಕ್ಸ್ ಕಣ್ಣುಬಿಡಲಿದೆ.

ಇದು **Astrology mall...!**


ಈ ಸೂಪರ್‌ಮಾರ್ಕೆಟ್‌ನಲ್ಲಿ ಭವಿಷ್ಯ ಹೇಳುವವರು, ಸಂಖ್ಯಾ ಶಾಸ್ತ್ರಜ್ಞರು, ಹಸ್ತ ಸಾಮುದ್ರಿಕೆ ತಜ್ಞರು, ವಾಸ್ತು ಎಕ್ಸ್‌ಪರ್ಟ್ಸ್, ಜಾತಕ-ಕುಂಡಲಿ ಬರೆದು ಕೊಡುವವರು ಅಂಗಡಿ ತೆರೆಯಲಿದ್ದಾರೆ. ಇವರ ಅಕ್ಕಪಕ್ಕದಲ್ಲೇ ರುದ್ರಾಕ್ಷಿ ಸರ, ಹರಳು, ಕಲ್ಲು, ಯಂತ್ರ, ತಾಯತ ಮಾರುವವರೂ ಇರುತ್ತಾರೆ. ಜೊತೆಗೆ ಪೂಜಾ ಸಾಮಗ್ರಿ ಮಾರುವವರು, ದೋಷ ಪರಿಹಾರ ಮಾಡಿಕೊಡುವ ಪುರೋಹಿತರೂ ಬೋರ್ಡು ನೇತುಹಾಕಿಕೊಂಡು ಕೂರಲಿದ್ದಾರೆ.

ತಾಳಿ.... ತಾಳಿ ಇದು ಇಲ್ಲಿಗೂ ಮುಗಿಯುವುದಿಲ್ಲ, ಇಂತದ್ದೇ **astrology mall**ಗಳು ಕೆಲವೇ ತಿಂಗಳುಗಳಲ್ಲಿ ಬೆಂಗಳೂರಿನ ಮಾರತ್‌ಹಳ್ಳಿ, ಎಚ್‌ಎಸ್‌ಆರ್ ಲೇಔಟ್, ವಿಜಯನಗರ, ರಾಜಾಜಿನಗರ, ಆರ್.ಟಿ. ನಗರ, ಕಸ್ತೂರಿನಗರ, ಎಚ್‌ಎಸ್‌ಬಿಆರ್ ಲೇಔಟ್, ಸರ್ಜಾಪುರ, ಎಲೆಕ್ಟ್ರಾನಿಕ್ ಸಿಟಿಗಳಲ್ಲೂ ತಲೆ ಎತ್ತಲಿವೆ.

ಈ ದಂಧೆಯ ಒಟ್ಟು ನಿರೀಕ್ಷಿತ ಟರ್ನ್‌ಓವರ್ **400** ಕೋಟಿ ಅಂತೆ!

ರಮೇಶ್ ತುಳಸಿಯನ್ ಎಂಬುವನು ಮೊನ್ನೆ ಇಷ್ಟೆಲ್ಲಾ ಹೇಳಿಕೊಂಡಿದ್ದಾನೆ.

ಜನಸಾಮಾನ್ಯರ ಅಜ್ಞಾನ ಹಾಗೂ ಅಸಹಾಯಕತೆಗಳನ್ನೇ ಹೇಗೆ ಈ ದಂಧೆಯವರು ಒಂದು ಯಶಸ್ವಿ ಬ್ಯುಸಿನೆಸ್ ಆಗಿ ರೂಪಾಂತರಿಸಿಕೊಳ್ಳುತ್ತಿದ್ದಾರೆನ್ನಲು ಈಗ ತಲೆ ಎತ್ತಲಿರುವ ಜ್ಯೋತಿಷ್ಯ ಕಾಂಪ್ಲೆಕ್ಸ್‌ಗಳೇ ಸಾಕ್ಷಿ.



ಅಂದಹಾಗೆ ಈ ಮಾಲ್‌ನ ಹೆಸರು **star & planet.**

ನಮ್ಮಲ್ಲೀಗ ವಾಸ್ತು ವೈರಸ್ ತಲುಪದಿರುವ ಸ್ಥಳವೇ ಇಲ್ಲ. ಮನೆ, ಅಂಗಡಿ, ಆಫೀಸ್, ಕೃಷಿ ಭೂಮಿ, ವಿಧಾನಸಭಾ ಕ್ಷೇತ್ರ ಕೊನೆಗೆ ವಿಧಾನಸೌಧಕ್ಕೂ ಈ ಕಾಯಿಲೆ ತಗುಲಿದೆ.

ಗಂಡ-ಹೆಂಡತಿ ಜಗಳಾಡಿದರೆ ಜಾತಕದಲ್ಲಿ ಕಾರಣ ಹುಡುಕುವವರು, ಆಕ್ಸಿಡೆಂಟ್ ಆದರೆ ವೆಹಿಕಲ್ ನಂಬರ್‌ನಲ್ಲಿ ದೋಷ ಪತ್ತೆಹಚ್ಚುವ ತಜ್ಞರು ಇಲ್ಲಿದ್ದಾರೆ. ಕೀರ್ತಿ, ದುಡ್ಡು ಯಶಸ್ಸು ಗಳಿಸುತ್ತಿದ್ದಾರೆ.

ಆದರೆ ನಮ್ಮ ವಿಚಾರವಾದಿಗಳೇನು ಮಾಡುತ್ತಿದ್ದಾರೆ?

ಶಿರಡಿ ಸಾಯಿಬಾಬಾ ಒಂದು ಕಣ್ಣು ಹೊಡೆದ ಅಂದಾಗ ಅದು ಸುಳ್ಳು ಎನ್ನುವುದು ಬಿಟ್ಟರೆ, ಗಣೇಶ ಹಾಲು ಕುಡಿದ ಎನ್ನುವ ಸುದ್ದಿ ಹಬ್ಬಿದಾಗ 'ಹಾಗಾದ್ರೆ ಅವನು ಮೂತ್ರಾನೂ ಮಾಡಿರಬೇಕು' ಎಂದು 'ಗೇಲಿ ಮಾಡಿದ್ದು ಬಿಟ್ಟರೆ ಅವರಿಗೆ ತಮ್ಮ ಮೇಲೆ ಇನ್ನು ಹೆಚ್ಚಿನ ಜವಾಬ್ದಾರಿ ಇದೆ ಅನ್ನಿಸುತ್ತಿಲ್ಲ ಯಾಕೆ?

ಅಂದರೆ ಏನೋ ಒಂದು ಕಂದಾಚಾರ, ಮೂಢನಂಬಿಕೆಯ ಪ್ರಕರಣ ನಡೆದಾಗಲಷ್ಟೇ ಈ ವಲಯದ ಜನ ಪ್ರತಿಕ್ರಿಯಿಸುತ್ತಿದ್ದಾರೆ. ಆದರೆ ಜನರಲ್ಲಿ ವೈಜ್ಞಾನಿಕ ಮನೋಭಾವ ರಾತ್ರೋರಾತ್ರಿ ಬರುವಂತದ್ದಲ್ಲ ಅಲ್ಲವೆ? ವೇದಾಂತ ರೆಜಿಮೆಂಟ್ ಬರೆದ ಬಿ.ವಿ. ವೀರಭದ್ರಪ್ಪನವರು, ಪವಾಡಗಳ ರಹಸ್ಯ ಬಯಲುಗೊಳಿಸುತ್ತಿರುವ ಹುಲಿಕುಂಟೆ ನಟರಾಜ್ ತರದವರು ಯೋಚಿಸಿ ನೋಡಲಿ, ಜನರಲ್ಲಿ ವೈಚಾರಿಕ ಪ್ರಜ್ಞೆ ಬೆಳೆಸುವ ಕೆಲಸ ವರ್ಷಾನುಗಟ್ಟಲೆ ನಿರಂತರವಾಗಿ ನಡೆಯುತ್ತಿರಬೇಕು.

ಪ್ರತಿ ಮನುಷ್ಯನಿಗೂ ಒಂದು ಹುಟ್ಟಿದ ದಿನ ಅಂತ ಇರುತ್ತೆ, ಅದೇ ರೀತಿ ಅಂಗೈ ಮೇಲೆ ನಾಲ್ಕಾರು ಗೆರೆಗಳೂ ಇದ್ದೇ ಇರುತ್ತವೆ. ಹಾಗೆಂದು ಇವೆರಡನ್ನೇ ಆಧಾರವಾಗಿಟ್ಟುಕೊಂಡು 'ಅಸ್ಟ್ರಾಲಜಿ ಒಂದು ಭಾಷೆ, ನೀವದನ್ನು ಅರ್ಥ ಮಾಡಿಕೊಂಡರೆ ಆಕಾಶವೇ ಮಾತಾಡುತ್ತೆ' ಎಂದು ಜನರನ್ನು ನಂಬಿಸಿ ಸುಲಿಯುವ ದಂಧೆಯಾಗಿ ಹೋಗಿದೆ ಜ್ಯೋತಿಷ್ಯ ಶಾಸ್ತ್ರ.

ಇದರ ವಿರುದ್ಧ ಒಂದು ವ್ಯವಸ್ಥಿತ, ದೀರ್ಘಕಾಲೀನ ದಣಿವರಿಯದ ಸಂಘರ್ಷದ ಅಗತ್ಯ ಇದೆಯಲ್ಲವೆ? ■

ಬಿಡಿ ಚಿತ್ರಗಳು

• ಈಶ

ಅನುಪ್ರಭಾಕರ್ ದೈವಭಕ್ತಿ ಪ್ರಸಂಗವು....!



ನಟಿ ಅನು ಪ್ರಭಾಕರ್ ನಮ್ಮ ಬಳಗದವರನ್ನು ಬೈದುಕೊಂಡರೂ ಪರವಾಗಿಲ್ಲ ಎಂದು ತೀರ್ಮಾನಿಸಿಕೊಂಡು ಈ ಪ್ರಸಂಗ ಹೇಳಲಾಗಿದೆ.

ಅನು ಪ್ರಭಾಕರ್ ವಿಪರೀತ ದೈವಭಕ್ತೆ, ಅತ್ತೆ ಜಯಂತಿಯವರಂತೆ ಈ ದೈವಭಕ್ತಿಯಲ್ಲಿ ಮುಗ್ಧತೆ ಜಾಸ್ತಿ. ಎಲ್ಲೇ ಹೋಗಲಿ, ಹೋಗುತ್ತಿರಲಿ ದಾರೀಲಿ ಕಾಣುವ ದೇವಸ್ಥಾನ, ದೇವರು ಕೊನೆಗೆ ಕುಂಕುಮ, ಹೂವು, ಕಾಣುವ ಯಾವುದಕ್ಕಾದರೂ ಒಂದು ಶರಣು ಮಾಡಿ ಮುಂದಕ್ಕೋಗುವ ಶ್ರದ್ಧೆ ಅವರದು.

ಇತ್ತೀಚೆಗೆ ಒಂದು ದಿನ ಸಂಜೆ ಅನು ಮತ್ತು ಅವರ ಪತಿ ಕೃಷ್ಣಕುಮಾರ್ ಕಾರಿನಲ್ಲಿ ಹೋಗುತ್ತಿದ್ದಾಗ ಒಂದು ಸ್ಥಳದಲ್ಲಿ ಸೀರಿಯಲ್ ಸೆಟ್ ಅಲಂಕಾರ ಮಾಡಿ ಮೈಕಿನಲ್ಲಿ ಹಾಡು ಹಾಕಿಕೊಂಡು ಒಂದಷ್ಟು ಜನ ಓಡಾಡುತ್ತಿದ್ದದ್ದು ಕಾಣಿಸಿದೆ.

ಅದನ್ನು ಗಮನಿಸಿದ ಅನು ಪ್ರಭಾಕರ್ ಯಾವುದೋ ದೇವಸ್ಥಾನದ ಉದ್ಘಾಟನೆ ಪ್ರೋಗ್ರಾಂ ಅಂದುಕೊಂಡು ತಕ್ಷಣ ಕಣ್ಣುಮುಚ್ಚಿ, ತಮ್ಮೆರಡು ಕೈಗಳನ್ನು ಕೆನ್ನೆಗೆ ಮುಟ್ಟಿಕೊಂಡು ಕಾರಿನೊಳಗಿಂದಲೇ ನಮಸ್ಕಾರ ಮಾಡಿಬಿಟ್ಟರಂತೆ.

ಆಮೇಲೆ ಅನು ಮತ್ತು ಕೆಕೆ ನಡುವೆ ನಡೆದ ಸಂಭಾಷಣೆ ಹೀಗಿತ್ತು:

ಕೆಕೆ: ನೀನೀಗ ನಮಸ್ಕಾರ ಮಾಡಿದ್ದು ಯಾರಿಗೆ ಗೊತ್ತಾ?

ಅನು: ಇಲ್ಲಾ... ಯಾವ ದೇವರದು!

ಕೆಕೆ: ಸುಲಭ ಶೌಚಾಲಯ ಕಣಮ್ಮಾ....! ■

ಜೀನಿಐ ಕತೆ

ಮಾತು

"ಗೊತ್ತಿರುವವರು ಮಾತನಾಡುವುದಿಲ್ಲ, ಮಾತನಾಡುವವರಿಗೆ ಗೊತ್ತಿರುವುದಿಲ್ಲ"

ಎಂಬ ಲಾವೊಟ್ಸುರವರ ನೀತಿ ವಾಕ್ಯದ ಬಗ್ಗೆ ಶಿಷ್ಯರೆಲ್ಲಾ ಚರ್ಚಿಸುತ್ತಿದ್ದರು.

ಆಗ ಅವರಿದ್ದ ಕೊಠಡಿಯನ್ನು ಗುರುಗಳು ಪ್ರವೇಶಿಸಿದ್ದರಿಂದ ಈ ನೀತಿ ವಾಕ್ಯದ ಅರ್ಥವೇನು ಎಂದು ಶಿಷ್ಯರು ಕೇಳಿದರು.

"ನಿಮ್ಮಲ್ಲಿ ಗುಲಾಬಿಯ ಸುಗಂಧ ಯಾರಿಗೆ ಗೊತ್ತು?" ಗುರುಗಳು ಪ್ರಶ್ನಿಸಿದರು.

ಅವರೆಲ್ಲರಿಗೂ ಅದು ಗೊತ್ತಿತ್ತು.

"ಹಾಗಾದರೆ ಅದನ್ನು ಮಾತುಗಳಲ್ಲಿ ವರ್ಣಿಸಿ" ಎಂದರು ಗುರುಗಳು.

ಆಗ ಶಿಷ್ಯರೆಲ್ಲಾ ತುಟಿಪಿಟಕ್ಕೆನ್ನದೆ ಸುಮ್ಮನಾದರು.



ಹೊಗಳಿಕೆ ತೆಗಳಿಕೆ

ಮಾತೆ ಮಹಾದೇವಿ ಪೀಠ ತ್ಯಜಿಸಬೇಕು



12ನೇ ಶತಮಾನದ ಬಸವಾದಿ ಶರಣರ 'ವಚನ ಸಾಹಿತ್ಯ' ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲಿ ಮುಂಚೂಣಿಯಲ್ಲಿರಲು ಕಾರಣ, ಶರಣರು ಬಳಸಿದ ವಚನಾಂಕಿತದಿಂದಲ್ಲ. ಆದರೆ, ಅದರಲ್ಲಿರುವ ವಿಶ್ವದ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಅನುಭಾವ ಸಾಹಿತ್ಯದಿಂದ. ಮಾನವೀಯತೆ, ಕಿಂಕರತ್ವ, ಕಾಯಕ ದಾಸೋಹ, ಸಮಾನತೆ ತತ್ವದ ಮೇಲೆ ಬಸವ ಧರ್ಮ ಬೆಳೆದು ನಿಂತಿದೆ. ಆರ್ಥಿಕ-ಸಾಮಾಜಿಕ, ರಾಜಕೀಯ, ಧಾರ್ಮಿಕ ನೀತಿಗೆ ವೈಚಾರಿಕ ನೆಲೆಗೆ ವಚನ ಸಾಹಿತ್ಯ ವೈಜ್ಞಾನಿಕವಾಗಿ ಆಶಯದಂತೆ, ಕಾರ್ಯವನ್ನು ನಿರ್ವಹಿಸದೇ ಬಸವಧರ್ಮಕ್ಕೆ ಅಪಚಾರವೆಸಗಿದ್ದಾರೆ. ಶ್ರೀ ಗುರು ಬಸವಣ್ಣನವರ ಹಾಗೂ ಅಕ್ಕಮಹಾದೇವಿಯವರ ವಚನಾಂಕಿತವನ್ನು ತಿದ್ದುವುದರಿಂದ 'ಕೃತಿ ಚೌರ್ಯ'ದ ಕಳಂಕವನ್ನು ಹೊತ್ತಿದ್ದಾರೆ. ಅಷ್ಟಕ್ಕೂ ಕೂಡಲಸಂಗಮದೇವ ಮತ್ತು ಶ್ರೀ ಮಲ್ಲಿಕಾರ್ಜುನನನ್ನು ಕರಸ್ಥಳಕ್ಕೆ "ಇಷ್ಟಲಿಂಗ" ರೂಪದಲ್ಲಿ ಚುಳುಕಾಗಿಸಿ/ಇಂಬುಗೊಳಿಸಿಕೊಂಡ ಬಸವಣ್ಣನವರು ಹಾಗೂ ಅಕ್ಕಮಹಾದೇವಿಯವರು 'ಸ್ಥಾವರ'ದ ಬಗ್ಗೆ ಉತ್ತಮ ತಿಳಿವಳಿಕೆ ಹೊಂದಿದವರೇ. ಇದಕ್ಕೆ "ಲಿಂಗದೇವ" ಎಂದು ಒತ್ತುಕೊಡುವ ಅವಶ್ಯಕತೆ ಇಲ್ಲ. ವಚನಗಳನ್ನು ತಿದ್ದುವುದು, ಧರ್ಮದ್ರೋಹ-ಗುರುದ್ರೋಹ. ಲಿಂಗಾಯತ ಎಂದರೆ, ಲಿಂಗವನ್ನು ಸ್ವಾಯತ್ತ ಮಾಡಿಕೊಳ್ಳುವ ಒಂದು ಕ್ರಮ. ಅಂದರೆ, ಇಷ್ಟ ಲಿಂಗ ಹೊಂದುವ ಕ್ರಮ. ಬಸವ ಧರ್ಮಕ್ಕೆ ಇಷ್ಟಲಿಂಗ ದೀಕ್ಷೆ ಅನಿವಾರ್ಯ.

"ಬಸವಧರ್ಮ" ಪೀಠದ ಅಧ್ಯಕ್ಷರಾಗಿಯೂ ಅವರು ಮೇಲಿಂದ ಮೇಲೆ ಲಿಂಗಾಯತ ಧರ್ಮವೆನ್ನುತ್ತಾರೆಯೇ ಹೊರತು ಬಸವ ಧರ್ಮ ಎನ್ನುವುದೇ ಇಲ್ಲ. ಲಿಂಗಾಯತವೇ ಒಂದು ಜಾತಿಯಾದಾಗ, ವಿಶ್ವಮಟ್ಟಕ್ಕೆ ಬಸವಾದಿ ಪ್ರಮಥರ ವಿಚಾರ ಹರಿಬಿಡಲು ಬಸವಧರ್ಮದ ಅವಶ್ಯಕತೆಯನ್ನು ಶ್ರೀ ಲಿಂಗಾನಂದ ಸ್ವಾಮಿಗಳು ಮನಗಂಡಿದ್ದರು. ಆದ್ದರಿಂದಲೇ ಅವರು ಬಸವ ಧರ್ಮ ಪೀಠವನ್ನು ಸ್ಥಾಪಿಸಿದರು.

ಬಸವ ತತ್ವದ ಜನರೇ ಹೀಗೆ ವಚನ ಸಾಹಿತ್ಯಕ್ಕೆ ಅನ್ಯಾಯ ಮಾಡಿದರೆ ಹೇಗೆ?

ಬಸವಣ್ಣನವರ ವಚನದಂತೆ

ತಾನಾರೆಂಬುದನ್ನು ಸಾಧಿಸಬಾರದು, ಸಾಧಿಸಲಾಗದು ಕೂಡಲ ಸಂಗನ ಕರುಣೆ ಇಲ್ಲದನ್ನಕ್ಕರ

ಏರಿನೀರುಂಬೊಡೆ ತಾಯಿಯು ಹಾಲು ವಿಷವಾದೊಡೆ ನಾರಿ ತನ್ನ ಮನೆಯಲ್ಲಿ ಕಳುವಡೆ, ಇನ್ನಾರಿಗೆ ದೂರಲಿ ತಂದೆ, ಕೂಡಲಸಂಗಮದೇವ.


ಇಂತಹ ಸ್ಥಿತಿಗೆ ಬಸವಧರ್ಮೀಯರು ಬಂದು ತಲುಪಿದ್ದೇವೆ. ಎಂಥಾ ಸಾಹಿತ್ಯಕ್ಕೆ ಎಂಥಾ ಜನರಿಂದ ದುರ್ಗತಿ?

-ಆರ್.ಬಿ. ರಾಮದುರ್ಗ, ಬೆಂಗಳೂರು

ಶರವೇಗದಲ್ಲಿ ಸರಿದ ಕೆ.ವಿ. ಜಯರಾಮ್

ಕೆಲ ತಿಂಗಳ ಹಿಂದಷ್ಟೇ ಕನ್ನಡದ ಪ್ರತಿಭಾವಂತ ನಿರ್ದೇಶಕ ರಾಜ್ ಕಿಶೋರ್ ನಿಧನರಾದರು. ಅವರ ನೆನಪಿನ್ನೂ ಹಸಿಯಾಗಿರುವಾಗಲೇ ಕನ್ನಡದ ಮತ್ತೊಬ್ಬ ಕ್ರಿಯಾಶೀಲ ಮತ್ತು ಪ್ರತಿಭಾವಂತ ನಿರ್ದೇಶಕ ಕೆ.ವಿ.ಜಯರಾಮ್ ಕಣ್ಮರೆಯಾಗಿದ್ದಾರೆ.

ಜಯರಾಮ್ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ್ದೇ ಕಾದಂಬರಿ ಆಧಾರಿತ ಸಿನಿಮಾಗಳಿಂದ. ಅವರು ನಿರ್ದೇಶಿಸಿದ ಕಡೆಯ ಚಿತ್ರ 'ರಂಜಿತಾ' ಕೂಡ ಕಾದಂಬರಿ ಆಧರಿಸಿದ್ದೇ ಆಗಿತ್ತು, ಈ ಕಾರಣದಿಂದಲೇ ಜಯರಾಮ್ 'ನಾವೆಲ್ ಡೈರೆಕ್ಟರ್' ಎಂದೇ ಹೆಸರುವಾಸಿಯಾಗಿದ್ದರು. ಸಂಖ್ಯಾದೃಷ್ಟಿಯಿಂದ ನೋಡಿದರೆ ಕೆವಿಜೆ ನಿರ್ದೇಶಿಸಿದ ಸಿನಿಮಾಗಳು ಬರೀ ಇಪ್ಪತ್ತೈದು. ಹಾಗೆಂದು ಅವರಿಗೆ ಅವಕಾಶವಿರಲಿಲ್ಲ ಎಂದಲ್ಲ, ಆದರೆ ಕೇವಲ ದುಡ್ಡು ಹಾಗೂ ಸಂಖ್ಯೆಗಳಿಗಾಗಿ ಸಿನಿಮಾ ಮಾಡುವ ಜಾಯಮಾನ ಜಯರಾಮ್‌ರದ್ದಾಗಿರಲಿಲ್ಲ.



ಜಯರಾಮ್ ಅವರ ಚಿತ್ರಗಳಲ್ಲಿ ಕಥೆಗೆ ಅಪಾರವಾದ ಪ್ರಾಮುಖ್ಯತೆ ಇರುತ್ತಿತ್ತು, ಜೊತೆಗೆ ಗುಣಮಟ್ಟದ ಬಗ್ಗೆಯೂ ಅವರು ಹೆಚ್ಚು ಆಸ್ಥೆ ವಹಿಸುತ್ತಿದ್ದರು. ಅವರ ಇಂತಹ ಪರಿಶ್ರಮದಿಂದಾಗಿಯೇ ಅವರಿಗೆ ಸಂದಿದ್ದು ಒಂದಲ್ಲಾ ಎರಡಲ್ಲಾ ಒಟ್ಟು ಎಂಟು ರಾಜ್ಯಪ್ರಶಸ್ತಿಗಳು.

ಕೆ.ವಿ. ಜಯರಾಮ್ ಎಂದಾಕ್ಷಣ ನೆನಪಿಗೆ ಬರುವುದೇ ಅನಂತ್‌ನಾಗ್. ಯಾಕೆಂದರೆ ಅನಂತ್‌ನಾಗ್‌ರಂಥ ಅಪ್ರತಿಮ ಕಲಾವಿದನಿಗಾಗಿ ಅವರು ನಿರ್ದೇಶಿಸಿದ್ದ 'ಹೊಸ ನೀರು', 'ಮುದುಡಿದ ತಾವರೆ ಅರಳಿತು', 'ಅರುಣರಾಗ', 'ಇಬ್ಬನಿ ಕರಗಿತು', 'ಶ್ವೇತ ಗುಲಾಬಿ' ಎಲ್ಲವೂ ಯಶಸ್ವೀ ಚಿತ್ರಗಳೆನಿಸಿಕೊಂಡಿದ್ದವು. ಇವುಗಳಲ್ಲದೆ ಕುಮಾರ್ ಬಂಗಾರಪ್ಪ ಅಭಿನಯದ 'ಶರವೇಗದ ಸರದಾರ' ಸೇರಿದಂತೆ ಇತರೆ ಚಿತ್ರಗಳನ್ನು ಜಯರಾಮ್ ನಿರ್ದೇಶಿಸಿದ್ದರು.

ಜಯರಾಮ್ ತೀರಾ ಚಿಕ್ಕ ವಯಸ್ಸಿಗೇ ಚಿತ್ರರಂಗದೊಂದಿಗೆ ಬೆರೆತುಹೋಗಿದ್ದರು. ಹದಿನೆಂಟನೇ ವಯಸ್ಸಿಗೆಲ್ಲಾ ಮುಂಬೈ ಸೇರಿದ್ದ ಅವರು ರಾಜ್‌ಕಪೂರ್ ಮತ್ತು ಡೇವಿಡ್ ಲೀನ್‌ರಂಥವರ ಜೊತೆ ಕೆಲಸ ಮಾಡಿದ್ದರು. ಮೊದಲಿಗೆ ಎಡಿಟಿಂಗ್ ಟೆಕ್ನೀಷಿಯನ್ ಆಗಿ ಸಿನಿಮಾರಂಗದಲ್ಲಿ ನೆಲೆ ಕಂಡ ಜಯರಾಂ ಸಾಕಷ್ಟು ಸಂಖ್ಯೆಯ ಸಿನಿಮಾಗಳಿಗೆ ಸಂಕಲನಕಾರರಾಗಿ ದುಡಿದಿದ್ದರು. ಹಾಗಾಗಿ ಅವರ ಚಿತ್ರಗಳಲ್ಲಿ ಚುರುಕು ಸಂಕಲನ ಹಾಗೂ ಚಿತ್ರದ ವೇಗ ಗಮನ ಸೆಳೆಯುತ್ತಿತ್ತು.


ಅವರೇ ನಿರ್ದೇಶಿಸಿದ 'ಅರುಣರಾಗ' ಚಿತ್ರದಲ್ಲಿ ದೊಡ್ಡರಂಗೇಗೌಡರು ಬರೆದ 'ನಾನೊಂದು ತೀರ.... ನೀನೊಂದು ತೀರ' ಹಾಡಿನ ಅರ್ಥಕ್ಕೆ ತಕ್ಕಂತೆ ಇಡೀ ಚಿತ್ರರಂಗವೇ ಒಂದೆಡೆ ಇದ್ದರೆ ಜಯರಾಮ್ ಮಾತ್ರ ಇನ್ನೊಂದೆಡೆ ಇರುತ್ತಿದ್ದರು. ಇವತ್ತು ಸಿನಿಮಾದವರು ಒಂದೇ ಒಂದು ರಾಜ್ಯ ಪ್ರಶಸ್ತಿಯನ್ನು ಪಡೆದರೆ ಸಾಕು ಮಾರನೆ ದಿನವೇ ಸೈಟು ಮಂಜೂರಾತಿಗಾಗಿ ವಿಧಾನಸೌಧದಲ್ಲಿ ಕೈಕಟ್ಟಿನಿಂತಿರುತ್ತಾರೆ. ಆದರೆ ಎಂಟು ರಾಜ್ಯಪ್ರಶಸ್ತಿಗಳನ್ನು ಪಡೆದಿದ್ದ ಜಯರಾಮ್ ಅವರಿಗೆ ಒಂದೇ ಒಂದು ನಿವೇಶನವಾಗಲಿ, ಮತ್ತೊಂದಾಗಲಿ ಸಿಗಲೇ ಇಲ್ಲ, ಯಾಕೆಂದರೆ ನೇರ ನುಡಿಯ ಸ್ವಾಭಿಮಾನಿ ಜಯರಾಮ್ ಯಾರಿಗೂ ಬಕೀಟು ಹಿಡಿಯುವ ಕೆಲಸಕ್ಕೆ ಮುಂದಾಗುತ್ತಿರಲಿಲ್ಲ.

ಇಷ್ಟೆಲ್ಲಾ ಸಾಧನೆ ಮಾಡಿದ್ದ, ಪ್ರಶಸ್ತಿಗಳನ್ನು ಗಳಿಸಿದ್ದ ಜಯರಾಮ್ ಅವರಿಗೆ ಸರ್ಕಾರ ಸೈಟು, ಮನೆ ಕೊಡದಿದ್ದರೆ ಹಾಳಾಗಲಿ, ಅವರ ಆರೋಗ್ಯ ವಿಚಾರಿಸುವಂಥ ಕನಿಷ್ಠ ಮಟ್ಟದ ಕಾಳಜಿಯನ್ನೂ ವಹಿಸಲಿಲ್ಲ, ಬಸವೇಶ್ವರನಗರದ ಇವರ ಮನೆಯ ಬಲಭಾಗದಲ್ಲೇ ನಿರ್ದೇಶಕರ ಸಂಘವಿತ್ತು, ಅದರ ಎಡಕ್ಕೆ ತಿರುಗಿದರೆ ಹರಿಶ್ಚಂದ್ರ ಘಾಟ್ ಸಿಗುತ್ತಿತ್ತು, ಇವೆರಡರ ನಡುವೆಯೇ ಹಲವು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಜಯರಾಮ್‌ರನ್ನು ಯಾವೊಬ್ಬ ಚಿತ್ರರಂಗದ ಗಣ್ಯರೂ ಬಂದು ನೋಡಲಿಲ್ಲವೆಂಬುದೇ ದುರಂತ.

ಸರ್ಕಾರ ಹಾಗೂ ಉದ್ಯಮದ ಇಂತಹ ಉಡಾಫೆ ಪ್ರವೃತ್ತಿಯಿಂದ ಜಯರಾಮ್ ಅವರಿಗೆ ಬೇಸರವಾಗಿದ್ದರೂ ಎಂದೂ ಯಾರ ಮುಂದೆಯೂ ಸಹಾಯಕ್ಕಾಗಿ ಕೈಚಾಚಿದವರಲ್ಲ, ಬದಲಾಗಿ ಅವರೇ ತಮ್ಮ ಸ್ವತಃ ದುಡ್ಡಿನಲ್ಲಿ ಬಸವೇಶ್ವರ ನಗರದಲ್ಲೊಂದು ಕಲ್ಯಾಣ ಮಂಟಪವನ್ನು ಕಟ್ಟಿ ಅದರಿಂದ ಬಂದ ಹಣವನ್ನು ಕಲಾವಿದರ ಶ್ರೇಯೋಭಿವೃದ್ಧಿಗೆ ಖರ್ಚು ಮಾಡುತ್ತಿದ್ದರು.

ತನ್ನ ನಿರ್ದೇಶನದ ವೃತ್ತಿಯನ್ನು ತಮ್ಮ ಮಗ ಸಂದೀಪನ ಹೆಗಲಿಗೆ ಏರಿಸಿ ಆತನನ್ನು ಓರ್ವ ಒಳ್ಳೆಯ ನಿರ್ದೇಶಕನನ್ನಾಗಿಸಬೇಕೆಂಬ ಮಹದಾಸೆ ಜಯರಾಮ್‌ರದ್ದಾಗಿತ್ತು, ಆದರೆ ಕೊನೆಯವರೆಗೂ ಅವರ ಈ ಕನಸು ನನಸಾಗಲೇ ಇಲ್ಲ, ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದ ಕೆ.ವಿ.ಜೆ. ಶನಿವಾರ ಬೆಳಗ್ಗೆ ಈ ಜಗತ್ತಿಗೇ ವಿದಾಯ ಹೇಳಿದರು. 'ಮುದುಡಿದ ತಾವರೆ'ಯನ್ನು ಅರಳಿಸಿದ, 'ಇಬ್ಬನಿ ಕರಗಿಸಿ'ದ್ದ ನಿರ್ದೇಶಕ ಕೆ.ವಿ. ಜಯರಾಮ್‌ರಿಗೆ ಕಂಬನಿಯ ವಿದಾಯ.

■ ಅರುಣ್.ಜಿ



ಪೋಷಕ ನಟರ ಕಾರು-ಬಾರು

ಅದೊಂದು ಕಾಲವಿತ್ತು, ಆಗ ಡಾ. ರಾಜ್‌ಕುಮಾರ್ ಅವರ ಕಾಲ್‌ಶೀಟ್‌ಅನ್ನು ಪಡೆಯುವ ಮೊದಲು ನಿರ್ಮಾಪಕರು ಪೋಷಕ ನಟರಾದ ನರಸಿಂಹರಾಜು ಮತ್ತು ಬಾಲಣ್ಣನವರ ಕಾಲ್‌ಶೀಟ್‌ಅನ್ನು ಪಡೆಯುತ್ತಿದ್ದರು. ಅಂದರೆ ಅಂದು ಒಂದು ಚಿತ್ರಕ್ಕೆ ಒಬ್ಬ ಹೀರೋ ಎಷ್ಟು ಮುಖ್ಯವೋ, ಪೋಷಕ ನಟರೂ ಅದಕ್ಕೆ ಅಷ್ಟೇ ಮುಖ್ಯವಾಗಿರುತ್ತಿದ್ದರು.

ಅದಾದನಂತರ ಕಾಲ ಬದಲಾಯಿತು. ಪೋಷಕ ನಟರೆಂದರೆ ಅವರು ಆಟಕ್ಕುಂಟು, ಲೆಕ್ಕಕ್ಕಿಲ್ಲ ಎಂಬಂತಾಯಿತು. ಅವರೆಲ್ಲ ಮುಖಕ್ಕೆ ಬಣ್ಣ ಹಚ್ಚಿ ಬೆಳಿಗ್ಗೆ ಶೂಟಿಂಗ್‌ಗೆ ಹಾಜರಾದರೂ ಅವರನ್ನು ಕ್ಯಾರೇ ಎಂದು ಕೇಳುವವರೇ ಇರುತ್ತಿರಲಿಲ್ಲ, ಅಂದರೆ ಹೀರೋ ಇದ್ದ ಮೇಲೆ ಇವರು ಇದ್ದರೆಷ್ಟು ಬಿಟ್ಟರೆಷ್ಟು ಎಂಬ ಭಾವನೆ ಗಾಂಧಿನಗರದಲ್ಲಿ ಮನೆ ಮಾಡಿತ್ತು, ಆದರೆ ಕಾಲ ಈಗ ಮತ್ತೆ ಬದಲಾಗಿದೆ. ಈಗ ಮತ್ತೆ ಪೋಷಕ ನಟ-ನಟಿಯರು ಬೇಡಿಕೆ ಪಡೆದಿದ್ದಾರೆ. ಅಷ್ಟೇ ಅಲ್ಲ, ಹಲವರು ನಾಯಕ ನಟ ನಟಿಯರಿಗಿಂತಲೂ ಹೆಚ್ಚು ಸಂಪಾದಿಸುತ್ತಿದ್ದಾರೆ. ಉದಾಹರಣೆಗೆ ತನ್ನ ವಿಚಿತ್ರ ಹಾವ-ಭಾವ ಮತ್ತು ಡೈಲಾಗ್ ಡೆಲಿವರಿಯಿಂದ ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಹೊಂದಿರುವ ರಂಗಾಯಣ ರಘು ಪಡೆಯುತ್ತಿರುವ ಸಂಭಾವನೆ ಎಷ್ಟು ಗೊತ್ತೆ? ದಿನವೊಂದಕ್ಕೆ ಕೇವಲ ಒಂದೂವರೆ ಲಕ್ಷ ರೂಪಾಯಿ!

ಇವತ್ತಿಗೂ ಸಿನಿಮಾಗಳಲ್ಲಿ ಪೋಷಕ ನಟನಾಗಿ ಮತ್ತು ಟಿವಿಯಲ್ಲಿ ನಾಯಕ ನಟನಾಗಿ ಅಪಾರ ಬೇಡಿಕೆಯಲ್ಲಿರುವ ಅನಂತ್ ನಾಗ್ ಕೂಡ ಇವತ್ತು ಒಂದು ದಿನದ ಕಾಲ್‌ಶೀಟ್‌ಗೆ ಪಡೆಯುತ್ತಿರುವ ಸಂಭಾವನೆ ಒಂದೂವರೆ ಲಕ್ಷ ರೂಪಾಯಿ!

ಇದನ್ನು ಕೆಲವರು 'ದಿನಗೂಲಿ' ಎಂದು ಲೇವಡಿ ಮಾಡಿದರೂ ಇದರಿಂದ ಪೋಷಕ ನಟರಿಗೆ ಬೆಲೆ ಸಿಗುತ್ತಿರುವುದಂತೂ ನಿಜ.

ಅನಂತ್ ನಾಗ್ ಮತ್ತು ರಂಗಾಯಣ ರಘು ದಿನದ ಕಾಲ್‌ಶೀಟ್ ಆಧಾರದ ಮೇಲೆ ಇಷ್ಟೊಂದು ಸಂಭಾವನೆ ಪಡೆಯಲು ಆರಂಭಿಸಿದ ನಂತರ ಹಾಸ್ಯ ನಟರಾದ ಶರಣ್, ಕೋಮಲ್ ಮತ್ತು ದೊಡ್ಡಣ್ಣ ಕೂಡ ಇದೇ ತಂತ್ರವನ್ನು ಅಳವಡಿಸಿಕೊಂಡರು. ಇವರೆಲ್ಲರೂ ಈಗ ದಿನವೊಂದಕ್ಕೆ ಒಂದು ಲಕ್ಷ ರೂಪಾಯಿ ಪಡೆಯುತ್ತಿದ್ದಾರೆ. ಅಷ್ಟೇ ಅಲ್ಲ, ಸಾಫ್ಟ್ ಖಳನಾಯಕ ಅವಿನಾಶ್ ಮತ್ತು ಡೆಡ್ಲಿ ವಿಲನ್ ಶೋಭರಾಜ್ ಕೂಡಾ ಅಷ್ಟೇ ಅಮೌಂಟನ್ನು ದಿನವೊಂದಕ್ಕೆ ಸಂಪಾದಿಸುತ್ತಿದ್ದಾರೆ.

ಇದರಲ್ಲಿ ಮಹಿಳಾ ಕಲಾವಿದೆಯರೂ ಹಿಂದೆ ಬಿದ್ದಿಲ್ಲ, 'ಮುಂಗಾರು ಮಳೆ' ನಂತರ ಸಖತ್ ಬೇಡಿಕೆಯಲ್ಲಿರುವ ಸುಧಾ ಬೆಳವಾಡಿ, ಚಿತ್ರಾ ಶೆಣೈ, ಉಮಾಶ್ರೀ.... ಇವರುಗಳೆಲ್ಲರೂ ಈಗ ಅತ್ಯಂತ ದುಬಾರಿ ಪೋಷಕ ನಟಿಯರಾಗಿದ್ದಾರೆ. ಇವರೆಲ್ಲ ಇವತ್ತು ಇಷ್ಟೊಂದು ಸಂಭಾವನೆ ಪಡೆಯುತ್ತಿರುವುದರಿಂದ ಈಗ ಅವರು ಮೊದಲಿನಂತೆ ಸೆಟ್‌ಗಳಲ್ಲಿ ಅಬ್ಬೆಪಾರಿಗಳಂತೆ ಕೂತಿರಬೇಕಿಲ್ಲ, ಬದಲಾಗಿ ಅವರು ಸೆಟ್‌ಗೆ ಹಾಜರಾಗುತ್ತಿದ್ದಂತೆ ನಿರ್ದೇಶಕರು ಅವರಿಗೆ ರಾಜಮರ್ಯಾದೆ ನೀಡಿ ಹೀರೋ ಮತ್ತು ಹಿರೋಯಿನ್ ಜೊತೆಗಿನ ಅವರ ದೃಶ್ಯಗಳನ್ನು ಬೇಗ ಬೇಗ ಮುಗಿಸಿಬಿಡುತ್ತಿದ್ದಾರೆ. ಈ ಬದಲಾವಣೆಗೆ ಕಾರಣ ಟಿವಿಯ ಮೆಗಾ ಧಾರಾವಾಹಿಗಳು ಎಂದರೆ ತಪ್ಪಾಗಲಾರದು. ಚಿತ್ರವೊಂದಕ್ಕೆ ಹತ್ತಾರು ದಿನ ದುಡಿದು ಕಡಿಮೆ ಸಂಭಾವನೆ ಪಡೆಯುವ ಬದಲಾಗಿ ಟಿವಿ ಧಾರಾವಾಹಿಗಳು ತರುವ ಹೆಚ್ಚಿನ ಸಂಭಾವನೆ ಮುಖ್ಯವಾಗಿ ಕಂಡಿದ್ದರಿಂದ ಇವರಲ್ಲಿ ಬಹಳಷ್ಟು ಜನ ಟಿವಿಯತ್ತ ಹೊರಳಿದರು. ಅವರಲ್ಲಿ ಬಹಳಷ್ಟು ಜನ ತಿಂಗಳಿಗೆ 20-25 ಲಕ್ಷ ದುಡಿಯಲಾರಂಭಿಸಿದರು. ಆಗ ಅವರನ್ನು ಸಿನಿಮಾಗೆ ಕರೆಯಬೇಕೆಂದರೆ ಅವರ ದುಬಾರಿ ರೇಟನ್ನು ಸಿನಿಮಾ ನಿರ್ಮಾಪಕರು ಚೆಲ್ಲ ಬೇಕಾಯಿತು. ಯಾಕೆಂದರೆ ಸಿನಿಮಾವೊಂದಕ್ಕೆ ಬರಿ ನಾಯಕ, ನಾಯಕಿ ಇದ್ದರೆ ಸಾಲುವುದಿಲ್ಲ, ಅದಕ್ಕೆ ಪೋಷಕ ನಟನಟಿಯರು ಬೇಕೇಬೇಕು.

ಇಲ್ಲೊಂದು ವಿಪರ್ಯಾಸವನ್ನು ಗಮನಿಸಿ. ಇವತ್ತು ಚಿತ್ರವೊಂದರ ನಾಯಕಿ ಅದಕ್ಕೊಂದು 40-45 ದಿನಗಳ ಕಾಲ ಮರ ಸುತ್ತಿ, ಡ್ಯಾನ್ಸ್ ಮಾಡಿ, ಕಣ್ಣೀರಿಟ್ಟರೂ ಆಕೆ ಸಂಭಾವನೆಯಾಗಿ ಕೊನೆಗೆ ಪಡೆಯುವುದು ಹೆಚ್ಚೆಂದರೆ 26-30 ಲಕ್ಷ. ಆದರೆ ಅದೇ ಅವಧಿಯಲ್ಲಿ ಕನಿಷ್ಠ ನಾಲ್ಕೈದು ಸಿನಿಮಾಗಳಲ್ಲಿ ದಿನದ ಆಧಾರದ ಮೇಲೆ ನಟಿಸುವ ಪೋಷಕ ನಟ ನಟಿ ಪಡೆಯುವುದು ಅದಕ್ಕಿಂತಲೂ ಹೆಚ್ಚು ಹಣವನ್ನು! ■

ಇದೊಂಥರಾ ತಮಾಷೆಯಲ್ಲವೇ!

ಮಕ್ಮಲ್ ಟೋಪಿ!

ಸಿನಿ Bits

ಇತ್ತೀಚೆಗಷ್ಟೇ 'ಮನಸುಗಳ ಮಾತು ಮಧುರ' ಎಂಬ ಮಾರುದ್ದ ಹೆಸರಿನ ಸಿನಿಮಾ ಬಂದಿತ್ತಲ್ಲಾ... ಈ ಸಿನಿಮಾ ಬಾಕ್ಸಾಫೀಸಿನಲ್ಲಿ ಮಧುರವಾದ ಸದ್ದು ಮಾಡದಿದ್ದರೂ ಅದರ ನಿರ್ದೇಶಕ ಮಂಜು ಮಸ್ಕಲ್‌ಮಟ್ಟಿ ಎಂಬಾತ ಮಾತ್ರ ಇವತ್ತಿಗೂ ಪುಕ್ಕಟೆ ಪ್ರಚಾರ ಪಡೆಯುತ್ತಾ ಗಾಂಧಿನಗರದಲ್ಲಿ ಗದ್ದಲ ಮಾಡುತ್ತಿದ್ದಾನೆ.




"ಮನಸುಗಳ ಮಾತು ಮಧುರ ಚಿತ್ರ ಮುಂಗಾರು ಮಳೆಗಿಂತ ಸೂಪರ್ ಹಿಟ್ ಆಗುತ್ತೆ" ಅಂತೆಲ್ಲಾ ಹೇಳಿ ನಿರ್ಮಾಪಕ ಕೆಂಗೇರಿ ಶ್ರೀನಿವಾಸ್‌ರ ತಲೆ ಸವರಿದ್ದ ಈ ಮಲ್ಕಲ್‌ಮಟ್ಟಿ, ಈಗ ಶ್ರೀನಿವಾಸ್ ಈತನ ಹೆಸರೆತ್ತಿದರೆ ಸಾಕು ಲಟಲಟನೆ ಲಟಿಕೆ ಮುರಿಯುತ್ತಿದ್ದಾರೆ. ಹಾಗೆಯೇ "ನಿನ್ನನ್ನು ಕಾಮಿಡಿ ಗಣೇಶನಿಗಿಂತ ದೊಡ್ಡ ಹೀರೋ ಮಾಡುತ್ತೇನೆ" ಎಂದು ಮಲ್ಕಲ್‌ಮಟ್ಟಿ ಹೇಳಿದ್ದನ್ನೇ ನಂಬಿ ಆತನ ಕೈಗೆ ಅಷ್ಟಿಷ್ಟು ದುಡ್ಡು ನೀಡಿದ್ದ 'ಮಾತು ಮಧುರ' ಸಿನಿಮಾದ ನಾಯಕ ನಟ ಆನಂದ್ ಇವತ್ತು ಹ್ಯಾಪ್‌ಮೋರೆ ಹಾಕಿಕೊಂಡು ಮನೆಯಲ್ಲಿ ಕುಳಿತಿದ್ದಾನೆ.

ಆದರೆ ಇಂತಹದ್ದರ ಬಗ್ಗೆ ತಲೆಕೆಡಿಸಿಕೊಳ್ಳದ ಮಸ್ಕಲ್‌ಮಟ್ಟಿ ಮಾತ್ರ ಈಗ "ಗೋಲ್ಡನ್ ಸ್ಟಾರ್ ಗಣೇಶ್‌ನ ತಮ್ಮನನ್ನು ಹೀರೋ ಮಾಡುತ್ತೇನೆ... ನನ್ನ ಈ ಸಿನಿಮಾಗೆ ಗಣಿ ಧಣಿ ಜನಾರ್ದನ ರೆಡ್ಡಿಗಾರು ಹಣ ಹೂಡುತ್ತಾರೆ" ಎಂದೆಲ್ಲ ಹೇಳಿಕೊಂಡು ತಿರುಗುತ್ತಿದ್ದಾನೆ.

ಹೇಗಿದೆ ಈ ಮಸ್ಕಲ್‌ಮಟ್ಟಿಯ ಮಕ್ಮಲ್ ಟೋಪಿ!!

ಎತ್ತಂಗಡಿ ಶರಣ



ಶರಣ್ ಕಬ್ಬೂರು ಎಂಬಾತ ಈ ಹಿಂದೆ 'ಅಂಬೇಡ್ಕರ್' ಮತ್ತು 'ಕುಳ್ಳರ ಲೋಕ'ದಂಥ ಸಿನಿಮಾಗಳನ್ನು ನಿರ್ದೇಶಿಸಿದ್ದ. ಆನಂತರ ಆದಿ ಲೋಕೇಶ್‌ನನ್ನು ಹೀರೋ ಮಾಡಿ 'ಪೂಜಾರಿ' ಎಂಬ ಸಿನಿಮಾವನ್ನು ಮಾಡಿದ್ದ. ಆ ಸಿನಿಮಾ ಒಂದೇ ಒಂದು ವಾರ ಓಡದಿದ್ದರೂ 'ಪೂಜಾರಿ'ಯಿಂದ ಸಾಕಷ್ಟು 'ಪ್ರಸಾದ' ಪಡೆದ ಈತ ಕೈತುಂಬ ಕಾಸು ಮಾಡಿಕೊಂಡಿದ್ದ. ಇತ್ತೀಚೆಗೆ ಈತ ನಿರ್ದೇಶಿಸಿದ 'ಹನಿ ಹನಿ'ಯಲ್ಲಿ ಪೂಜಾ ಗಾಂಧಿ ಇದ್ದರೂ ಸಿನಿಮಾ ಚಿತ್ರಮಂದಿರಗಳಿಂದ ಗಾಯಬ್ ಆಗಿತ್ತು.

ಇಷ್ಟೆಲ್ಲ ಈತನ ಬಗ್ಗೆ ಮುನ್ನುಡಿಯಾಗಿ ಬರೆಯುವುದಕ್ಕೆ ಕಾರಣವೊಂದಿದೆ. ಅದೇನೆಂದರೆ ಶರಣ್ ಕಬ್ಬೂರು ಎಂಬ ಈ ಮಹಾನ್ ನಿರ್ದೇಶಕನನ್ನು ಮೊನ್ನೆ 'ಓ ಮನಸೇ' ಮತ್ತು 'ಚಾಮರಾಜಪೇಟೆ' ಎಂಬೆರಡು ಚಿತ್ರಗಳಿಂದ ಎತ್ತಂಗಡಿ ಮಾಡಲಾಗಿದೆ. ಇದರಿಂದ ಪಾಪ ಶರಣ್‌ಗೆ ಶ್ಯಾನೆ ಬೇಜಾರಾಗಿದೆಯಂತೆ. ಆದರೆ ತಾವು ಬಚಾವ್ ಆದೆವು ಎಂಬ ಆನಂದದಲ್ಲಿ ನಿರ್ಮಾಪಕರಿದ್ದಾರಂತೆ.


ಕ್ವಾಟ್ರಸ್ ಕಥೆ!



'ಸೈನೆಡ್' ನಿರ್ದೇಶಕ ಎ.ಎಂ.ಆರ್ ರಮೇಶ್ ಮೊನ್ನೆಮೊನ್ನೆ ತಾನೆ "ಹಾಲಿವುಡ್ ರೇಂಜಿಗೆ ಸಿನಿಮಾ ಮಾಡಿದ್ದೇನೆ" ಎಂದು ಹೇಳಿ 'ಮಿಂಚಿನ ಓಟ' ಎಂಬ ಸಿನಿಮಾ ಮಾಡಿ ಜನರನ್ನು ಥಿಯೇಟರ್‌ಗಳಿಂದ ಮಿಂಚಿನ ವೇಗದಲ್ಲಿ ಓಡಿಸಿದ್ದರು. ಆದರೂ ಇದರಿಂದ ವಿಚಲಿತರಾಗದ ರಮೇಶ್ "ಇನ್ನೊಂದು ಲೈವ್‌ಲಿ ಸಬ್ಜೆಕ್ಟೊಂದನ್ನು ಆಯ್ಕೆ ಮಾಡಿಕೊಂಡು ಸಿನಿಮಾ ಮಾಡುತ್ತಿದ್ದೀನಿ" ಎನ್ನುತ್ತಿದ್ದಾರೆ.

ಬೆಂಗಳೂರಿನ ಪೊಲೀಸ್ ಕ್ವಾಟ್ರಸ್‌ನಲ್ಲಿ ನಡೆದ ನೈಜ ಘಟನೆಯೊಂದನ್ನು ಆಧರಿಸಿರುವ ಈ ಸಿನಿಮಾ ಇಷ್ಟರಲ್ಲೇ ಸೆಟ್ಟೇರುತ್ತದಂತೆ. 'ಓಟ'ದಲ್ಲಿ ಮಿಂಚದ ರಮೇಶ್ ಕ್ವಾಟ್ರಸ್‌ನಲ್ಲಾದರೂ ಕಾಲೂರುವಂತಾಗಲಿ...

ಸತ್ಯನ 'ಬುಗುರಿ'



ಮೊನ್ನೆಮೊನ್ನೆ ತಾನೆ ಬಿಡುಗಡೆಯಾದ 'ಹೃದಯಾ ಐ ಮಿಸ್ ಯೂ' ಎಂಬ ಚಿತ್ರ ಎರಡನೇ ದಿನಕ್ಕೆ 'ಐ ಮಿಸ್ ಯೂ' ಎನ್ನುತ್ತಾ ಥಿಯೇಟರಿನಿಂದ ಜಾಗ ಖಾಲಿ ಮಾಡಿತ್ತು. ಆದರೆ ಅದರ ನಿರ್ದೇಶಕ ಸತ್ಯ ಮಾತ್ರ ಈಗ 'ಬುಗುರಿ' ಆಡಲು ಶುರು ಮಾಡಿದ್ದಾನೆ.

ಇನ್ನೂ ಇಪ್ಪತ್ತರ ಆಜುಬಾಜಿನ ವಯಸ್ಸಿನ ಈ ಸತ್ಯನನ್ನು ನಂಬಿ ಈಗಾಗಲೇ 'ಹೃದಯಾ ಐ ಮಿಸ್ ಯೂ' ಚಿತ್ರದ ನಿರ್ಮಾಪಕ ತಮ್ಮ ಜೇಬನ್ನು 'ಮಿಸ್' ಮಾಡಿಕೊಂಡಿದ್ದಾರೆ. ಆದರೂ ಎಂ. ಗೋವಿಂದರಾಜು ಎಂಬ ನಿರ್ಮಾಪಕ ತಮ್ಮ ಮಗನನ್ನು ಹೀರೋ ಮಾಡಲು 'ಬುಗುರಿ' ಮೇಲೆ ಮೂರು ಕೋಟಿ ರೂಪಾಯಿಗಳನ್ನು ಸುರಿಯುತ್ತಿದ್ದಾರಂತೆ.

'ಸರ್ವಾಂತರ್ಯಾಮಿ' ಸಹೋದರರು!



ಸಹೋದರ ದಿನಕರ್‌ನ ನಿರ್ದೇಶನ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಲು ಅವರ ಅಣ್ಣ ನಟ ದರ್ಶನ್ ಮೂರು ವರ್ಷಗಳನ್ನು ತೆಗೆದುಕೊಂಡರೆ?! ಈ ಪ್ರಶ್ನೆ ಯಾಕೆಂದರೆ ದಿನಕರ್ ನಿರ್ದೇಶನದ 'ಜೊತೆಜೊತೆಯಲಿ' ಮತ್ತು 'ನವಗ್ರಹ' ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಮಾಡಿದ್ದ ದರ್ಶನ್ ಈಗ ತಮ್ಮನ ನಿರ್ದೇಶನದ 'ಸರ್ವಾಂತರ್ಯಾಮಿ' ಚಿತ್ರದಲ್ಲಿ ಪೂರ್ಣಪ್ರಮಾಣದ ನಾಯಕನಾಗಿದ್ದಾರೆ.

ಈ ಹಿಂದೆ ಅಣ್ಣ ಅನಂತ್‌ನಾಗ್‌ಗಾಗಿ ತಮ್ಮ ಶಂಕರ್‌ನಾಗ್ ಸಿನಿಮಾವೊಂದನ್ನು ನಿರ್ದೇಶಿಸಿದ್ದರು. ಅನಂತರ ಯಾವ ಅಣ್ಣತಮ್ಮಂದಿರೂ ಅಂತಹ ಪ್ರಯತ್ನಕ್ಕೆ ಕೈಹಾಕಿರಲಿಲ್ಲ. ಆದರೆ ಈಗ ದರ್ಶನ್-ದಿನಕರ್ ನಾಗ್ ಬ್ರದರ್ಸ್ ಹಾದಿ ಹಿಡಿದಿದ್ದಾರೆ.

ಅರಳಿದ ತಾವರೆ ಮುದುಡಿದೆ..!





ಇದು ಕನ್ನಡ ಚಿತ್ರರಂಗದ ಪೆದ್ದುತನವೋ ಅಥವಾ ದೌರ್ಭಾಗ್ಯವೇ ಗೊತ್ತಿಲ್ಲ. ಆದರೆ ಕಳೆದ ವರ್ಷ ಕನ್ನಡ ಚಿತ್ರರಂಗಕ್ಕೆ ಹರಿದುಬಂದಿದ್ದ ಪ್ರತಿಭಾವಂತ ಅಪ್ಪಟ ಕನ್ನಡತಿಯರು ಇವತ್ತು ಕೈಯಲ್ಲಿ ಕೆಲಸವಿಲ್ಲದೆ ಕೂರುವಂತಾರಾಗಿರುವುದಂತೂ ಸತ್ಯ.

ಚಿತ್ರರಂಗವೂ ಎಷ್ಟು ಪುರುಷ ಪ್ರಧಾನ ವ್ಯವಸ್ಥೆ ನೋಡಿ. ಒಂದು ಚಿತ್ರ ಹಿಟ್ ಆದರೆ ಸಾಕು ಅದರ ಹೀರೋಗೆ ಅವಕಾಶಗಳ ಸುರಿಮಳೆ, ಸಂಭಾವನೆಯಲ್ಲಿ ಇದ್ದಕ್ಕಿದ್ದಂತೆ ಏರಿಕೆ, ಕನಿಷ್ಠ ಮೂರು ವರ್ಷ ಬಿಡುವೂ ತೆಗೆದುಕೊಳ್ಳಲಾಗದಂತೆ ಅವರು ಬುಕ್ ಆಗಿಬಿಡುತ್ತಾರೆ. ಆದರೆ ಹಿಟ್ ಆದ ಚಿತ್ರದ ಹೀರೋಯಿನ್ ಮಾತ್ರ ಇನ್ನೂ ಬಹಳಷ್ಟು ಕಾಲ ತಿಪ್ಪರಲಾಗ ಹಾಕಬೇಕಾಗುತ್ತದೆ.

ಉದಾಹರಣೆಗೆ 'ದುನಿಯಾ' ಚಿತ್ರವನ್ನೇ ತೆಗೆದುಕೊಳ್ಳಿ. ಅದರ ಹೀರೋ ಸಿಕ್ಕಾಪಟ್ಟೆ ಅವಕಾಶ ಪಡೆದ, ಹಣವನ್ನೂ ಕಂಡ, ರಾಜ್ಯ ಪ್ರಶಸ್ತಿಯನ್ನೂ ತನ್ನದಾಗಿಸಿಕೊಂಡ. ಆದರೆ ಅದೇ ಚಿತ್ರದಲ್ಲಿ ಎಲ್ಲರ ಗಮನ ಸೆಳೆದಿದ್ದ ಹೀರೋಯಿನ್ ರಶ್ಮಿಗೆ ಸಿಕ್ಕಿದ್ದು ಒಂದೆರಡು ಸಿನಿಮಾಗಳಷ್ಟೇ.

ಆಗರ್ಭ ಶ್ರೀಮಂತ ಮಾಂಡ್ರೆ ಮನೆತನದಲ್ಲಿ ಹುಟ್ಟಿ ಚಿತ್ರರಂಗಕ್ಕೆ ಬಂದ ಶರ್ಮಿಳಾ ಮಾಂಡ್ರೆಯ ಕತೆ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಆಕೆಗೆಂದು ಮಾಂಡ್ರೆ ಕುಟುಂಬ ಸಿಕ್ಕಾಪಟ್ಟೆ ಹಣ ಸುರಿದು 'ಸಜನಿ' ಎಂಬ ಚಿತ್ರವನ್ನು ನಿರ್ಮಿಸಿದ್ದರೂ, ಅದರಲ್ಲಿ ಶರ್ಮಿಳಾ ತುಂಡು ಲಂಗ ಧರಿಸಿ ಕುಣಿದಿದ್ದರೂ ಆಕೆಯನ್ನು ಅವಕಾಶಗಳು ಹುಡುಕಿಕೊಂಡೇನು ಬರಲಿಲ್ಲ, ಬದಲಾಗಿ ಆಕೆ ಆ ಚಿತ್ರದ ನಂತರ ಕಾಣಿಸಿಕೊಂಡಿದ್ದು 'ಕೃಷ್ಣ' ಚಿತ್ರದಲ್ಲಿ, ಅದರಲ್ಲೂ ಗಣೇಶನ ಎರಡನೇ ನಾಯಕಿಯಾಗಿ. ಅದೂ ಸಾಲದೆಂಬಂತೆ 'ಈ ಬಂಧನ' ಚಿತ್ರದಲ್ಲಿ ಆಕೆಗೆ ದಕ್ಕಿದ್ದು ಒಂದು ಹಾಡು ಮಾತ್ರ.

ಕಳೆದ ವರ್ಷ 'ದುನಿಯಾ' ಸೂರಿ ನಿರ್ದೇಶನದ 'ಇಂತಿ ನಿನ್ನ ಪ್ರೀತಿಯ' ಬಾಕ್ಸಾಫೀಸಿನಲ್ಲಿ ಮುಗ್ಗರಿಸಿತ್ತು. ಆದರೂ ಅದರ ನಾಯಕ ಶ್ರೀನಗರ ಕಿಟ್ಟಿಗೆ ಹಲವು ಅವಕಾಶಗಳು ಸಿಕ್ಕಿವೆ. ಆದರೆ ಅದರ ನಾಯಕಿ ಸೋನು ಮಾತ್ರ ಯಾವ ಅವಕಾಶವಿಲ್ಲದೆ ಇವತ್ತು ಮನೆಯಲ್ಲೇ ಕುಳಿತಿದ್ದಾಳೆ.

ಅದೇರೀತಿ ಹರಿಪ್ರಿಯಾಳ ಕತೆ ಕೂಡ. ಆರಂಭದಲ್ಲಿ ಈಕೆಯ ಸೌಂದರ್ಯವನ್ನು ನೋಡಿ ಈಕೆ ರಮ್ಯಾಳಿಗೆ ಪ್ರತಿಸ್ಪರ್ಧಿಯಾಗಬಹುದು ಎಂದು ಗಾಂಧಿನಗರದವರು ಭವಿಷ್ಯ ನುಡಿದಿದ್ದರು. ಪತ್ರಕರ್ತರು ಕೂಡ ಇವಳ ಬಗ್ಗೆ ಪೇಜುಗಟ್ಟಲೆ ಬರೆದರು. ಆದರೆ ಹರಿಪ್ರಿಯಾ ಇವತ್ತು ಟಿವಿ ಕಾರ್ಯಕ್ರಮಗಳಲ್ಲಿ ಅತಿಥಿಯಾಗಿ ಕಾಣಿಸಿಕೊಳ್ಳುತ್ತಿದ್ದಾಳೆಯೇ ಹೊರತು ಆಕೆಗೆ ಸಿನಿಮಾಗಳಲ್ಲಿ ಅವಕಾಶಗಳು ಸಿಗುತ್ತಿಲ್ಲ.

'ಅವ್ವ' ಚಿತ್ರದಲ್ಲಿ ಬೋಲ್ಡ್ ಆಗಿ ನಟಿಸಿ ಎಲ್ಲರನ್ನು ಬೆಚ್ಚಿಬೀಳಿಸಿದವಳು ಕೃಷ್ಣವರ್ಣ ಸುಂದರಿ ಸ್ಮಿತಾ. ಆಕೆಗೆ ತೆಳ್ಳಗೆ ಬಳುಕುವ ಮೈಮಾಟವಿಲ್ಲದಿದ್ದರೂ ಆಕೆಯಲ್ಲಿ ಸೌಂದರ್ಯ ಮತ್ತು ಪ್ರತಿಭೆಯಂತೂ ಇದ್ದೇ ಇದೆ. ಆದರೂ ಆಕೆ ಇವತ್ತು "ನನ್ನ ಕೈಯಲ್ಲಿ ಸದ್ಯಕ್ಕೆ ಯಾವ ಸಿನಿಮಾನೂ ಇಲ್ಲ, ನಾನು ಮನೆಯಲ್ಲಿ ಫ್ರೀಯಾಗಿದ್ದೇನೆ" ಎಂದು ಹೇಳುತ್ತಿದ್ದಾಳೆ. ಇದೇ ಗುಂಪಿಗೆ ಸೇರುವ ಮತ್ತೊಬ್ಬ ನಟಿ ಶುಭಾ ಪೂಂಜಾ. ಆಕೆ ವಿಜಯ್ ಜೊತೆ 'ಚಂಡ' ಚಿತ್ರದಲ್ಲಿ ನಟಿಸಿದ ನಂತರ ಅನೇಕ ಅವಕಾಶಗಳು ಸಿಗಬಹುದು ಎಂಬ ನಿರೀಕ್ಷೆಯಲ್ಲಿದ್ದಳು. ಆದರೆ ಈಗ ಆಕೆಗೆ ವಿಜಯ್ ಜೊತೆ ಅವಕಾಶಗಳು ದೊರಕುತ್ತಿವೆಯೇ ವಿನಃ ಬೇರೆ ನಾಯಕ ನಟರ ಜೊತೆ ನಟಿಸಲು ಬುಲಾವ್ ಬರುತ್ತಿಲ್ಲ. 'ಮೊಗ್ಗಿನ ಮನಸ್ಸು' ಚಿತ್ರದ ಯಶಸ್ಸಿನ ನಂತರವೂ ಆಕೆಯ ಭಾಗ್ಯದ ಬಾಗಿಲು ತೆರೆದುಕೊಂಡಿಲ್ಲ.

ಅಂದರೆ ಕನ್ನಡತಿಯರು ಪ್ರತಿಭೆ ಮತ್ತು ಸೌಂದರ್ಯವನ್ನು ಹೊಂದಿದ್ದರೂ ಅವರೆಲ್ಲ ಒಂದೆರಡು ಚಿತ್ರಗಳ ನಂತರ ಮೂಲೆಗುಂಪಾಗುತ್ತಿದ್ದಾರೆ. ಇದಕ್ಕೆ ಕಾರಣ ನಿರ್ದೇಶಕರೋ, ನಿರ್ಮಾಪಕರೋ ಅಥವಾ ನಾಯಕನಟರೋ ಗೊತ್ತಿಲ್ಲ. ಆದರೆ ನಮ್ಮ ಮನೆಯ ಅಂಗಳದಲ್ಲಿ ಅರಳಿದ ಹೂವುಗಳು ನಮ್ಮ ಕಣ್ಣೆದುರಿಗೇ ಬಾಡಿಹೋಗುತ್ತಿರುವುದನ್ನು ನೋಡಲು ಬೇಸರವಾಗುತ್ತದೆ. ಈ ಮುದುಡಿದ ತಾವರೆಗಳು ಮತ್ತೆ ಅರಳುವಂತಾಗಲಿ.....

■ ಶೆಣೈ







ಭಾರ್ಗವಿ 'ತಾಯಿ'

'ಶಂಕರಾಭರಣಂ' ಖ್ಯಾತಿಯ ಮಂಜು ಭಾರ್ಗವಿ ಎಂಬ ಅಂದಗಾಲತ್ತಿಲ್ ನಟಿ ಈಗ ತಾಯಿಯಾಗುತ್ತಿದ್ದಾರೆ.

ಇದೇನಪ್ಪಾ ಈಯಮ್ಮ ಈಗ ತಾಯಿಯಾಗ್ತಿದ್ದಾರಾ ಎಂದು ಹುಬ್ಬೇರಿಸಬೇಡಿ. ಅಸಲಿಗೆ ಇವರು ಆಗಲೇ ಜಿ.ವಿ. ಅಯ್ಯರ್ ನಿರ್ದೇಶನದಲ್ಲಿ 'ಶಕುಂತಲಾ' ಎಂಬ ಸಿನಿಮಾವನ್ನು ನಿರ್ಮಿಸಲು ಮುಂದಾಗಿದ್ದರು. ಆದರೆ ಅಯ್ಯರ್‌ರ ಅವಕೃಪೆಯಿಂದ 'ಶಕುಂತಲಾ' ಪೂರ್ಣಗೊಳ್ಳಲೇ ಇಲ್ಲ. ಇದಾದ ಮೇಲೆ ನಟನೆಯಿಂದ ದೂರವೇ ಉಳಿದಿದ್ದ ಮಂಜು ಭಾರ್ಗವಿ ಈ ಬಾರಿ ಪಿ.ಎನ್. ಸತ್ಯಾ ನಿರ್ದೇಶನದ ಶಿವರಾಜ್ ಕುಮಾರ್ ಅಭಿನಯದ 'ಹೊಡಿ ಮಗ' ಚಿತ್ರದಲ್ಲಿ ಶಿವಣ್ಣನ ತಾಯಿಯಾಗಿ ಅಭಿನಯಿಸುತ್ತಿದ್ದಾರೆ.

ಈರಣ್ಣನಿಗೆ ಎಂಭತ್ತು!



ಆಕಾಶವಾಣಿ ಈರಣ್ಣ ಅಲಿಯಾಸ್ ಎ.ಎಸ್. ಮೂರ್ತಿ ಎಂಬ ಪುರಾತನ ಪತ್ರಕರ್ತರಿಗೆ ಈಗ ಎಂಭತ್ತು ವರ್ಷ ತುಂಬಿದೆ. ರಂಗಭೂಮಿ ಕಲಾವಿದರಾಗಿ, ಪತ್ರಕರ್ತರಾಗಿ, ಬರಹಗಾರರಾಗಿ, ಅಷ್ಟೇ ಅಲ್ಲದೆ ತಮ್ಮದೇ ಕಲಾಶಾಲೆಯ ಮೇಷ್ಟ್ರು ಆಗಿರುವ ಮೂರ್ತಿಯವರು ತಮ್ಮ 80ನೇ ಹ್ಯಾಪಿ ಬರ್ತ್‌ಡೇಯನ್ನು ಎಂಟು ವರ್ಷದ ಪೋರನಂತೆ ಖುಷ್‌ಖುಷಿಯಾಗಿ ಆಚರಿಸಿಕೊಂಡಿದ್ದಾರೆ.

ಎಂಭತ್ತು ವರ್ಷದ ಇಳೀ ವಯಸ್ಸಿನಲ್ಲೂ ಹದಿನೆಂಟರ ಹುಡುಗನಂತೆ ಎಲ್ಲಾ ಸಿನಿಮಾಗಳಿಗೆ, ಪತ್ರಿಕಾ ಗೋಷ್ಠಿಗಳಿಗೆ ಮಿಂಚಿನಂತೆ ಹಾಜರಾಗಿ ಹವಾ ಎಬ್ಬಿಸುವ ಈರಣ್ಣ ಇನ್ನಷ್ಟು ಕಾಲ ಹೀಗೇ ಇರಲಿ. ■

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial ...